ಜನಶಕ್ತಿ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 7 ಸಂಚಿಕೆ 05
ಫೆಬ್ರವರಿ 03, 2013

ಪುಟ 16 ರೂ. 10/-





ಬಿಜೆಪಿ ದುರಾಡಳಿತ ಮತ್ತು ದುಡಿವ ವರ್ಗದ ದುರ್ಬರ ಸ್ಥಿತಿ

ಜೈಪುರದಲ್ಲಿ ಕಾಂಗ್ರೆಸ್ ಘೋಷಣೆ : ಮಾತು-ಕೃತಿಗಳ ನಡುವೆ ಅಂತರ



ಲಜ್ಜೆಗೇಡಿ ಸರ್ಕಾರ ಅರಾಜಕತೆ ಸೃಷ್ಟಿಯಲ್ಲಿ ದುಷ್ಟ ಯೋಜನೆಗಳು



"ಶ್ರಮಜೀವಿಗಳೇ ನಿಮಗೆ ತಲೆ ಬಾಗುವೆ" ಎಂದ ವಿವೇಕಾನಂದ



ಬೆಳ್ತಂಗಡಿ : ನಿವೇಶನದ ಹೋರಾಟಗಾರರ ಮೇಲೆ ಕೇಸರಿ ಪಡೆಯ ಆಕ್ರಮಣ



ಏನು ನಡೆದಿದೆ ಇಲ್ಲಿ ವಿದ್ಯುತ್ ಸಮಸ್ಯೆ ಹೆಸರಿನಲ್ಲಿ ?

"ಮಡೆಸ್ನಾನ-ಪಂಕ್ತಿಬೇಧ ಪದ್ಧತಿ ಎಲ್ಲರೂ ವಿರೋಧಿಸಬೇಕು"

ಸಂದರ್ಶನದಲ್ಲಿ ಎಂ.ಎ.ಬೇಬಿ

'ಮಡೆಸ್ನಾನ, ಪಂಕ್ತಿಬೇಧದ ಪದ್ಧತಿಗಳು ಎಲ್ಲರೂ ವಿರೋಧಿಸಬೇಕಾದ ಆಚರಣೆಗಳು'

ಸಂದರ್ಶನದಲ್ಲಿ ಎಂ.ಎ.ಬೇಬಿ

ಸಿಪಿಐ(ಎಂ) ಪಕ್ಷದ ಪೊಲಿಟ್ ಬ್ಯೂರೋ ಸದಸ್ಯರೂ, ಕೇರಳದ ಮಾಜಿ ಶಿಕ್ಷಣ ಸಚಿವರಾದ ಕಾಂ. ಎಂ.ಎ.ಬೇಬಿಯವರು ಡಿಸೆಂಬರ್ 27ರಂದು ಉಡುಪಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿ ಬೆಂಗಳೂರಿಗೆ ಬಂದಿದ್ದರು. ಸಾಮಾಜಿಕ, ಸಾಂಸ್ಕೃತಿಕ ರಂಗದಲ್ಲಿ ಅನುಭವವಿರುವ ಅವರೊಂದಿಗೆ ಈ ನಡುವೆ ಜನಶಕ್ತಿ ನಡೆಸಿದ ಸಂದರ್ಶನ

ಸಂದರ್ಶನಕಾರರು:
ನಿತ್ಯಾನಂದಸ್ವಾಮಿ
ಗುರುಶಾಂತ್ ಎಸ್.ವೈ.

ಜನಶಕ್ತಿ: ಜಾತಿ ತಾರತಮ್ಯ, ಮಡೆಸ್ನಾನ, ಪಂಕ್ತಿಬೇಧದಂತಹ ಪ್ರಶ್ನೆಗಳನ್ನು ಸಿಪಿಐ(ಎಂ) ಪಕ್ಷವು ಕೈಗೆತ್ತಿಕೊಂಡು ಹೋರಾಟ ನಡೆಸುತ್ತಿದೆ.ಪ್ರಸಕ್ತ ವಾಗಿ ಇದರ ಮಹತ್ವವೇನು? ಇದು ವರ್ಗ ಹೋರಾಟದೊಂದಿಗೆ ಹೇಗೆ ಮಿಳಿತವಾಗಿದೆ?

ಕಾಂ.ಎಂ.ಎ.ಬೇಬಿ: ಭಾರತೀಯ ಇತಿಹಾಸವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿರುವ ಖ್ಯಾತ ಇತಿಹಾಸ ಸಂಶೋಧಕರಾದ ಡಿ.ಡಿ.ಕೋಸಾಂಬಿಯವರು 'ವರ್ಗ ವೈವಿಧ್ಯತೆಯಿರುವ ಭಾರತದಲ್ಲಿ ಜಾತಿಯು ಸಹ ಬಹಳ ಪ್ರಧಾನವಾದ ಪಾತ್ರವನ್ನು ವಹಿಸುತ್ತದೆ' ಎಂಬುದನ್ನು ಗುರುತಿಸಿದ್ದಾರೆ. ವರ್ಗ ಹಾಗೂ ಜಾತಿ ಪ್ರಶ್ನೆಗಳನ್ನು ಒಟ್ಟೊಟ್ಟಿಗೇ ಎತ್ತಿಕೊಳ್ಳದೇ ಪ್ರಗತಿಪರ, ಪ್ರಜಾಸತ್ತಾತ್ಮಕ ಚಳುವಳಿಯು ಬಹುತೇಕ ದುಡಿವ ಜನಕೋಟಿಯನ್ನು ಸಂಘಟಿಸಲು ಸಾಧ್ಯವಿಲ್ಲ. ಭಾರತ ದೇಶದ ದುಡಿಯುವ ವರ್ಗದ ಚಳುವಳಿಯ ಇತಿಹಾಸದಲ್ಲಿ ಇದರ ಅನುಭವವಿದೆ. ಜಾತಿ ದಮನ, ಮತ್ತು ಜಾತಿ ತಾರತಮ್ಯಗಳ ವಿರುದ್ಧ ಕಮ್ಯೂನಿಸ್ಟ್ ಚಳುವಳಿ ಪ್ರಮುಖ ಪಾತ್ರ ವಹಿಸುತ್ತಾ ಬಂದಿದೆ. ಉದಾಹರಣೆಗೆ ಕೇರಳದ ಕಮ್ಯೂನಿಸ್ಟರು ಈ ವಿಷಯದಲ್ಲಿ ಗಮನಾರ್ಹ ಸಾಧನೆಯನ್ನು ಮಾಡಿದ್ದಾರೆ. ಅಂದಿನ ಸಮಾಜ ಸುಧಾರಕರಾದ ಶ್ರೀ ನಾರಾಯಣಗುರು, ಚೆಟ್ಟಿಯ್ಯಂಗಾಳಿ ಅಂತಹವರು ನಡೆಸಿದ ಪುನರುಜ್ಜೀವನದ ಚಳುವಳಿಯನ್ನು ಮುಂದಕ್ಕೊಯ್ಯಲು ಕಮ್ಯೂನಿಸ್ಟರು ಶ್ರಮಿಸಿದರು. ಇ.ಎಂ.ಎಸ್.ನಂಬೂದ್ರಿಪಾಡ್ ಸ್ವತಃ, ಅಲ್ಲದೇ ವಿ.ಟಿ.ಭಟ್ಟಾದ್ರಿಪಾಡ್, ಎಂ.ಬಿ.ಭಟ್ಟಾದ್ರಿಪಾಡ್ ಮುಂತಾದವರೊಂದಿಗೆ ಹೋರಾಟದ ದೀವಿಗೆ ಇನ್ನಷ್ಟು ಪ್ರಜ್ವಲವಾಗಿ ಉರಿಯುವಂತೆ ಮಾಡಿದರು. ನಂಬೂದರಿ ಸಮುದಾಯ ದವರನ್ನು ಮನುಷ್ಯರನ್ನಾಗಿ ಪರಿವರ್ತಿಸಿದರು. ಕೆಳ ಜಾತಿಗಳಿಗೆ ತಳ್ಳಲ್ಪಟ್ಟ ದಲಿತರೂ ಸಹ ಮಾನವರು ಎಂಬುದನ್ನು ತಿಳಿಸಿದರು. ಪಿ.ಕೃಷ್ಣಪಿಳ್ಳೆ, ಎ.ಕೆ.ಜಿ. ಈ ಹಿನ್ನೆಲೆಯಲ್ಲಿ ಸ್ಮರಣೀಯರಾಗಿದ್ದಾರೆ.

ಜನಶಕ್ತಿ:ಅಲ್ಲಿ ಅಂದು ನಡೆದ ಗಮನಾರ್ಹ ಹೋರಾಟಗಳ್ಯಾವುವು?

ಬೇಬಿ: ಹಲವು ಇವೆ. ಮುಖ್ಯವಾಗಿ ಕಮ್ಯೂನಿಸ್ಟ್ ನಾಯಕ ಎ.ಜಿ.ವೇಲಾಯುಧನ್ ಹುತಾತ್ಮರಾದ ಪಾಳಿಯಂ ಹೋರಾಟ. ಅಂದು ಸಾಮಾನ್ಯ ರಸ್ತೆಗಳಲ್ಲಿ ಕೆಳಜಾತಿಯವರು ನಡೆಯಕೂಡದು, ಮೇಲ್ಜಾತಿಗಳವರು ನಡೆವ ರಸ್ತೆಗಳಲ್ಲಿ ಕೆಳಜಾತಿಯವರು ಓಡಾಡಬಾರದು ಎಂಬ ನಿರ್ಭಂದದ ವಿರುದ್ಧ ಅತ್ಯಂತ ತೀಕ್ಷ್ಣವಾದ ಹೋರಾಟ ನಡೆಯಿತು. ಗುರುವಾಯೂರು ದೇವಸ್ಥಾನದೊಳಗೆ ದಲಿತರ ಪ್ರವೇಶಕ್ಕಾಗಿ ಎ.ಕೆ.ಜಿ.ಯವರ ನೇತೃತ್ವದಲ್ಲಿ ನಡೆದ ಹೋರಾಟ ಚಿರಸ್ಮರಣೀಯ.

ಜನಶಕ್ತಿ:ಪಂಕ್ತಿಭೇದ,ಮಡೆಸ್ನಾನದಂತಹ ಜಾತಿ ತಾರತಮ್ಯದ ವಿರುದ್ಧ ನಡೆಯುತ್ತಿರುವ ಹೋರಾಟವನ್ನು ಹೇಗೆ ಅರ್ಥೈಸುತ್ತೀರಿ?


ಬೇಬಿ: ಕರ್ನಾಟಕವನ್ನೂ ಒಳಗೊಂಡು ದೇಶದ ಇತರೆಡೆಗಳಲ್ಲಿ ಕಾಲ ಬಾಹೀರವಾದ ,ಅಮಾನವೀಯ ಜಾತಿ ಅಸ್ಪೃಶ್ಯತೆಯ ಆಚರಣೆಗಳನ್ನು ಈಗಲೂ ಅನುಸರಿಸಲಾಗುತ್ತಿದೆ. ವಿಶೇಷವಾಗಿ ಆರಾಧನಾ ಸ್ಥಳಗಳಲ್ಲಿ ಈ ಬೇಧಗಳಿವೆ. ಶತ, ಶತಮಾನಗಳ ಹಿಂದೆಯೇ ಇಂತಹ ಪ್ರವೃತ್ತಿಗಳ ವಿರುದ್ಧ , 'ಕಾಯಕವೇ ಕೈಲಾಸ' ವೆಂದು ಸಾರಿ, ಆ ತತ್ವವನ್ನು ಎತ್ತಿ ಹಿಡಿದ ಸುಪ್ರಸಿದ್ಧ ವಚನಕಾರರ ಹೋರಾಟದ ಇತಿಹಾಸವಿರುವ ಕರ್ನಾಟಕದ ಈ ನೆಲದಲ್ಲಿ ಇನ್ನೂ ಅಂಥಹವನ್ನು ಆಚರಿಸಲಾಗುತ್ತಿರುವುದು ಒಂದು ವಿಪರ್ಯಾಸ. ಆರಾಧನಾ ಸ್ಥಳಗಳಲ್ಲಿ 'ಆಪ್ತವಾಕ್ಯಂ'ನಂತಹ (ಪಂಕ್ತಿಬೇಧ, ಮಡೆಸ್ನಾನ)ಅಸಂಬದ್ಧ ಆಚರಣೆಗಳು ಇನ್ನೂ ಜೀವಂತವಿರುವುದು ದುರದೃಷ್ಟಕರ.

ಜನಶಕ್ತಿ:ಪಂಕ್ತಿಬೇಧ, ಮಡೆಸ್ನಾನ ದಂತಹ ಪದ್ಧತಿಗಳನ್ನು ವಿರೋಧಿಸಿ ನಡೆದಿರುವ ಹೋರಾಟಗಳ ಬಗ್ಗೆ ನಿಮ್ಮ ಅನಿಸಿಕೆ ಏನು?

ಬೇಬಿ: ಇದು ನಿಜಕ್ಕೂ ಐತಿಹಾಸಿಕ ಚಳುವಳಿ. ಪಂಕ್ತಿಬೇಧ, ಮಡೆಸ್ನಾನದಂತಹ ಪದ್ಧತಿಗಳು ಮಾನವನ ಘನತೆ, ಸಮಾನತೆಯ ನಡೆಸಿರುವ ಧಾಳಿಗಳಾಗಿವೆ. ಇವುಗಳ ವಿರುದ್ಧ ಮುಂಚೂಣಿಯ ಪಾತ್ರ ವಹಿಸಿದ ದುಡಿಯುವ ವರ್ಗದ ಈ ಹೋರಾಟಕ್ಕೆ ಐತಿಹಾಸಿಕ ಮಹತ್ವವಿದೆ. ಈ ಪದ್ಧತಿಗಳನ್ನು ಯಾವುದೇ ಜಾತಿ, ಧರ್ಮಕ್ಕೆ ಸೇರಿದ ಯಾರೂ ಒಪ್ಪಬಾರದು, ಸಹಿಸಬಾರದು. ಮಾನವ ಘನತೆಯನ್ನು ಎತ್ತಿಹಿಡಿಯಲು ಅವರೆಲ್ಲರೂ ಈ ಆಂದೋಲನದಲ್ಲಿ ಭಾಗಿಯಾಗಬೇಕು. ಜಾಗೃತ ಜನತೆಯನ್ನು ಅಣಿ ನೆರೆಸಬೇಕು.

ಜನಶಕ್ತಿ:ಜಾಗೃತಿಯೆಂದರೆ?

ಬೇಬಿ: ಈ ಅನಿಷ್ಟ ಪದ್ಧತಿಗಳ ವಿರುದ್ದ ಜನತೆಗೆ ತಿಳುವಳಿಕೆ ನೀಡಿ ಜಾಗೃತಿ ಉಂಟು ಮಾಡುವುದೂ ಅಗತ್ಯವಿದೆ. ಈ ದೆಶೆಯಲ್ಲಿ ಮೊದಲ ಹಂತದ ಹೋರಾಟದ ಭಾಗವಾಗಿ ಸಿಪಿಐ(ಎಂ) ಪಕ್ಷವು ಇದೇ 2012ರ ಡಿಸೆಂಬರ್ 21 ರಿಂದ 27 ರ ವರೆಗೆ ಕುಕ್ಕೆ ಸುಬ್ರಹ್ಮಣ್ಯದಿಂದ ಉಡುಪಿಯವರೆಗೆ ಜನಜಾಗೃತಿ ಮೂಡಿಸಲು



ವಾಹನ ಜಾಥಾ, ಪಾದಯಾತ್ರೆ ನಡೆಸಿದೆ. ನಿಡುಮಾಮಿಡಿ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ವೀರಭದ್ರ ಚನ್ನಮಲ್ಲ ಸ್ವಾಮೀಜಿಯವರು ಮಂಗಳೂರಿನಿಂದ ಉಡುಪಿಯವರೆಗೆ ಕಾಲ್ನಡಿಗೆ ಜಾಥಾಕ್ಕೆ ಚಾಲನೆ ನೀಡಿದ್ದಾರೆ.ಜನತೆಯ ಸ್ಪಂದನ ಉತ್ತಮವಾಗಿ ದೊರೆತಿದೆ. ಇದು ಇನ್ನಷ್ಟು ಮುಂದುವರಿಯಲಿದೆ.

ಜನಶಕ್ತಿ:ಗದುಗಿನ ತೋಂಟದಾರ್ಯ ಶ್ರೀಗಳು ಸಹ ತಮ್ಮ ಶುಭ ಹಾರೈಕೆಗಳನ್ನು ಕೋರಿದ್ದಾರೆ. ಧಾರ್ಮಿಕ ಕ್ಷೇತ್ರವನ್ನೂ ಒಳಗೊಂಡು ಇತರೆ ಕ್ಷೇತ್ರಗಳ ಗಣ್ಯರೂ ಇದಕ್ಕೆ ಬೆಂಬಲಿಸಿದ್ದಾರೆ. ಆದರೆ ಈ ಅನಿಷ್ಟ ಪದ್ಧತಿಯನ್ನು ಸಮರ್ಥಿಸುವ ಕೆಲವು ಸ್ಥಾಪಿತ ಹಿತಾಸಕ್ತಿಗಳು ಅಲ್ಲಿಯ ಜನತೆಗೇ ಇವು ಬೇಕಾಗಿವೆಯೆಂದೂ, ಅದರಲ್ಲೂ ಆದಿವಾಸಿ ಸಮುದಾಯವಾದ ಮಲೆಕುಡಿಯ ಜನಾಂಗವನ್ನು ತಮ್ಮ ಕುತಂತ್ರಗಳಿಗೆ ಬಳಸುತ್ತಿದ್ದಾರಲ್ಲ?

ಬೇಬಿ: ಈ ಹಿನ್ನಲೆಯಲ್ಲಿ ನಾವು ಎರಡು ಪ್ರಶ್ನೆಗಳನ್ನು ಚರ್ಚಿಸಬೇಕು. ಮೊದಲನೆಯದಾಗಿ ಕೆಳ ಜಾತಿ, ಸಮುದಾಯದವರನ್ನೇ ಬಳಸಿ ಕೋರ್ಟ್‌ನಲ್ಲಿ ಈ ಪದ್ಧತಿ ಮುಂದುವರಿಯಬೇಕು ಎಂದು ಕೇಳಿರುವ ವಿಷಯ. ಇದು ಹೊಸತೇನಲ್ಲ. ಹಿಂದೆ ಟ್ರಾವಂಕೂರು ಪ್ರಜಾಸಭಾದಲ್ಲಿ ಹಿಂದುಳಿದ ಜಾತಿಗೆ ಸೇರಿದ ನಾಮನಿರ್ದೇಶಿತ ಪ್ರತಿನಿಧಿಯೊಬ್ಬ ಹಿಂದುಳಿದ ಜಾತಿಗಳಿಗೆ ಸಾಮಾನ್ಯ ರಸ್ತೆಯಲ್ಲಿ ನಡೆವ ಅವಕಾಶ ನೀಡುವುದರ ವಿರುದ್ಧ ಮತ ಹಾಕಿದ! ಇತಿಹಾಸದಲ್ಲಿ ಇಂತಹ ಅಸಂಖ್ಯಾತ ಉದಾಹರಣೆಗಳಿವೆ. ದಮನಿತರ ಬೆಂಬಲ ಪಡೆದಿದ್ದೇವೆಂದು ತೋರಿಸಲು ದಮನಕಾರರು ಹೀಗೆ ಮಾಡುತ್ತಾರೆ.

ಎರಡನೆಯದಾಗಿ, ಇದಕ್ಕೆ ಕೆಲವು ರಾಜೀ ಸೂತ್ರಗಳನ್ನು ರೂಪಿಸಲಾಗುತ್ತದೆ. ಮಡೆಸ್ನಾನದ ಬದಲು ಎಡೆಸ್ನಾನ ಎನ್ನುತ್ತಾರೆ. ಪ್ರಶ್ನೆಯೆಂದರೆ ಉರುಳಲು ಎಂಜಲೆಲೆಯೋ ಅಥವಾ ಅನ್ನಪ್ರಸಾದವೋ, ಉರುಳುವವರಲ್ಲಿ ಬ್ರಾಹ್ಮಣ ಅಥವಾ ಮೇಲ್ ಜಾತಿಯವರೂ ಉರುಳುತ್ತಾರೆಂಬುದೋ ಅಲ್ಲವೇ ಅಲ್ಲ. ಇದೊಂದು ಮೂಢ ನಂಬಿಕೆ ಮಾತ್ರವಲ್ಲ ಅದು ಜಾತಿ ತಾರತಮ್ಯವನ್ನು ಪ್ರತಿಪಾದಿಸುತ್ತದೆ.

ಇಲ್ಲಿ ಸಮಾಜದ ಆತ್ಮಾವಲೋಕನ ಅಗತ್ಯವಿದೆ. ಪರಂಪರಾಗತವಾಗಿ ಬಂದಿವೆ ಎನ್ನಲಾದ ಯಾವ ಆಚರಣೆ, ಸಂಪ್ರದಾಯಗಳನ್ನು ಎತ್ತಿ ಹಿಡಿಯಬೇಕು, ಯಾವುವನ್ನು ಕೈ ಬಿಡಬೇಕು ಎಂಬುದನ್ನು ನಿರ್ಧರಿಸಬೇಕು. ಕೆಲವನ್ನು ತಿದ್ದುಪಡಿ ಮಾಡಿ ಪುನರ್ ರೂಪಿಸಬೇಕಾಗಬಹುದು. ಇದರತ್ತ ಸಂವಾದ-ಚಿಂತನ-ಮಂಥನ ಸಾಧ್ಯವಾಗಬೇಕು. ಆದರೆ ಜಾತಿ ತಾರತಮ್ಯ, ಅಂಧಶ್ರದ್ಧೆಗಳನ್ನು ಒಪ್ಪಲು ಸಾಧ್ಯವೇ ಇಲ್ಲ. ಇವು ಕಾಲಬಾಹೀರ, ಸಮಾಜವಿರೋಧಿ. ಸಮಾನತೆ, ಮಾನವನ ಘನತೆಗೆ ವಿರುದ್ಧವಾಗಿವೆ. ಇವುಗಳಿಗೆ ಅವಕಾಶ ನೀಡುವುದೂ ಭಾರತದ ಸಂವಿಧಾನದ ವಿರೋಧಿಯಾಗಿವೆ. ಇಂತಹ ಗಂಭೀರ ಪ್ರಶ್ನೆಯನ್ನು ಕರ್ನಾಟಕದ ಶ್ರಮಿಕ ವರ್ಗದ ಚಳುವಳಿ ಕೈಗೆತ್ತಿಕೊಂಡಿರುವುದು ಸ್ವಾಗತಾರ್ಹವಾಗಿದೆ.

ಜನಶಕ್ತಿ: ಈ ಆಂದೋಲನವನ್ನು ಹೇಗೆ ಕೊಂಡೊಯ್ಯಬೇಕೆಂದು ಬಯಸುತ್ತೀರಿ?

ಬೇಬಿ: ಇದನ್ನು ವಿಶಾಲವಾದ ವೇದಿಕೆಯಡಿ ಮುನ್ನಡೆಸಬೇಕಾಗಿದೆ. ಇಲ್ಲಿ ವಿವಿಧ ಸಂಘಟನೆಗಳು, ಬರಹಗಾರರು, ಕಲಾವಿದರು, ಚಿಂತಕರು, ವಿವಿಧ ರಂಗಗಳ ಪರಿಣಿತರು, ಸಾಮಾಜಿಕ ಗುಂಪುಗಳು ಹೀಗೆ ವಿವಿಧ ವಿಭಾಗಗಳನ್ನು ಒಂದಾಗಿಸಬೇಕು. ಸಮಾಜ ಸುಧಾರಣೆಯ, ಪುನರುಜ್ಜೀವನದ, ಸ್ವಾತಂತ್ರ್ಯ ಚಳುವಳಿಯ ಉನ್ನತ ಮೌಲ್ಯಗಳನ್ನು ಎತ್ತಿ

ಪುಟ 12 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಕೋ.ಚೆ. ಅವರಿಗೆ ಅಭಿನಂದನೆಗಳು

ಫೆಬ್ರವರಿ 9 ರಿಂದ ಮೂರು ದಿನಗಳ ಕಾಲ ಐತಿಹಾಸಿಕ ವಿಜಾಪುರ ನಗರದಲ್ಲಿ ನಡೆಯಲಿರುವ 79ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಕರ್ನಾಟಕ ಏಕೀಕರಣಕ್ಕಾಗಿ ಶ್ರಮಿಸಿದ, ಸ್ವಾತಂತ್ರ್ಯ ಹೋರಾಟಗಾರರೂ, ನಿವೃತ್ತ ನ್ಯಾಯಾಧೀಶರೂ, ಹಿರಿಯ ಸಾಹಿತಿಗಳೂ ಆಗಿರುವ ಕೋ. ಚೆನ್ನಬಸಪ್ಪ ಅವರಿಗೆ 'ಜನಶಕ್ತಿ' ಹಾರ್ದಿಕ ಶುಭಾಶಯಗಳನ್ನು ಕೋರುತ್ತದೆ. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆಯು ಕೋ.ಚೆ. ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಿದ್ದು ಹೆಮ್ಮೆಯ ವಿಷಯವಾಗಿದೆ.

ಕೋ.ಚೆ.ಅವರು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಆಲೂರು ಗ್ರಾಮದಲ್ಲಿ ವೀರಣ್ಣ ಮತ್ತು ಬಸಮ್ಮ ದಂಪತಿಗಳ ಪುತ್ರನಾಗಿ 1922 ಫೆಬ್ರವರಿ 29 ರಂದು ಹುಟ್ಟಿದರು. ಪಕ್ಕದ ಕಾನಾಮಡುಗು ಗ್ರಾಮದಲ್ಲಿ ಪ್ರಾಥಮಿಕ, ಬಳ್ಳಾರಿಯಲ್ಲಿ ಪ್ರೌಢ ಶಿಕ್ಷಣ, ಆಂಧ್ರದ ಅನಂತಪುರದಲ್ಲಿ ಪದವಿ ಹಾಗೂ ಬೆಳಗಾವಿಯಲ್ಲಿ ಕಾನೂನು ಶಿಕ್ಷಣ ಪಡೆದು ಬಳ್ಳಾರಿಯಲ್ಲಿ ವಕೀಲ ವೃತ್ತಿ ಆರಂಭಿಸಿದರು. ಅನಂತಪುರ ಕಾಲೇಜ್‌ನಲ್ಲಿ ಓದುತ್ತಿರುವಾಗಲೇ ದೇಶದ ಸ್ವಾತಂತ್ರ್ಯ ಚಳುವಳಿಗೆ ಆಕರ್ಷಿತರಾಗಿ 'ಚಲೇ ಜಾವ್' ಚಳುವಳಿಯಲ್ಲಿ ವಿದ್ಯಾರ್ಥಿ ಮುಖಂಡನಾಗಿ ಭಾಗವಹಿಸಿ, ಬಂಧನಕ್ಕೆ ಒಳಗಾಗಿ ಸೆರೆಮನೆ ವಾಸ ಅನುಭವಿಸಿದ್ದರು. ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಿದ ಪ್ರಮುಖರಲ್ಲಿ ಕೋ.ಚೆನ್ನಬಸಪ್ಪ ಕೂಡ ಒಬ್ಬರು.

ವೃತ್ತಿಯಲ್ಲಿ ಕೋ.ಚೆ. ನ್ಯಾಯಾಧೀಶರಾಗಿದ್ದರೂ ಕನ್ನಡ ಭಾಷೆ, ಕನ್ನಡ ಸಾಹಿತ್ಯದ ಬಗ್ಗೆ ಅಪಾರವಾದ ಒಲವು ಉಳ್ಳವರಾಗಿದ್ದಾರೆ. ಕವನ, ಕಾದಂಬರಿ, ವಿಮರ್ಶಾ ಗ್ರಂಥಗಳು ಸೇರಿದಂತೆ 80ಕ್ಕೂ ಹೆಚ್ಚು ಕೃತಿಗಳನ್ನು ಅವರು ರಚಿಸಿದ್ದಾರೆ. "ನ್ಯಾಯಾಧೀಶರ ನೆನಪುಗಳು" ಮತ್ತು "ನ್ಯಾಯಾಲಯದಲ್ಲಿ ಸತ್ಯ ಕಥೆಗಳು" ಎಂಬ ಅವರ ಬರಹಗಳು ಜನಮೆಚ್ಚುಗೆಗೆ ಪಾತ್ರವಾದ ಬರಹಗಳು. 'ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ ಸಮೀಕ್ಷೆ' ಅವರ ಮಹತ್ವದ ಕೃತಿಗಳಲ್ಲಿ ಒಂದು. ಕರ್ನಾಟದ ಸಾಹಿತ್ಯ ಅಕಾಡಮಿ ಪ್ರಶಸ್ತಿ, ಕನ್ನಡಶ್ರೀ ಪ್ರಶಸ್ತಿ, ವಿಶ್ವಮಾನವ ಪ್ರಶಸ್ತಿ ಮೊದಲಾದ ಅನೇಕ ಪ್ರಶಸ್ತಿಗಳು ಅವರಿಗೆ ಲಭಿಸಿವೆ.

ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಕೋ.ಚೆ. ಅವರನ್ನು ಆಯ್ಕೆ ಮಾಡಿರುವುದನ್ನು ನಾಡಿನಾದ್ಯಂತ ಎಲ್ಲರೂ, ವಿಶೇಷವಾಗಿ ಎಲ್ಲ ಪ್ರಗತಿಪರ ವ್ಯಕ್ತಿಗಳು, ಸಂಘಟನೆಗಳು ಮುಕ್ತವಾಗಿ ಸ್ವಾಗತಿಸಿವೆ. ವೈಚಾರಿಕವಾಗಿ ಗಟ್ಟಿಯಾದ ನೆಲೆವುಳ್ಳವರಾದ ಅವರು ತಮ್ಮ ನಿರ್ಭಿಡೆ-ನಿರ್ದಾಕ್ಷಿಣ್ಯದ ನಿಲುಮೆಗಳಿಗೆ ಹೆಸರುವಾಸಿಯಾಗಿದ್ದಾರೆ. ಸಮಾಜದ ಅಂಕು ಡೊಂಕುಗಳನ್ನು ತಿದ್ದಲು ಸಾಹಿತ್ಯದ ಬಳಕೆ ಆಗಬೇಕು ಎಂಬ ಪ್ರತಿಪಾದನೆಗೆ ಬದ್ಧರಾಗಿರುವ ಅವರಿಂದ ಸಾಹಿತ್ಯ ಸಮ್ಮೇಳನದ ವೇದಿಕೆಯ ಸದ್ಬಳಕೆ ಆಗಲಿದೆ ಎಂಬುದೇ ಎಲ್ಲರ ನಿರೀಕ್ಷೆಯಾಗಿದೆ.


ರಾಜ್ಯದ ಜನತೆಯ ನೆಮ್ಮದಿಗೆ ಹಾಗೂ ನೈಜ ಮುನ್ನಡೆಗೆ ಭಂಗವನ್ನುಂಟು ಮಾಡುತ್ತಿರುವ ಕೋಮುವಾದ, ಜಾತಿವಾದ, ಕಂದಾಚಾರಗಳ ವಿರುದ್ಧ ಕೋ.ಚೆ. ಅವರ ರಾಜಿ ಮಾಡಿಕೊಳ್ಳದ ಮನೋಭಾವದ ಕಾರಣಕ್ಕಾಗಿ ಅವರ ಆಯ್ಕೆ ನೂರಕ್ಕೆ ನೂರು ಸಕಾಲಿಕವಾಗಿದೆ. ರಾಜ್ಯದಲ್ಲಿ ಇಂದು ತಾಂಡವಾಡುತ್ತಿರುವ ಇಂತಹ ಪಿಡುಗುಗಳ ವಿರುದ್ಧ ಗಟ್ಟಿಯಾಗಿ ಮಾತನಾಡುವವರು, ಕೋ.ಚೆ. ಅಂತವರು ಎಷ್ಟು ಜನ ಮುಂದೆ ಬಂದರೂ ಸಾಲದಾಗಿದೆ. ಅಷ್ಟೊಂದು ಪ್ರಮಾಣದಲ್ಲಿ ಇಂದು ಮೌಢ್ಯವನ್ನು, ಮತಾಂಧತೆಯನ್ನು ತುಂಬಾ ವ್ಯವಸ್ಥಿತವಾಗಿ ಮಕ್ಕಳ, ಮಹಿಳೆಯರ, ಜನಸಾಮಾನ್ಯರ ಮೆದುಳಿನಲ್ಲಿ ಬಿತ್ತಿ ಬೆಳೆಸುವ ಕೆಲಸ ನಡೆಯುತ್ತಿದೆ. ಶೋಷಿತ-ದಮನಿತ ಜನವಿಭಾಗಗಳು ಒಂದಾಗಿ ತಮ್ಮ ವಿಮೋಚನೆಗಾಗಿ ಹೋರಾಡಬೇಕಾದ ಈ ಸಂದಿಗ್ಧ ಸಮಯದಲ್ಲಿ ಅವರಿಗೆ ದಾರಿದೀಪವಾಗುವ, ಅವರಲ್ಲಿ ಆತ್ಮವಿಶ್ವಾಸವನ್ನು ತುಂಬುವ ಸಾಹಿತ್ಯ ರಚನೆ ಹೆಚ್ಚೆಚ್ಚಾಗಿ ಆಗಬೇಕಾಗಿದೆ. ಒಂದು ನ್ಯಾಯಬದ್ಧವಾದ, ತಾರತಮ್ಯರಹಿತವಾದ ಸಮಾಜ ರಚನೆ ಸಾಧ್ಯವಿದೆ ಎಂಬುದನ್ನು ನ್ಯಾಯಕ್ಕಾಗಿ ಪರಿತಪಿಸುವವರು ಮನಗಾಣುವಂತಹ ಸಾಹಿತ್ಯ ಸೃಷ್ಟಿ ಆಗಬೇಕಾಗಿದೆ. ಸಾಹಿತಿಗಳು, ಬರಹಗಾರರು ಜನಪರ ಹೋರಾಟಗಳ ವೀಕ್ಷಕರಾಗಿ ದೂರ ಉಳಿಯದೆ ಹೋರಾಟಗಳ ಭಾಗವಾಗುವುದು ವೃದ್ಧಿಯಾಗಬೇಕಾಗಿದೆ. ಈ ದಿಶೆಯಲ್ಲಿ ಸಮ್ಮೇಳನಾಧ್ಯಕ್ಷರು ಬರುವ ಬರಹಗಾರರಿಗೆ ಸಮಯದ ಕರೆಯನ್ನು ಕಂಡುಕೊಳ್ಳುವಂತಹ ಸ್ಪಷ್ಟ ಸಂದೇಶವನ್ನು ನೀಡುತ್ತಾರೆ ಎಂಬ ನಿರೀಕ್ಷೆಯಲ್ಲಿ 'ಜನಶಕ್ತಿ' ಯೂ ಭಾಗಿಯಾಗಿರುತ್ತದೆ.

ಲಜ್ಜೆಗೇಡಿ ಸರಕಾರ : ಅರಾಜಕತೆಯ ಸೃಷ್ಟಿಯಲ್ಲಿ ಸ್ವಾರ್ಥ ರಾಜಕಾರಣದ ದುಷ್ಟ ಯೋಜನೆಗಳು

ಈ ಸರಕಾರ ಎಂದೋ ಸತ್ತು ಹೋಗಿದೆ. ಸರ್ವ ಸಂವೇದನೆಗಳನ್ನು ಕಳೆದುಕೊಂಡ ಸರಕಾರ ಮಿಸುಕಾಡುತ್ತಿರುವುದೇ ಅಧಿಕಾರದಾಹವೆಂಬ ಆಕ್ಸಿಜನ್‌ನ ಕೃತಕ ಉಸಿರಾಟದಿಂದಷ್ಟೇ. ಇದ್ದರೇ ಚಿಂತೆ ಎನ್ನುವ ಅಸಹ್ಯತನಕ್ಕೆ ಈ ಬಿಜೆಪಿ ಸರಕಾರ ಬಂದು ತಲುಪಿದೆ. ಆದರೆ ಅದು ಪೂರ್ತಿ ಸತ್ತಿಲ್ಲ ಎಂಬ ಕಾರಣಕ್ಕೆ ಬಿಜೆಪಿಯೊಳಗೆ ಮುಷ್ಟಿಯುದ್ಧ ನಿಂತಿಲ್ಲ.

ಬಿಜೆಪಿ ಆರಂಭದಿಂದಲೂ ಒಂದಾಗಿರಲೇ ಇಲ್ಲ, ಅದು ಒಡೆದ ಮನೆ ಎಂಬುದು ಮತ್ತೆ, ಮತ್ತೇ ಸಾಬೀತಾಗುತ್ತಲೇ ಬಂತು. ಗಣಿ, ಭೂ ಮಾಫಿಯಾ ಹಿತಾಸಕ್ತಿಗಳು, ಸಾರ್ವಜನಿಕ ಸಂಪತ್ತಿನ ಲೂಟಿಯೇ ಸಿದ್ಧಾಂತವಾಗಿರುವಾಗ ಇದಕ್ಕಿಂತ ಇನ್ನೇನನ್ನು ನಿರೀಕ್ಷಿಸಲು ಸಾಧ್ಯ. ಹೀಗಾಗಿ ಬಿಜೆಪಿ ಅಂತಿಮವಾಗಿ ವಿದ್ಯುಕ್ತವಾಗಿ ಒಡೆಯಲೇ ಬೇಕಾಯಿತು.

ಯಡಿಯೂರಪ್ಪ ಹೊರ ಹೋಗಿ ಕೆಜೆಪಿ ಸ್ಥಾಪಿಸಿ, ಬಿಜೆಪಿಯ ಸರಕಾರಕ್ಕೆ ಬಹುಮತವಿಲ್ಲ ದಿರುವುದನ್ನು ಬಹಿರಂಗವಾಗಿ ತೋರಿಸಿಯಾದ ಮೇಲಾದರೂ ರಾಜೀನಾಮೆ ಕೊಟ್ಟು ತೊಲಗ ಬೇಕಿತ್ತು, ಹೊಸ ಜನಾದೇಶಕ್ಕಾಗಿ ಚುನಾವಣೆಗೆ ಹೋಗಬೇಕಿತ್ತು. ಆದರೆ ಎಲ್ಲರೂ ಅಧಿಕಾರದ ಕೊನೆಯ ಕ್ಷಣವನ್ನೂ ಅನುಭವಿಸುವ ಲಜ್ಜೆಗೇಡಿತನ ದಲ್ಲಿರುವಾಗ ಅಂತಹ ಕನಿಷ್ಟ ನೈತಿಕತೆ ಇರಲಾದರೂ ಹೇಗೆ ಸಾಧ್ಯ. ಇದು ಇಂದಿನ ಬಿಕ್ಕಟ್ಟಿಗೆ ದಾರಿ ಮಾಡಿಕೊಟ್ಟಿದೆ.



ಇಂತಹವುಗಳ ನಡುವೆಯೇ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಮತ್ತೆ ಜನರನ್ನು ಮರುಳುಗೊಳಿಸುವ 'ಚುನಾವಣಾ ಬಜೆಟ್' ಮಂಡಿಸುವ ತಯಾರಿಯಲ್ಲಿರುವಾಗ ಆಳುವ ಬಿಜೆಪಿಯಲ್ಲಿ ಮರು ಬಂಡಾಯ ಸ್ಫೋಟಗೊಂಡಿದೆ. ಬಿಜೆಪಿಯಲ್ಲಿರುವ ಇಬ್ಬರು ಪ್ರಮುಖ ಸಚಿವರು, 14 ಯಡಿಯೂರಪ್ಪನವರ ಬೆಂಬಲಿಗ ಶಾಸಕರು ತಮ್ಮ ಸ್ಥಾನಗಳಿಗೆ ರಾಜೀನಾಮೆ ಸಲ್ಲಿಸಲು ಹೊರಟಿರುವುದು ತೀವ್ರ ಬಿಕ್ಕಟ್ಟನ್ನು ಸೃಷ್ಟಿಸಿದೆ. ಮತ್ತಷ್ಟು ಶಾಸಕರು ರಾಜೀನಾಮೆ ಸಲ್ಲಿಸುವುದಾಗಿ ಹೇಳಿರುವುದು ಸರಕಾರದ ಅಸ್ತಿತ್ವಕ್ಕೆ ಬೆದರಿಕೆ ಒಡ್ಡಿದೆ. ಈ ಸ್ಥಿತಿಯಿಂದಾಗಿ 223+1 ಶಾಸಕರ ಸದನದಲ್ಲಿ ಬಿಜೆಪಿ ಸಂಖ್ಯೆ 102 ಅಥವಾ ಇನ್ನಷ್ಟು ಕುಸಿಯುವ ಸಂಭವವಿದೆ. ಅಂದರೆ ಸರಕಾರಕ್ಕೆ ಬಹುಮತವಿಲ್ಲ, ಪತನಗೊಳ್ಳುವುದು ಅನಿವಾರ್ಯ.

ಆದರೆ ಇಷ್ಟೆಲ್ಲಾ ಸ್ಥಿತಿಯಿದ್ದರೂ ಶೆಟ್ಟರ್ ರಾಜೀನಾಮೆ ಕೊಡಲು ಸಿದ್ಧವಿಲ್ಲದಿರುವುದು, ಹಿಂದಿನವರಂತೆ ಹೇಗಾದರೂ, ಯಾವುದೇ ಅನೈತಿಕ ಮಾರ್ಗ ಅನುಸರಿಸಿಯಾದರೂ ಅಧಿಕಾರದಲ್ಲಿ ಉಳಿಯಲು ಹವಣಿಸುತ್ತಿರುವುದು ಭಂಡತನದ ಪರಮಾವಧಿ. (ಬಿಜೆಪಿಯಲ್ಲಿದ್ದೂ ಉತ್ತರ ಕರ್ನಾಟಕದ ಶೆಟ್ಟರ್ ಬಿಂದು ಭಿನ್ನ ಆಡಳಿತ ಕೊಡಬಹುದು ಎಂದು ಹೇಳುತ್ತಿದ್ದವರು ಯೋಚಿಸಬೇಕು) ಹೀಗಾಗಿಯೇ ಅವರು ಇಂತಹ ಬಿಕ್ಕಟ್ಟು ಸೃಷ್ಟಿಯಾದಾಗಲೂ ಅವರು ರಾಜಧಾನಿಯತ್ತ ತಲೆ ಹಾಕದೇ ಮುಖಮರೆಸಿ ಕೊಂಡು ಪ್ರವಾಸ ಹೊರಟಿದ್ದಾರೆ. ರಾಜೀನಾಮೆ ಪತ್ರ ಸ್ವೀಕರಿಸಬೇಕಾದ, ನಿಷ್ಪಕ್ಷಪಾತದಿಂದ ವರ್ತಿಸಬೇಕಾದ ಸಭಾಧ್ಯಕ್ಷರೂ ಬಿಕ್ಕಟ್ಟು ಸೃಷ್ಟಿಯಾಗುವ ವಿಷಯ ಮೊದಲೇ ಗೊತ್ತಿದ್ದರೂ ಎಲ್ಲಿದ್ದಾರೆ ಎಂಬುದರ ಸುಳಿವೇ ಇಲ್ಲ! ಬಿಜೆಪಿ ಸರಕಾರವನ್ನು ಉಳಿಸುವ ಆಟದಲ್ಲಿ ಸಭಾಧ್ಯಕ್ಷರೂ ದಾಳದಂತೆ ಮತ್ತೆ, ಮತ್ತೆ ವರ್ತಿಸುತ್ತಿರುವುದು ವ್ಯಾಪಕ ಆಕ್ರೋಶಕ್ಕೆ ಗುರಿಯಾಗಿದೆ. ಇಷ್ಟು ಅರಾಜಕತೆ ಸೃಷ್ಟಿಸಿರುವ ಬಿಜೆಪಿ ಕ್ಷಮಾರ್ಹವಲ್ಲ. ಇವುಗಳ ಹಿಂದೆ ಹಿಡನ್ ಅಜೆಂಡಾ ಇಟ್ಟುಕೊಂಡು ಆಟವಾಡುತ್ತಿರುವ, ಆಡಿಸುತ್ತಲೂ ಇರುವ ದೇಶಭಕ್ತ ಆರೆಸ್ಸೆಸ್ ಕೂಡ.

ಇಂತಹ ಸರಕಾರ ಕ್ಷಣ ಕಾಲವೂ ಇರಬಾರದು. ಆದರೆ ಬಹುಮತ ಕುಸಿದಲ್ಲಿ ಇತರೆ ವಿರೋಧ ಪಕ್ಷಗಳ ಬೆಂಬಲ ಪಡೆದು ಅಧಿಕಾರ ಪೂರೈಸುವ ಒಂದು ಸಂಚನ್ನೂ ಹೆಣೆಯಲಾಗಿದೆ ಎಂದು ಹೇಳಲಾಗುತ್ತಿದೆ. ಇದೂ ಅಕ್ಷಮ್ಯವೇ ಸರಿ. ಬಿಜೆಪಿ ಆಂತರಿಕ ಕಿತ್ತಾಟ ಗಳಿಂದ ಅದು ಚೂರು ಚೂರಾದರೆ ಅದಕ್ಕೆ ಹೊಣೆ ಅದು ಎಸಗುತ್ತಾ ಬಂದ ಸ್ವಯಂಕೃತ ಅಪರಾಧಗಳೇ ಹೊರತು ಬೇರಾರಲ್ಲ. ಹಾಗಾಗಿ ಈ ಸರಕಾರವನ್ನು ಯಾರಾದರೂ ಉಳಿಸುವ ಯೋಚನೆ ಮಾಡುವುದೂ ಜನದ್ರೋಹವಾಗಿದೆ. ಹಾಗೊಮ್ಮೆ ಮಾಡಿದರೆ ಜನ ಕ್ಷಮಿಸಲಾರರು.

ನಿಜ, ಈ ಸರಕಾರ ತೊಲಗಬೇಕು. ಆದರೆ ಈಗ ಬಂಡಾಯ ಹೂಡಿರುವ ಶಾಸಕರಲ್ಲಿ, ಅವರ ನಾಯಕ ಯಡಿಯೂರಪ್ಪನವರಲ್ಲಿ ಏನಾದರೂ ಕಿಂಚಿತ್ತಾದರೂ ಜನ ಕಾಳಜಿ ಇದೆಯೇ? ಸರಕಾರ ಉರುಳಿಸುವುದರಲ್ಲಿ ಜನತೆಯ, ರಾಜ್ಯದ ಹಿತವಿದೆಯೇ ಎಂದರೆ ಅದರ ಲವಲೇಶವೂ ಇಲ್ಲ. ಒಂದು ವೇಳೆ ಇದ್ದಿದ್ದರೆ ಯಡಿಯೂರಪ್ಪನವರ ನಿಷ್ಟ ಸಚಿವೆ ಶೋಭಾ ಕರಂದ್ಲಾಜೆ ರಾಜೀನಾಮೆ ನೀಡುವ ಮೊದಲು ತನ್ನ ಇಲಾಖೆಯಿಂದ ಸಾವಿರಾರು ಕೋಟಿ ರೂಪಾಯಿಗಳ ಒಪ್ಪಂದವನ್ನು ಮಾಡಿಕೊಳ್ಳು ಸಾಧ್ಯವಿತ್ತೇ? ಹೀಗಾಗಿ ಅಲ್ಲಿ ಎಲ್ಲರಲ್ಲೂ ಇರುವುದು ಕೇವಲ ಸಂಕುಚಿತ, ಸ್ವಾರ್ಥ ರಾಜಕಾರಣದ ದುಷ್ಟ ಕಾರ್ಯಾಚರಣೆಯೇ. ಸರಕಾರ ಬೀಳಿಸಬಾರದು ಎಂಬುವವರಲ್ಲಿಯೂ ಅದೇ ಯೋಚನೆಗಳು. ಒಳ ಮೈತ್ರಿಯ ಬಯಕೆಗಳು. ಈ ಕಾರಣದಿಂದಲೂ ಈ ಸರಕಾರ ತೊಲಗಲೇಬೇಕು.

ಇಂತಹ ಅರಾಜಕತೆಯಿಂದಾಗಿ, ಕುಸಿದು ಹೋಗಿರುವ ಆಡಳಿತದಿಂದಾಗಿ ಜನತೆ ತತ್ತರಿಸಿ, ದಿಕ್ಕು ಕಾಣದೇ ಹತಾಶೆಯಿಂದ ಬೇಸರಗೊಂಡಿದ್ದಾರೆ. ಅವರಿಗೆ ಆ ತಕ್ಕ ಪಾಠ ಕಲಿಸಲು ಕಾದಿದ್ದಾರೆ.

ಅಲ್ಲಲ್ಲಿ ಅಡಗಿ ಕುಳಿತು 'ಸ್ವಯಂಸೇವೆ' ಸಲ್ಲಿಸುತ್ತಿರುವ ಸಂವಿದಾನಾತ್ಮಕ ಹೊಣೆ ಇರುವವರು ಜನರೆದುರು ಹೊರ ಬಂದು ಈಗಲಾದರೂ ಕ್ರಮವಹಿಸಲಿ.

ಮಡೆಸ್ನಾನ ಧರ್ಮದ ಹೆಸರಿನ ವಿಕೃತಿ- ಸಹಿ ಸಂಗ್ರಹಕ್ಕೆ ಚಾಲನೆ

ಮಡೆ ಸ್ನಾನ-ಪಂಕ್ತಿಬೇಧದ ವಿರುದ್ಧ ಆಂದೋಲನ ನಡೆಸುತ್ತಿರುವ ಸಿಪಿಐ(ಎಂ) ಕಾರ್ಯಕರ್ತರ ಮೇಲೆ ಉಡುಪಿಯಲ್ಲಿ ನಡೆದ ಪೊಲೀಸರ ಹಲ್ಲಗೆ ವ್ಯಾಪಕ ಖಂಡನೆ ವ್ಯಕ್ತವಾಗಿದೆ. ಮಾತ್ರವಲ್ಲ ಆ ಪದ್ಧತಿಗಳನ್ನು ನಿಷೇಧಿಸುವಂತೆ ರಾಜ್ಯದೆಲ್ಲೆಡೆ ಆಗ್ರಹಗಳೂ ಕೇಳುತ್ತಿದೆ. ಈ ದಿಶೆಯಲ್ಲಿ ಚಿಂತಕರು-ಚಳುವಳಿಗಾರರಿಂದ ಸಹಿ ಸಂಗ್ರಹಕ್ಕೆ ಚಾಲನೆ ನೀಡಿದ ವರದಿ ಇಲ್ಲಿದೆ.

'ಮಡೆಸ್ನಾನ, ಪಂಕ್ತಿಭೇದ, ಬಾಲ್ಯವಿವಾಹ, ಬೆತ್ತಲೆ ಸೇವೆ, ದೇವದಾಸಿ ಪದ್ಧತಿಮೊದಲಾದವು ಧರ್ಮದ ಚೌಕಟ್ಟಿನಲ್ಲಿ ನಡೆಯುವ ವಿಕೃತಿಗಳಾಗಿದ್ದು, ಮೇಲ್ಜಾತಿಗಳ ಜನ್ನ ಅವುಗಳನ್ನು ಸಂಸ್ಕೃತಿ ಆಕೃತಿಗಳನ್ನಾಗಿ ಬಿಂಬಿಸುತ್ತಾರೆ' ಎಂದು ಹಿರಿಯ ಸಾಹಿತಿ ಪ್ರೊ. ಬರಗೂರು ರಆಮಚಂದ್ರಪ್ಪ ಆಕ್ರೋಶ ವ್ಯಕ್ತಪಡಿಸಿದರು.

ಸಿಪಿಎಂ ನೇತೃತ್ವದಲ್ಲಿ ಶುಕ್ರವಾರ ನಗರದ ಬಸವೇಶ್ವರ ವೃತ್ತದಲ್ಲಿ ಮಡೆಸ್ನಾನದ ವಿರುದ್ಧ ಏರ್ಪಡಿಸಲಾಗಿದ್ದ ಸಹಿ ಸಂಗ್ರಹ ಚಳವಳಿಯಲ್ಲಿ ಪಾಲ್ಗೊಂಡು ಮಾತನಾಡಿದರು.

'ಪ್ರತಿಯೊಂದು ಅನಿಷ್ಟ ಪದ್ಧತಿಯಿಂದ ನೋವು ಅನುಭವಿಸಿದವರು ತಳಶ್ರೇಣಿ ಜನರೇ. ಪಂಕ್ತಿಭೇದ ಆಚರಿಸುವ ಜನ ಏನೇ ಕಾರಣ ಕೊಟ್ಟರೂ ಜಾತಿ ಶೋಷಣೆ ಒಂದು ಕ್ರೌರ್ಯವಾಗಿಯೇ ನಮಗೆ ಗೋಚರಿಸುತ್ತದೆ. ಸಾಮಾಜಿಕ ಮೌಢ್ಯಗಳ ವಿರುದ್ಧ ಧ್ವನಿ ಎತ್ತುವವರನ್ನು ಜೈಲಿಗೆ ಕಳುಹಿಸುವ ಮೂಲಕ ಸರ್ಕಾರ ಅವುಗಳನ್ನು ಪೋಷಿಸುವ ಯತ್ನ ಮಾಡುತ್ತಿದೆ' ಎಂದು ಅಸಮಾಧಾನ ಹೊರಹಾಕಿದರು.

'ಬೆತ್ತಲೆ ಸೇವೆಯನ್ನು ಹಿಂದೆ ಕೆಲವರು ಸಮರ್ಥನೆ ಮಾಡಿದರೂ ಬಳಿಕ ಅದನ್ನು ನಿಷೇಧಿಸಲಾಯಿತು. ಮಡೆಸ್ನಾನಕ್ಕೂ ಅಂತಹ ಗತಿ ಬಂದೇ ಬರುತ್ತದೆ. ಅಲ್ಲಿಯವರೆಗೆ ಹೋರಾಟ ಕೈಬಿಡುವ ಪ್ರಶ್ನೆಯೇ ಎಲ್ಲ' ಎಂದು ಹೇಳಿದರು.

ಹಿಂದುಳಿದ ವರ್ಗಗಳ ಮಾಜಿ ಅಧ್ಯಕ್ಷ ಪ್ರೊ. ರವಿವರ್ಮ ಕುಮಾರ್ ಮಾತನಾಡಿ, 'ವರ್ಗ ವ್ಯವಸ್ಥೆಯಲ್ಲಿ ಮೇಲಿದ್ದವರು ಉತ್ತರದಾಯಿತ್ವ ಇಲ್ಲದೆ ಜೀವನ ನಡೆಸಿದ್ದಾರೆ. ಸಮಾಜದ ಮೇಲಿನ ಹಿಡಿತವನ್ನು ಸುಲಭವಾಗಿ ಬಿಟ್ಟುಕೊಡಲು ಅವರ ಮನಸ್ಸು ಒಪ್ಪುತ್ತಿಲ್ಲ. ಮಡೆಸ್ನಾನ ಅಂಥವರ ಅಮಾನವೀಯ, ಅನಾಗರಿಕ ಮುಖವನ್ನು ಅನಾವರಣ ಮಾಡುತ್ತದೆ' ಎಂದು ಕಿಡಿಕಾರಿದರು.

'ಸಂಸತ್ತು, ವಿಧಾನಸಭೆ, ನ್ಯಾಯಾಂಗದಲ್ಲೂ ಇಂತಹ ಮೌಢ್ಯಗಳನ್ನು ಪೋಷಿಸುವ ಶಕ್ತಿಗಳಿವೆ. ಹಲವು ಮಠಾಧಿಪತಿಗಳು ಇಂತಹ ಅನಿಷ್ಟಗಳನ್ನು ಉಳಿಸಿಕೊಂಡು ಹೋಗಲು ಸಾಧ್ಯವಿರುವ ಯತ್ನಮಾಡುತ್ತಿದ್ದಾರೆ' ಎಂದು ದೂರಿದರು.

ವಿಕೃತಿಗೆ ಪರ್ಯಾಯ:



ಬಸವೇಶ್ವರ ಪ್ರತಿಮೆ ಎದುರು – ಸಹಿ ಸಂಗ್ರಹ ಆಂದೋಲನಕ್ಕೆ ಚಾಲನೆ

ಕವಿ ಎಲ್. ಹನುಮಂತಯ್ಯ, 'ಮಡೆಸ್ನಾನ ನಿಷೇಧಿಸಿ ಎಂಬ ಮನವಿ ಹೊತ್ತು ನ್ಯಾಯಾಲಯಕ್ಕೆ ಹೋದರೆ ಎಂಜಲೆಲೆ ಮೇಲೆ ಬೇಡ, ಎಡೆ ಮಾಡಿದ ಎಲೆಯಲ್ಲಿ ಉರುಳಾಡಬೇಕು ಎನ್ನುವ ಆದೇಶವನ್ನು ಅದು ಹೊರಡಿಸುತ್ತದೆ. ವಿಕೃತಿಗಳಿಗೆ ಪರ್ಯಾಯವನ್ನು ಹೇಳಿಕೊಡುತ್ತದೆ' ಎಂದು ಹೇಳಿದರು.

ಸಿಪಿಎಂ ಮುಖಂಡ ಮಾರುತಿ ಮಾನ್ಪಡೆ, 'ಉಡುಪಿ ಮಠದ ಮೇಲೆ ಏಕೆ ಕಣ್ಣು ಎನ್ನುವ ಪ್ರಶ್ನೆಯನ್ನು ಪೇಜಾವರ ಮಠದ ವಿಶ್ವೇಶತೀರ್ಥ ಸ್ವಾಮೀಜಿ ಎತ್ತಿದ್ದಾರೆ. ಪುರೋಹಿತಶಾಹಿ ವ್ಯವಸ್ಥೆಯನ್ನು ಒಟ್ಟಾಗಿ ಗುತ್ತಿಗೆ ಹಿಡಿದಿದ್ದರಿಂದ ಈ ಸ್ವಾಮೀಜಿಯತ್ತ ನಮ್ಮ ದೃಷ್ಟಿ ನೆಟ್ಟಿದೆ. ಅಲ್ಲಿ ನಡೆದಿರುವ ಅನಿಷ್ಟಗಳನ್ನು ತಡೆದು ಹಾಕಬೇಕಿದೆ' ಎಂದರು. ಇನ್ನೊಬ್ಬ ಮುಖಂಡ ಜಿ.ಎನ್.ನಾಗರಾಜ್ ಈ ಪದ್ಧತಿಗಳ ವಿರುದ್ಧ ರಾಜ್ಯವ್ಯಾಪಿ ಆಂದೋಲನ ಸಾಗಲಿದೆ ಎಂದರು.

ಪ್ರೊ. ನರಸಿಂಹಯ್ಯ, 'ಪೇಜಾವರ ಸ್ವಾಮೀಜಿ, ಮಡೆಸ್ನಾನಕ್ಕೆ ವಿರೋಧ ಇಲ್ಲ ಎನ್ನುತ್ತಲೇ ಅದನ್ನು ಪೋಷಿಸಿಕೊಂಡು ಬರಲು ನೀರು ಎರೆದಿದ್ದಾರೆ. ಮಲೆ ಕುಡಿಯರ ಅಜ್ಞಾನವನ್ನು ದುರುಪಯೋಗ ಮಾಡಿಕೊಂಡು ಆ ಸಮುದಾಯದ ವ್ಯಕ್ತಿಯಿಂದಲೇ ಕೋರ್ಟ್‌ಗೆ ಅರ್ಜಿ ಹಾಕಿಸಲಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಭೆಯನ್ನುದ್ದೇಶಿಸಿ ಮಾವಳ್ಳಿ ಶಂಕರ್, ಎಸ್.ವೈ.ಗುರುಶಾಂತ್, ಗೋಪಾಲಕೃಷ್ಣ ಮುಂತಾದವರು ಮಾತನಾಡಿದರು.

ದಿನಾಂಕ: 18 ಜನವರಿ2013

ಇವರಿಗೆ,
ಮಾನ್ಯ ಮುಖ್ಯಮಂತ್ರಿಯವರು,
ಕರ್ನಾಟಕ ಸರಕಾರ,
ಬೆಂಗಳೂರು

ಮಾನ್ಯರೇ,

ವಿಷಯ: **ಮಡೆಸ್ನಾನ ಮತ್ತು ಪಂಕ್ತಿಬೇಧ ಆಚರಣೆಗಳನ್ನು ನಿಷೇಧಿಸಲು ಒತ್ತಾಯಿಸಿ ಸಾಹಿತಿಗಳು, ಕಲಾವಿದರು, ಸಾಂಸ್ಕೃತಿಕ-ಸಾಮಾಜಿಕ ರಂಗದ ಚಿಂತಕರು, ವಿಜ್ಞಾನಿಗಳು, ನ್ಯಾಯವಾದಿಗಳು, ಸಾಮಾಜಿಕ ಕಾರ್ಯಕರ್ತರು, ಸಂಘಟನೆಗಳು ಮುಂತಾದ ಪ್ರಮುಖರು ಮಾಡಿದ ಮನವಿ**

ಭಾರತ ಸಂವಿಧಾನವು ದೇಶದ ಪ್ರಜೆಗಳ ಜಾತಿ ಬೇಧವನ್ನು ಮೀರಿದ ಸಮಾನತೆಯನ್ನು ಸಾರಿದೆ. ಇತ್ತೀಚೆಗೆ ನಮ್ಮ ಸರ್ಕಾರ ಬಹು ಉತ್ಸಾಹದಿಂದ ಯಾರ ನೂರೈವತ್ತನೇ ಜಯಂತಿಯನ್ನು ಆಚರಿಸಿತೋ ಆ ಪೂಜ್ಯ ವಿವೇಕಾನಂದರು 'ಜಾತಿ ವ್ಯವಸ್ಥೆಯ ಪಿಡುಗನ್ನು ತೊಲಗಿಸದೇ ಭಾರತದ ಅಭಿವೃದ್ಧಿ ಸಾಧ್ಯವಿಲ್ಲ. ನಮ್ಮ ದೇಶದಲ್ಲಿ ನಡೆಯುವ ಮತಾಂತರಕ್ಕೆ ಜಾತಿಬೇಧವೇ ಕಾರಣ'ವೆಂದು ಘಂಟಾಘೋಷವಾಗಿ ಸಾರಿದ್ದಾರೆ. ಆದಿಕವಿ ಪಂಪನಿಂದ ಆರಂಬಿಸಿ ಕನ್ನಡದ ಮಹಾಕವಿಗಳು ಜಾತಿ ವ್ಯವಸ್ಥೆಯನ್ನು ವಿರೋಧಿಸಿದ್ದಾರೆ. ಬಸವಾದಿ ವಚನಕಾರರಂತೂ ಜಾತಿ ವ್ಯವಸ್ಥೆಯನ್ನು ತೊಲಗಿಸಲು ದೊಡ್ಡ ಸಂಘರ್ಷವನ್ನೇ ಹೂಡಿದರು. ಉಡುಪಿಯ ಮಾಧ್ವ ಪರಂಪರೆಯ ಕನಕದಾಸರು ಪರಿಪರಿಯಾಗಿ ಜಾತಿ, ಕುಲ ಬೇಧಗಳನ್ನು ಖಂಡಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಸಮಾಜದ ವಿವಿಧ ಕ್ಷೇತ್ರಗಳನ್ನು ಪ್ರತಿನಿಧಿಸುವ ನಾವು ತಮ್ಮನ್ನು ಒತ್ತಾಯಿಸುವುದೇನೆಂದರೆ:

1. ಸಂವಿಧಾನವನ್ನು ಎತ್ತಿಹಿಡಿಯುವುದಕ್ಕೆ ಕರ್ತವ್ಯ ಬದ್ಧವಾಗಿರುವ ಕರ್ನಾಟಕ ಸರ್ಕಾರವು ಜಾತಿ ಬೇಧದ ಬಹಿರಂಗ ಆಚರಣೆಯಾದ ಪಂಕ್ತಿ ಭೇದವನ್ನು ಉಡುಪಿಯ ಶ್ರೀ ಕೃಷ್ಣನ ದೇವಾಲಯ-ಮಠದಲ್ಲಿಯೂ, ಅಲ್ಲದೇ ಇಂತಹ ಪದ್ಧತಿ ಆಚರಣೆಯಲ್ಲಿರುವ ಯಾವುದೇ ದೇವಾಲಯ ಹಾಗೂ ಮಠಗಳಲ್ಲಿಯೂ ನಿಷೇಧಿಸಬೇಕು.

2. ಪಂಕ್ತಿಬೇಧದ ಆಚರಣೆಯು ಮಡೆಸ್ನಾನಕ್ಕೆ ಮೂಲವಾಗಿದೆ. ಪಂಕ್ತಿಬೇಧದ ಆಚರಣೆಯನ್ನು ಅವಲಂಬಿಸಿರುವ, ಮೇಲ್ಜಾತಿಯವರು ಉಂಡು ಬಿಟ್ಟ ಎಂಜಲೆಲೆಗಳ ಮೇಲೆ ಉರುಳಾಡುವ ಅಸಹ್ಯಕರ ಮಡ-ಮಡೆ ಸ್ನಾನವನ್ನೂ ನಿಷೇಧಿಸಬೇಕು. ಅದಕ್ಕೆ ಬದಲಾಗಿ ಎಡೆಸ್ನಾನಕ್ಕೆ ಅವಕಾಶ ಮಾಡಿಕೊಡುವುದೂ ಅಷ್ಟೇ ಮೂಢ ನಂಬಿಕೆಯ ಪದ್ಧತಿಯಾಗಿದೆ. ಅದಕ್ಕೆ ಸರ್ಕಾರ ಅವಕಾಶ ಮಾಡಿ ಕೊಡಬಾರದು.

3. ಅಲ್ಲದೇ ಇದೇ 2012 ಡಿಸೆಂಬರ್ 27ರಂದು ಉಡುಪಿಯಲ್ಲಿ ಸಿಪಿಐ(ಎಂ) ನೇತೃತ್ವದಲ್ಲಿ ಪ್ರಜಾಸತ್ತಾತ್ಮಕ ರೀತಿಯಲ್ಲಿ ಪ್ರತಿಭಟಿಸುತ್ತಿದ್ದವರ ಮೇಲೆ ದುರುದ್ದೇಶದಿಂದ ಅನಗತ್ಯವಾದ ಲಾಠಿ ಪ್ರಹಾರ ನಡೆಸಿ 182 ಜನರ ಮೇಲೆ ಹೂಡಲಾದ ಮೊಕದ್ದಮೆಗಳನ್ನು ಕೂಡಲೇ ಹಿಂಪಡೆಯಬೇಕು.

ಈ ದೆಶೆಯಲ್ಲಿ ತಾವು ಸೂಕ್ತ ಕ್ರಮ ವಹಿಸುವಿರೆಂದು ಆಶಿಸುತ್ತೇವೆ.

ನಿರೀಕ್ಷೆಗಳೊಂದಿಗೆ,

ತಮ್ಮ ವಿಶ್ವಾಸಿಗಳಾದ

ಕ್ರಸಂ	ಹೆಸರು	ವಿವರ	ಸಹಿ

ಬೆಳ್ತಂಗಡಿ

ಭೂಹೀನರ ಪರ ಭೂ ಆಕ್ರಮಣಕ್ಕೆ ಮುಂದಾದ ಕೆಂಬಾವುಟ ಚಳುವಳಿಗಾರರ ಮೇಲೆ ಆಕ್ರಮಣಕ್ಕೆ ನಿಂತಿರುವ ಕೇಸರಿ ಪಡೆ

ಶೇಖರ್.ಎಲ್

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯಲ್ಲಿ ಸಿಪಿಐ(ಎಂ) ನೇತೃತ್ವದಲ್ಲಿ ಕೆಂಬಾವುಟ ನೆರಳಲ್ಲಿ ಭೂಹೀನ ಬಡವರಿಂದ ಸರ್ಕಾರಿ ಭೂ ಆಕ್ರಮಣ ಚಳುವಳಿ ನಡೆಯುತ್ತಿದೆ. ಇಂತಹ ಜನಪರ ಚಳುವಳಿಯನ್ನು ಸಹಿಸಲಾರದ ಬಿಜೆಪಿ, ಬಜರಂಗದಳ ಮುಂತಾದ ಸಂಘ ಪರಿವಾರದ ಗೂಂಡಾಗಳು ಹೋರಾಟಗಾರರ ಮೇಲೆ ಹಲ್ಲೆ ನಡೆಸಿದ್ದಾರೆ. ಈ ನೀಚ ಹಲ್ಲೆ ಅವರು ಯಾರ ಪರ ಇದ್ದಾರೆ ಎಂಬುದನ್ನು ತೋರಿಸುತ್ತದೆ.

ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ನಿವೇಶನಕ್ಕಾಗಿ, ಅನಧಿಕೃತ ನಿವೇಶನದಾರರಿಗೆ ಹಕ್ಕುಪತ್ರಕ್ಕಾಗಿ, ಬಗರ್ ಹುಕಂ ಕೃಷಿ ಮಾಡಿದ ರೈತರಿಗೆ ಸಾಗುವಳಿ ಚೀಟಿಗಾಗಿ ಒತ್ತಾಯಿಸಿ ಕಳೆದ ಮೂರು ವರ್ಷಗಳಿಂದ ನಿರಂತರ ಚಳವಳಿ ನಡೆಸುತ್ತಾ ಬರಲಾಗಿದೆ. ನಿವೇಶನ ರಹಿತರಿಂದ ತಾಲೂಕು ಕಚೇರಿಗೆ, ತಾಲೂಕು ಪಂಚಾಯಿತ್ತಿಗೆ ಸುಮಾರು 5,000 ದಷ್ಟು ಅರ್ಜಿ ಕೂಡಾ ಸಲ್ಲಿಸಲಾಗಿದೆ. ಅಕ್ರಮ-ಸಕ್ರಮ ಅರ್ಜಿಯಂತೂ ಸಾವಿರಾರು ಸಂಖ್ಯೆಯಲ್ಲಿ ಇತ್ಯರ್ಥವಾಗಲು ಬಾಕಿ ಇವೆ.

ಜಾಗೃತಿ ಜಾತಾ :

ಈ ವರ್ಷ ಜನವರಿ 9ರಿಂದ 13, 2013ರ ತನಕ 5ದಿನ ತಾಲೂಕಿನ 81 ಗ್ರಾಮಗಳಿಗೂ ವಾಹನ ಜಾತಾ ನಡೆಸಿ ಹೋರಾಟವನ್ನು ತೀವ್ರಗೊಳಿಸಲು ಜನ ಜಾಗೃತಿ ನಡೆಸಲಾಯಿತು. ಗ್ರಾಮಗಳ ಎಲ್ಲಾ ಹೋರಾಟ ಸಮಿತಿಗಳ ಸದಸ್ಯರು ಮನೆಮನೆ ತೆರಳಿ ಪ್ರಚಾರ ನಡೆಸಿದ್ದರು. ಅಕ್ರಮ-ಸಕ್ರಮಕ್ಕಾಗಿ 20 ವರ್ಷದ ಹಿಂದೆ ಅರ್ಜಿ ಸಲ್ಲಿಸಿ ಹಕ್ಕುಪತ್ರ ಸಿಗದವರು, ಸರಕಾರಿ ಭೂಮಿಯಲ್ಲಿ ಮನೆಕಟ್ಟಿ ವಾಸ್ತವ್ಯವಿದ್ದು ಹಕ್ಕುಪತ್ರ ಸಿಗದವರು, ನಿವೇಶನ ರಹಿತರು ವಾಹನ ಜಾತಾ ಸ್ವಾಗತಕ್ಕೆ ಉತ್ಸಾಹದಿಂದ ಸೇರಿಸಿದ್ದರು.


ಜನವರಿ 15 2013 ರಂದು ಸರಕಾರಿ ಭೂಮಿ ಅತಿಕ್ರಮಿಸಿ ಮನೆ ಕಟ್ಟಿ ವಾಸ ಹೂಡುವ ಹೋರಾಟ ನಡೆಸುವ ಗಟ್ಟಿ ನಿರ್ಧಾರ ಚಳುವಳಿಗಾರರದಾಗಿತ್ತು. ಈ ಬಗ್ಗೆ ಸರಕಾರಕ್ಕೆ ಮುಂಚೆಯೇ ತಿಳಿಸಲಾಗಿತ್ತು.

ತೀವ್ರಗೊಂಡ ಚಳವಳಿ

ಪೂರ್ವನಿಗದಿಯಂತೆ ಜನವರಿ 15, 2013 ರಂದು ಉಜಿರೆ ಗ್ರಾಮದ ಅರಳಿಯಲ್ಲಿ, ಪಾರೆಂಕಿ ಗ್ರಾಮದ ಸಾಲ್ಮರ, ಹಾರಬೆಗಳಲ್ಲಿ ಸುಮಾರು 300ಕ್ಕೂ ಮಿಕ್ಕಿ ಗುಡಿಸಲು ನಿರ್ಮಿಸಲಾಯಿತು. ಜನರು ಅಲ್ಲೇ ಅನ್ನ ಬೇಯಿಸಿ ಊಟ ಮಾಡತೊಡಗಿದರು.


ತಹಸೀಲ್ದಾರ್ ಬೆದರಿಕೆ

ಗುಡಿಸಲು ನಿರ್ಮಾಣ ಸು. ಬೆಳಗ್ಗೆ 10ಗಂಟೆಗೆ ಪೂರ್ಣಗೊಂಡು ನಿವೇಶನ ರಹಿತರು ವಾಸ್ತವ್ಯ ಹೂಡಿದ್ದರು. ಸುಮಾರು 11 ಕ್ಕೆ ಉಜಿರೆ ಗ್ರಾಮ ಪಂಚಾಯ್ತು ಪಿಡಿಒ ಅಕ್ಷರು ಬಾಲಕೃಷ್ಣ, ತಾಲೂಕು ಪಂಚಾಯ್ತು ಅಧ್ಯಕ್ಷರಾದ ಕೇಶವ ಮೊದಲಾದವರು ಸ್ಥಳಕ್ಕೆ ಬೇಟಿ ನೀಡಿ ಒಕ್ಕಲೇಳುವಂತೆ ಒತ್ತಾಯಿಸಿದರು. ಆದರೆ ಹೋರಾಟಗಾರರದ್ದು ಒಂದೇ ಮಾತು. "ನಮಗೆ ನಿವೇಶನ ಕೊಡಿ. ಅಲ್ಲಿಗೆ ಹೋಗುತ್ತೇವೆ. ಈಗ ಏಳಿಸಿ ಬೀದಿಪಾಲು ಮಾಡಬೇಡಿ". ಮದ್ಯಾಹ್ನ 1.30 ಕ್ಕೆ ತಹಶೀಲ್ದಾರರು ಬಂದು ಒಕ್ಕಲೇಳಲು ಸೂಚಿಸಿದರು. ಅವರಿಗೂ ಆದೇ ಮಾತು. ಜೈಲಿಗೆ ಹಾಕ್ತೇನೆ, ಲಾಠಿ ಚಾರ್ಜ್ ಮಾಡುತ್ತೇನೆಂಬ ಬೆದರಿಕೆ ತಹಶೀಲ್ದಾರರದ್ದು. ಆದರೆ ಆ ಬೆದರಿಕೆಗೆ ಯಾರು ಬಗ್ಗಲಿಲ್ಲ.



ಬಡಪಾಯಿಗಳ ಮೇಲೆ ಬ್ರಹ್ಮಾಸ್ತ್ರ ನ್ಯಾಯವೇ?

ಸಿಪಿಐ(ಎಂ) ಮುಖಂಡ ಬಿ.ಎಂ.ಭಟ್ ಅವರು ತಹಶೀಲ್ದಾರರಲ್ಲಿ ಶ್ರೀಮಂತರ ಆಕ್ರಮಣ ತೆರವುಗೊಳಿಸಲಾಗದ ನೀವು ಬಡಪಾಯಿಗಳ ಮೇಲೆ ಯಾಕೆ ಬ್ರಹ್ಮಾಸ್ತ್ರ ಹೂಡುತ್ತೀರಿ? ಎಂದಾಗ ತಹಶೀಲ್ದಾರರದ್ದು ಮೌನದ ಉತ್ತರ.





ಕೊನೆಗೆ ಎ.ಸಿ. ಬರುತ್ತಾರೆ ಅವರ ಸೂಚನೆ ಪ್ರಕಾರ ಕ್ರಮ ಕೈಗೊಳ್ಳುತ್ತೇನೆ ಎಂದು . ಹೇಳಿ ತಹಶೀಲ್ದಾರರು ಹಿಂತಿರುಗಿದರು.

ಜನವರಿ 16, 2013 ರಂದು ತಾಲೂಕು ಕಚೇರಿ ಎದುರು ಹೋರಾಟ. ಸ್ಥಳಕ್ಕೆ ಬಂದ ಉಪ ತಹಶೀಲ್ದಾರರು ಹಾಗೂ ಇ.ಓ. ಅವರಿಗೂ ನಂತರ ಎ.ಸಿ.ಯವರೊಂದಿಗಿನ ಮುಖಂಡರ ಮಾತುಕತೆಯಲ್ಲೂ ಇದನ್ನೇ ಸ್ಪಷ್ಟಪಡಿಸಲಾಯಿತು. ಮುಖಂಡರುಗಳಾದ ವಸಂತ ನಡ, ಲಾರೆನ್ಸ್, ಬದ್ರುದ್ದೀನ್, ಯುವರಾಜ್, ಸಂಜೀವ ನಾಯ್ಕ, ಸುಮಲತ, ನೆಬಿಸ, ಪ್ರಶಾಂತ್, ಬಿ.ಎಂ.ಭಟ್, ಶೇಖರ. ಎಲ್, ರಾತ್ರಿ-ಹಗಲು ಹೋರಾಟಗಾರರ ಜೊತೆಗೆನೇ ಇದ್ದು ಹೋರಾಟಕ್ಕೆ ನೇತೃತ್ವ ನೀಡಿದರು. ಶಿವಕುಮಾರ್, ನಾರಾಯಣ, ಬಾಲಕೃಷ್ಣ ಪೂಜಾರಿ, ಜಯರಾಂ ಮಯ್ಯ, ಅಬ್ದುಲ್ ರಝಾಕ್, ಸೆಬಿನಾ, ನೇತ್ರ, ಕೈರುನ್ನೀಸಾ, ನಿಲೇಶ್ ಮೊದಲಾದವರು ಜೊತೆಗೆ ಕೈಜೋಡಿಸಿದರು. ಸಿಪಿಐ(ಎಂ) ಪಕ್ಷದ ಹರಿದಾಸ, ಸುಕನ್ಯಾ, ಶಾಮರಾಜ್, ಕಿರಣ ಪ್ರಭಾ, ರೋಹಿಣಿ, ಲೋಕೇಶ್, ಈಶ್ವರಿ, ಸೌಮ್ಯ, ಸುರೇಖಾ, ದಾಮೋದರ ಭಟ್ ಜೊತೆಗೆ ಬಿ.ಕೆ. ವಸಂತ ಮೊದಲಾದವರ ಸಹಾಯವೂ ಈ ಹೋರಾಟದ ಜೊತೆಗಿತ್ತು.

ಬಿಜೆಪಿ ತಗಾದೆ

ಜನವರಿ 16 ರಂದು ಮಧ್ಯಾಹ್ನದಿಂದಲೇ ಬಿಜೆಪಿಯ ಕೆಲವು ಕಾರ್ಯಕರ್ತರು, " ಈ ನಿರ್ಗತಿಕರಿಗೆ ಇಲ್ಲಿ ನಿವೇಶನ ನೀಡಬಾರದು..., ಮುಸ್ಲಿಮರು ಇಲ್ಲಿ ಕೂರಬಾರದು..." ಎಂದು ತಗಾದೆ ಎತ್ತ ತೊಡಗಿದರು. ಉಜಿರೆಯಲ್ಲಿ ಕುಳಿತ 250 ಜನರ ಪೈಕಿ ಸುಮಾರು 100 ರಷ್ಟು ಜನ ಮುಸ್ಲಿಂ ಸಮುದಾಯದವರಿದ್ದಾರೆ. 150ಕ್ಕೂ ಮಿಕ್ಕಿ ಹಿಂದುಗಳೂ ಇದ್ದರು. ಆದರೆ ಹಿಂದುಗಳೂ ಇದ್ದರಲ್ಲಾ ಎಂದಾಗ "ಅವರು ಉಜಿರೆಯವರೇ ಆಗಿರಬೇಕು ಹೊರಗಿನವರಿಗಿಲ್ಲ, ಮುಸ್ಲಿಮರಾದರೆ ಉಜಿರೆಯವರಿಗೆ ಕೂಡ ಕೊಡುವುದಿಲ್ಲ " ಎಂದೂ ತಾವೇ ಸರಕಾರ ಎಂಬ ಮಾತಾಡ ತೊಡಗಿದರು. ಈ ಹಿನ್ನೆಲೆಯಲ್ಲಿ ಹೋರಾಟಕ್ಕೆ ಪೋಲೀಸ್ ರಕ್ಷಣೆ ನೀಡಬೇಕು ಎಂದು ಬೆಳ್ತಂಗಡಿ ಪೋಲೀಸ್ ಠಾಣೆಗೆ ಮನವಿ ನೀಡಲಾಯಿತು. ಆ ಪ್ರಕಾರ ಅಂದು ಪೋಲಿಸರು ರಕ್ಷಣೆ ನೀಡಿದರು.

ಏಕಾಏಕಿ ಬಂಧನ

ಆದರೆ ಜನವರಿ 17 ರಂದು ಪುತ್ತೂರು ಎ.ಸಿ.ಯವರು ಏಕಾಏಕಿ ಪೋಲೀಸರ ಮೂಲಕ ನಿರಾಶ್ರಿತರನ್ನು ಬೆದರಿಸುತ್ತಾ ಎಲ್ಲರನ್ನು ಜೈಲಿಗೆ ಹಾಕುತ್ತೇವೆ ಎಂದು ಹೇಳುತ್ತಾ ಒಕ್ಕಲೆಬ್ಬಿಸ ತೊಡಗಿದರು. ಈ ವಿಚಾರ ತಿಳಿದು ಬಿ.ಎಂ.ಭಟ್ ಸ್ಥಳಕ್ಕೆ ಬಂದಾಗ ಎಲ್ಲರನ್ನು ಒಕ್ಕಲೆಬ್ಬಿಸಿ ಆಗಿತ್ತು.

ಅಡ್ಡ ಹಾಕಿ ಹಲ್ಲೆ

ಈ ಹಂತದಲ್ಲಿ ನಿವೇಶನ ಸಿಗುವ ತನಕ ತಹಶೀಲ್ದಾರರ ಕಚೇರಿ ಮುಂದೆ ಕೂರಲು ನಿರ್ಧರಿಸಿ ಎಲ್ಲರೂ ಹಿಂತಿರುಗಿದರು. ಬಿ.ಎಂ.ಭಟ್ ಕಾರಲ್ಲಿ ಎ.ಸಿ. ಅವರ ಕಾರಿನ ಹಿಂದೆ ಬರುತ್ತಿದ್ದಾಗ ಬಿಜೆಪಿ ಗೂಂಡಾ ಕಾರ್ಯಕರ್ತರು ಕಾರು ತಡೆದು ನಿಲ್ಲಿಸಿ ಬಿ.ಎಂ.ಭಟ್ ಕೂತ ಸೀಟಿನ ಬಾಗಿಲಿನ ಗಾಜು ಒಡೆದು ಹಲ್ಲೆ ಮಾಡಿದರಲ್ಲದೆ, ಬಾಗಿಲು ತೆಗೆದು ಹೊರ ಹಾಕಲು ಪ್ರಯತ್ನಿಸಿದರು. ಆದರೆ ಕಾರಿನ ಬಾಗಿಲಿನ ಲಾಕ್ ಹಾಕಿದ್ದ ಕಾರಣ ಬಾಗಿಲು ತೆಗೆಯಲಾರದೆ ಹೊರಗಿನಿಂದಲೇ ಹೊಡೆಯ ತೊಡಗಿದರು. ದೊಡ್ಡ ಜಲ್ಲಿ ಕಲ್ಲಿನಿಂದ ತಲೆ ಒಡೆಯಲು ಬಂದಾಗ ಕಾರಿನ ಹಿಂದೆ ಕೂತವರಿಂದಾಗಿ ತಪ್ಪಿ ಹೋಯಿತು. ಬಿ.ಎಂ.ಭಟ್ ಅವರನ್ನು ಕುರಿತು "ಇವನ ಜೀವ ತೆಗೆಯದೆ ತಮ್ಮ ಊರು ಉದ್ದಾರ ಆಗಲ್ಲ. ಇವನ ಅಪ್ಪನ ಭೂಮಿಯ ? ಈ ರೀತಿ ಭೂಮಿ ಹಂಚಲು ಇವನ್ಯಾರು? ಕೊಲ್ಲಿ ಕೊಲ್ಲಿ ಈ ಭಟ್ಟನನ್ನು ಕೊಲ್ಲಿ" ಎಂದು ಹೊಡೆಯ ತೊಡಗಿದರು.



ಪುಟ 10 ಕ್ಕೆ

6ನೇ ಅಖಿಲ ಭಾರತ ಬೀಡಿ ಕಾರ್ಮಿಕರ ಸಮ್ಮೇಳನ

ಸಾವಿರ ಬೀಡಿಗೆ ಕನಿಷ್ಟ ಕೂಲಿ ರೂ.200, ಕಾರ್ಮಿಕ ಕಾನೂನು ಜಾರಿ ನೀತಿಯಿಂದ ಕೆಲಸ ಕಳಕೊಂಡವರಿಗೆ ಪರಿಹಾರಕ್ಕೆ ಆಗ್ರಹ

ದೇಶದಲ್ಲಿ ಸರಿ ಸುಮಾರು 90 ಲಕ್ಷ ಬೀಡಿ ಕಾರ್ಮಿಕರಿಗೆ ರಾಷ್ಟ್ರೀಯ ಸಾಮಾನ್ಯ ಕನಿಷ್ಠ ಕೂಲಿ, ಸಾವಿರ ಬೀಡಿಗೆ 200 ರೂ ಹಾಗೂ ತುಟ್ಟಿಭತ್ಯೆ 2011ರ ಬೆಲೆ ಏರಿಕೆ ಸೂಚ್ಯಂಕಕ್ಕೆ ಅಂಕ ಒಂದಕ್ಕೆ 5 ಪೈಸೆ ತುಟ್ಟಿಭತ್ಯೆ-ಅದನ್ನು ಸುಪ್ರೀಂ ಕೋರ್ಟ್ ತೀರ್ಪಿನ ಅನ್ವಯ 25% ಹೆಚ್ಚು ಒಳಗೊಂಡು ನಿಗದಿಗೊಳಿಸುವಂತೆ ವಾರಂಗಲ್‌ನಲ್ಲಿ ಜನವರಿ 4 ರಿಂದ 6-2013ರವರೆಗೆ ನಡೆದ 6ನೇ ಅಖಿಲ ಭಾರತ ಬೀಡಿ ಕಾರ್ಮಿಕರ ಸಮ್ಮೇಳನವು ಆಗ್ರಹಿಸಿತು.

ಬೀಡಿ ಕಾರ್ಮಿಕರಿಗೆ ಗುರುತಿನ ಚೀಟಿ, ಲಾಗ್‌ಪುಸ್ತಕ ಹಾಗೂ ಪಿ.ಎಫ್.ಗೆ ಒಳಪಡಿಸದೆ ವಂಚಿಸುತ್ತಿರುವ ಮಾಲೀಕರ ಮೇಲೆ ಕ್ರಮ ಕೈಗೊಂಡು ಕಾರ್ಮಿಕರಿಗೆ ನ್ಯಾಯ ಒದಗಿಸಬೇಕು. ಬೀಡಿ ಹಾಗೂ ಸಿಗಾರ್ ಕಾರ್ಮಿಕರ ಸೇವಾ ಷರತ್ತುಗಳ ಕಾಯ್ದೆ 1966ಕ್ಕೆ ಸೂಕ್ತ ತಿದ್ದುಪಡಿ ಮಾಡಬೇಕು. ಕೇಂದ್ರ ಸರ್ಕಾರದ ಧೂಮಪಾನ ನಿಷೇಧ ಕಾಯ್ದೆ, ತಂಬಾಕು ನಿಯಂತ್ರಣ ನೀತಿಗಳಿಂದಾಗಿ ಕೆಲಸ ಕಳಕೊಂಡು ನಿರುದ್ಯೋಗಿಗಳಾಗಿರುವ ಬೀಡಿ ಕಾರ್ಮಿಕರಿಗೆ ಸೂಕ್ತ ಪರಿಹಾರ ನೀಡಬೇಕೆಂದು ಒತ್ತಾಯಿಸಿ ಹೋರಾಟಕ್ಕೆ ಮುಂದಾಗಲು ಸಮ್ಮೇಳನವು ತೀರ್ಮಾನಿಸಿದೆ.

ದೇಶದ ಬೀಡಿ ಉತ್ಪಾದನೆಯಲ್ಲಿ ತೊಡಗಿರುವ 13 ರಾಜ್ಯಗಳ 288 ಪ್ರತಿನಿಧಿಗಳು ಭಾಗವಹಿಸಿದ ಸಮ್ಮೇಳನವು ಜನವರಿ 4, 2013 ರಂದು ಬೃಹತ್ ಬೀಡಿ ಕಾರ್ಮಿಕರ ರ‍್ಯಾಲಿ ಹಾಗು ಬಹಿರಂಗ ಸಭೆಯ ಮೂಲಕ ಆರಂಭಗೊಂಡಿತು.

ಬಹಿರಂಗ ಸಭೆಯನ್ನು ಸಿಪಿಐ(ಎಂ) ಸಂಸದೀಯ ಮುಖಂಡರಾದ ಕಾಂ. ಬಸುದೇವ ಆಚಾರ್ಯ ಅವರು ಉದ್ಘಾಟಿಸಿ ಮಾತನಾಡಿದರು. ದೇಶದ ಸಂಪತ್ತನ್ನು ಕೊಳ್ಳೆ ಹೊಡೆಯುತ್ತಿರುವ ಕಾಂಗ್ರೆಸ್ ನೇತೃತ್ವದ ಯುಪಿಎ-2 ಸರ್ಕಾರ ಬಡ ಜನ ಹಿತ ಬಲಿ ಕೊಟ್ಟು ಶ್ರೀಮಂತ ಕಾರ್ಪೊರೇಟ್ ಕಂಪನಿಗಳಿಗೆ ಲಕ್ಷಾಂತರ ಕೋಟಿ ರೂಪಾಯಿಗಳ ತೆರಿಗೆ ವಿನಾಯ್ತಿ ನೀಡುತ್ತಿದೆ. ಬೀಡಿ ಕಾರ್ಮಿಕರಿಗೆ-ಉದ್ಯಮಕ್ಕೆ ಮಾರಕವಾದ ರೀತಿಯಲ್ಲಿ ಮಿನಿ ಸಿಗರೇಟ್ ಉತ್ಪಾದಕರಿಗೆ ಸಹಕಾರಿಯಾಗಿ ವರ್ತಿಸಿದೆ ಎಂದು ಟೀಕಿಸಿದರು.

ಈ ಸಭೆಯಲ್ಲಿ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಸಂಗಾತಿಗಳಾದ ಮಹಮದ್ ನಿಜಾಮೊದ್ದೀನ್, ಸಿಐಟಿಯು-ಉತ್ತರ ಪ್ರದೇಶ ರಾಜ್ಯ ಅಧ್ಯಕ್ಷರಾದ ಸಾಯಿಬಾಬು, ಸೊಲ್ಲಾಪುರದ ಮಾಜಿ ಶಾಸಕ ಸಿಐಟಿಯು ಮಹಾರಾಷ್ಟ್ರ ಅಧ್ಯಕ್ಷರಾದ ನರಸಯ್ಯ ಆದಂ ಮಾಸ್ತರ್, ಸಿಐಟಿಯು ಅಖಿಲ ಭಾರತ ಉಪಾಧ್ಯಕ್ಷರಾದ ವೀರಯ್ಯ ಮಾತನಾಡಿದರು. ರಮಾ ಅಧ್ಯಕ್ಷತೆ ವಹಿಸಿದರು.

ವಾರಂಗಲ್‌ನ ರೈಲ್ವೆ ನಿಲ್ದಾಣದಿಂದ ಹೊರಟ ರ‍್ಯಾಲಿಯಲ್ಲಿ ವಿವಿಧ ವೇಷ ಭೂಷಣ ಕಲಾತಂಡಗಳು, ಏಕಾಶಿಲಾ ನಗರವಿಡೀ ಕೆಂಪು ಹೊದ್ದು ಕಂಗೊಳಿಸುತ್ತಿತ್ತು.

ಜನವರಿ3, 2013ರಂದು ಕಾಂ. ಎಂ.ಕೆ. ಪಂಧೆ ನಗರ ಕಾಂ. ತಾರುಲಾಲ್ ಮಂಡಲ್‌ವಾರ್ ಕಮಲಪತಿ ತ್ರಿಪಾಠಿ ನಗರದಲ್ಲಿ-ಸೊಲ್ಲಾಪುರದಲ್ಲಿ ಬೀಡಿ ಕಾರ್ಮಿಕರನ್ನು ಸಂಘಟಿಸುವಲ್ಲಿ ಅಪಾರವಾಗಿ ಶ್ರಮಿಸಿರುವ ಸಂಘದ ರಾಷ್ಟ್ರೀಯ ಉಪಾಧ್ಯಕ್ಷೆ ಕಾಂ. ಫಾತಿಮಾ ಬೇಗ್ ಅವರು ಧ್ವಜಾರೋಹಣ ನೆರವೇರಿಸಿದರು.



ನಂತರ ನಡೆದ ಪ್ರತಿನಿಧಿ ಅಧಿವೇಶನವನ್ನು ಸಿಐಟಿಯು ಅಖಿಲ ಭಾರತ ಅಧ್ಯಕ್ಷರಾದ ಕಾಂ. ಎ.ಕೆ. ಪದ್ಮನಾಭನ್ ಅವರು ಉದ್ಘಾಟಿಸಿದರು. ದೇಶದ ಬೀಡಿ ಕಾರ್ಮಿಕರ ಚಳುವಳಿಯಲ್ಲಿ ಸಿಐಟಿಯು ಪಾತ್ರ ವಿಶೇಷವಾಗಿ ಕಾಂ. ಎ.ಕೆ. ಗೋಪಾಲನ್ ಅವರ ಪಾತ್ರದ ಬಗ್ಗೆ ವಿವರಿಸಿದ ಅವರು ದೇಶದಲ್ಲಿ 95% ರಷ್ಟು ಅಸಂಘಟಿತ ಕಾರ್ಮಿಕರಿಗೆ ಯಾವುದೇ ಶಾಸನಾತ್ಮಕ ರಕ್ಷಣೆ ಸಿಗುತ್ತಿಲ್ಲ. ಕೆಲಸದ ಭದ್ರತೆ ಕನಿಷ್ಟ ಕೂಲಿ-ಸಾಮಾಜಿಕ ಭದ್ರತೆಗಳು ಇಲ್ಲ. ದುಡಿಯುವ ಈ ಕಾರ್ಮಿಕರ ಬಗ್ಗೆ ಸರ್ಕಾರಗಳಿಗೆ ಅಸಡ್ಡೆಯಿದೆ ಎಂದರು.

ಮನೆಯಲ್ಲಿ ಅಮ್ಮ ಮಕ್ಕಳು ಸೇರಿ ಬೀಡಿ ಕಟ್ಟಿದರೂ ಒಬ್ಬರ ಶ್ರಮ ಮಾತ್ರ ಲೆಕ್ಕಕ್ಕೆ ಬರುತ್ತದೆ ಎಂದ ಅವರು ದೇಶದಲ್ಲಿ ಒಟ್ಟು 64 ಲಕ್ಷ ಬೀಡಿ ಕಾರ್ಮಿಕರಿದ್ದಾರೆಂದು ಕೇಂದ್ರ ಸರ್ಕಾರ ದೇಶದ ಪಾರ್ಲಿಮೆಂಟ್‌ನಲ್ಲಿ ಕಳೆದ ಡಿಸೆಂಬರ್ 20-2012ರಂದು ಹೇಳಿಕೆ ನೀಡಿದೆ, ಆದರೆ ಇದು ನೈಜ ಸಂಖ್ಯೆಯಲ್ಲ ಎಂದರು. ದೇಶದಲ್ಲಿ ಎಲ್ಲಾ ಬೀಡಿ ಕಾರ್ಮಿಕರಿಗೂ ಗುರುತಿನ ಚೀಟಿ ಕೊಡಿಸುವಲ್ಲಿ ಸರ್ಕಾರ ವಿಫಲವಾಗಿದೆ ಎಂದೂ ಅವರು ಟೀಕಿಸಿದರು. ದೇಶದ ಸಂವಿಧಾನದ 'ಕಲ್ಯಾಣ ರಾಜ್ಯ'ದ ಪರಿಕಲ್ಪನೆಗೆ ಇತಿ ಶ್ರೀ ಹಾಡಿದ ಕೇಂದ್ರ ಕಾಂಗ್ರೆಸ್ ಸರ್ಕಾರ ನೂತನ ಆರ್ಥಿಕ ನೀತಿಗಳನ್ನು 22 ವರ್ಷಗಳ ಹಿಂದೆ ಆರಂಭಿಸಿದ್ದು ಅದೇ ನೀತಿಗಳನ್ನು ಬಿಜೆಪಿ ಸರ್ಕಾರ ಮುಂದುವರೆಸಿತು. ಇದರಿಂದಾಗಿ ಜನ ಸಾಮಾನ್ಯರ ಸಂಕಟಗಳು ಹೆಚ್ಚಿವೆ ಎಂದರು.

ಬೀಡಿ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಭಾಗವಾಗಿ ಗ್ರ್ಯಾಜ್ಯುಯಿಟಿಗೆ ಅವರು ಅರ್ಹರಾಗಿದ್ದಾರೆ ಎಂದು ದೇಶದ ಸುಪ್ರಿಂಕೋರ್ಟ್ ಆದೇಶಿಸಿದೆ. ಇದನ್ನು ಕಾರ್ಮಿಕರ ನಡುವೆ ಪ್ರಚಾರ ಮಾಡಿ ಪ್ರಯೋಜನ ಪಡೆಯುವಂತೆ ಸಂಘಗಳು ಗಮನ ಹರಿಸಬೇಕೆಂದು ಅವರು ಕೋರಿದರು.

ಪ್ರಧಾನ ಕಾರ್ಯದರ್ಶಿಗಳು ಮಂಡಿಸಿದ ಕರಡು ವರದಿಯ ಮೇಲೆ 11 ರಾಜ್ಯಗಳ 18 ಮಂದಿ ಚರ್ಚೆಯಲ್ಲಿ ಪಾಲ್ಗೊಂಡು ಚರ್ಚಿಸಿದರು. ಕರ್ನಾಟಕ ರಾಜ್ಯದ ಪರವಾಗಿ ಕಾಂ. ಬಿ.ಎಂ.ಭಟ್ ವಿಲಾಸನಿ, ಬಿ.ಮಾಧವ, ಅಬುಹಸನ್ ಖಾನ್, ಸಿ.ಕುಮಾರಿ ಚರ್ಚೆಯಲ್ಲಿ ಭಾಗವಹಿಸಿದರು. ರಾಮಚಂದ್ರನ್, ಫಾತಿಮಾ ಬೇಗ್ ಸಂಚಾಲನ ಸಮಿತಿಯಾಗಿ ಕಾರ್ಯನಿರ್ವಹಿಸಿ ಕಲಾಪಗಳನ್ನು ಸುಗಮವಾಗಿ ನೆರವೇರಿಸಿದರು.

"ಏಪ್ರಿಲ್-24, 2013 ಅಖಿಲ ಭಾರತ ಬೇಡಿಕೆ ದಿನ"

ಸಮ್ಮೇಳನವು ಬೀಡಿ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳ ಗಮನ ಸೆಳೆದು ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಲು ದೇಶಾದ್ಯಂತ ಬೀಡಿ ಕಾರ್ಮಿಕರ ಬೇಡಿಕೆ ದಿನದ ಅಂಗವಾಗಿ ಏಪ್ರಿಲ್ 24, 2013 ಕೇಂದ್ರ ಸರ್ಕಾರಿ ಕಛೇರಿಗಳ ಎದುರು ಧರಣಿ-ಪ್ರತಿಭಟನೆ ನಡೆಸಲು ಸಮ್ಮೇಳನವು ಕರೆ ನೀಡಿದೆ.

ಬೀಡಿಕಾರ್ಮಿಕರ ರಾಷ್ಟ್ರೀಯ ಸಾಮಾನ್ಯ ಕನಿಷ್ಟ ಕೂಲಿ ಕಾರ್ಮಿಕರ ಕಾನೂನು ಜಾರಿಗೆ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ, ಕನಿಷ್ಟ ಪಿಂಚಣಿ ಮಾಸಿಕ 3,000 ರೂ ಗೆ ಒತ್ತಾಯಿಸಿ, ಪಶ್ಚಿಮ ಬಂಗಾಳದಲ್ಲಿ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಹಾಗೂ ಕಾರ್ಮಿಕ ಹಕ್ಕುಗಳ ಮೇಲಿನ ದಾಳಿಗಳ ಖಂಡಿಸಿ ಸೌಹಾರ್ದ ಬೆಂಬಲ ವ್ಯಕ್ತಪಡಿಸಿ, 48 ಗಂಟೆಗಳ ಸಾರ್ವತ್ರಿಕ ಮುಷ್ಕರ ಫೆಬ್ರವರಿ 20, 21 2013 ಯಶಸ್ವಿಗೊಳಿಸಲು ಮುಂತಾಗಿ ಸಮ್ಮೇಳನವು ನಿರ್ಣಯ ಕೈಗೊಂಡಿತು.

ನೂತನ ಪದಾಧಿಕಾರಿಗಳು

ನೂತನ ಅಖಿಲ ಭಾರತ ಸಮಿತಿಗೆ ಅಧ್ಯಕ್ಷರಾಗಿ ಕರ್ನಾಟಕ ರಾಜ್ಯದ ಹಿರಿಯ ಕಾರ್ಮಿಕ ಮುಖಂಡರಾದ ಕಾಂ. ಬಿ. ಮಾಧವ, ಪ್ರಧಾನ ಕಾರ್ಯದರ್ಶಿಯಾಗಿ ಮಹಮದ್ ನಿಜಾಮುದ್ದೀನ್, ಖಜಾಂಜಿಯಾಗಿ ಪರಸ್ ಬಸು, ರಾಷ್ಟ್ರೀಯ ಉಪಾಧ್ಯಕ್ಷರಾಗಿ ಕರ್ನಾಟಕದ ಸಂಗಾತಿಗಳಾದ ಜೆ. ಬಾಲಕೃಷ್ಣ ಶೆಟ್ಟಿ ಮಂಗಳೂರು, ರಾಷ್ಟ್ರೀಯ ಕಾರ್ಯದರ್ಶಿಗಳಾಗಿ ಸೈಯದ್ ಮುಜೀಬ್ ತುಮಕೂರು, 'ವರ್ಕಿಂಗ್ ಸಮಿತಿ' ಸದಸ್ಯರಾಗಿ ಕರ್ನಾಟಕದಿಂದ ರಮಣಿ ಮೂಡಬಿದರೆ, ಬಿ.ಎಂ. ಭಟ್ ಬೆಳ್ತಂಗಡಿ, ಬಾಲಕೃಷ್ಣ ಶೆಟ್ಟಿ ಉಡುಪಿ, ಸಿ. ಕುಮಾರಿ ಮಂಡ್ಯ ಆಯ್ಕೆಯಾಗಿದ್ದಾರೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಮಾತು ಮತ್ತು ಕೃತಿಯ ನಡುವಿನ ಅಂತರ ಹೆಚ್ಚಿಸುವ ಕಾಂಗ್ರೆಸಿನ 'ಜೈಪುರ ಘೋಷಣೆ'

ಕಾಂಗ್ರೆಸ್ ಪಕ್ಷ ತನ್ನ ಜೈಪುರ 'ಚಿಂತನ ಶಿಬಿರ'ದಲ್ಲಿ ಅಂಗೀಕರಿಸಿದ ಘೋಷಣೆಯಲ್ಲಿ ಹಲವು ಟೊಳ್ಳು ದಾವೆಗಳಿವೆ, ಧಾರಾಳ ವಚನಗಳಿವೆ. ಆದರೆ ಸಾರಾಂಶ ಇಷ್ಟೆ: ಭಾರತ ಮತ್ತು ಭಾರತೀಯರು ಕಾಂಗ್ರೆಸ್ ಪಕ್ಷ ಹೇಳುವಂತೆ ಮಾಡಬೇಕು, ಅದು ಮಾಡುವಂತೆ ಅಲ್ಲ. ಈ ಠರಾವಿನ ಪ್ರಮುಖ ಅಂಶ ಮಾತ್ರ ಕಾಂಗ್ರೆಸ್ ಪಕ್ಷ ಮುಂಬರುವ ಚುನಾವಣೆಗಳಲ್ಲಿ ಜನತೆಯ ಬೆಂಬಲ ಕೇಳಲು ಮುಂದಿಡುವ ಅವೇ ಮೂರು ಮುಖ್ಯ ಘೋಷಣೆಗಳು : 'ನಿಮ್ಮ ದುಡ್ಡು ನಿಮ್ಮ ಕೈಗೆ' ಸ್ಕೀಮು, ರಾಷ್ಟ್ರೀಯ ಆಹಾರ ಭದ್ರತಾ ಶಾಸನ ಮತ್ತು ಭೂಸ್ವಾಧೀನದಲ್ಲಿ ಪರಿಹಾರ ಹಾಗೂ ಮರುವಸತಿ ಕುರಿತ ಒಂದು ಹೊಸ ಶಾಸನ. ಆದ್ದರಿಂದ ಭಾರತದ ಜನತೆ ಇನ್ನಷ್ಟು ಆರ್ಥಿಕ ದಾಳಿಗಳಿಗೆ ಮತ್ತು ವಿದೇಶಿ ಬಂಡವಾಳದ ಮೇಲೆ ಹೆಚ್ಚಿನ ಅವಲಂಬನೆಗೆ, ಅದರ ಪರಿಣಾಮವಾಗಿ ನಮ್ಮ ಸ್ವತಂತ್ರ ವಿದೇಶಾಂಗ ಧೋರಣೆಯ ಮೇಲೆ ಒತ್ತಡಗಳನ್ನು ಎದುರಿಸಲು ಸಿದ್ಧವಾಗಬೇಕಿದೆ.


ಸೀತಾರಾಮ ಯೆಚೂರಿ

ಕಾಂಗ್ರೆಸ್ ಪಕ್ಷ ತನ್ನ ಇತ್ತೀಚಿನ 'ಚಿಂತನಶಿಬಿರ'ದಲ್ಲಿ ಮುಂಬರುವ ಸಾರ್ವತ್ರಿಕ ಚುನಾವಣೆಗಳ ಶಂಖ ಊದಿದೆ. ಅದು ಅಂಗೀಕರಿಸಿರುವ 'ಜೈಪುರ ಘೋಷಣೆ' ಎಂಬ ವಿವರವಾದ ಠರಾವು ಒಂದು ಚುನಾವಣಾ ಪ್ರಣಾಳಿಕೆಯಂತೆಯೇ ಇದ್ದು, ಅದರಲ್ಲಿ ಈ ಗುರಿಯನ್ನು ಯಾವುದೇ ಸಂದೇಹಕ್ಕೆ ಎಡೆಯಿಲ್ಲದಂತೆ ಮುಂದಿಟ್ಟಿದೆ, ಪಕ್ಷ "ಮುಂದೆ 2013 ಮತ್ತು 2014ರಲ್ಲಿ ಬರಲಿರುವ ಚುನಾವಣಾ ಸಮರಗಳಿಗೆ ಸಿದ್ಧವಾಗುತ್ತಿದೆ" ಎಂದು ಹೇಳಿದೆ. ಈ ಘೋಷಣೆಯ ಪೀಠಿಕೆ, ಭಾರತ ಇಂದು ಇಷ್ಟೊಂದು ಬೆಳೆದಿದ್ದರೆ, ಅದು ಕೇವಲ "ಭಾರತದ ಐಕ್ಯತೆ, ಸಮಗ್ರತೆ, ಜಾತ್ಯಾತೀತ ರಾಜಕೀಯ ವ್ಯವಸ್ಥೆ ಮತ್ತು ಪ್ರಜಾಸತ್ತಾತ್ಮಕ ಒಕ್ಕೂಟ ತತ್ವಕ್ಕೆ ಕಾಂಗ್ರೆಸ್ ಪಕ್ಷ ಹಾಕಿಕೊಟ್ಟ ಅಡಿಪಾಯದಿಂದ ಮಾತ್ರ" ಎಂದು ಬಡಾಯಿ ಕೊಚ್ಚಿಕೊಂಡಿದೆ. "ದೇಶದ ಆರ್ಥಿಕಕ್ಕೆ, ವಿಶೇಷವಾಗಿ ನಿರ್ಣಾಯಕ ಸಂಕ್ರಮಣ ಗಳಿಗೆಗಳಲ್ಲಿ ದಿಕ್ಕು ನೀಡಿದ್ದು" ಕಾಂಗ್ರೆಸ್ ಪಕ್ಷ ಎಂದೂ ಹೇಳಲಾಗಿದೆ. ಭಾರತದ ಭವ್ಯತೆಯನ್ನು ಈ ರೀತಿ ಆವಾಹಿಸಿಕೊಂಡರೂ, ಈ ಠರಾವು, ಮಾತು ಮತ್ತು ಕೃತಿಯ ನಡುವೆ ಎಷ್ಟೊಂದು ಅಂತರ ಇರಲು ಸಾಧ್ಯ ಎಂಬುದಕ್ಕೆ ಜ್ವಲಂತ ಉದಾಹರಣೆ. ಈ ಸಮಸ್ತ ಘೋಷಣೆಯ ಸಾರಾಂಶ ಇಷ್ಟೆ: ಭಾರತ ಮತ್ತು ಭಾರತೀಯರು ಕಾಂಗ್ರೆಸ್ ಪಕ್ಷ ಹೇಳುವಂತೆ ಮಾಡಬೇಕು, ಅದು ಮಾಡುವಂತೆ ಅಲ್ಲ.

ಉದಾಹರಣೆಗೆ, ಪಕ್ಷ "ಎಲ್ಲರನ್ನು ಒಳಗೊಳ್ಳುವ ಬೆಳವಣಿಗೆಯ ಮಾದರಿಯನ್ನು ನಿರೂಪಿಸುವ ಆರ್ಥಿಕ ಬೆಳವಣಿಗೆ ಮತ್ತು ಸಾಮಾಜಿಕ ನ್ಯಾಯದ ಸೂತ್ರಗಳಿಗೆ ಮತ್ತೊಮ್ಮೆ ತನ್ನ ಬದ್ಧತೆಯನ್ನು ಸಾರುತ್ತದೆ.." ಎಂದು ಈ ಠರಾವು ಹೇಳುತ್ತದೆ. ನಿಜ ಹೇಳಬೇಕೆಂದರೆ, ಭಾರತೀಯ ಜನತೆಯ ಅನುಭವ ನವ-ಉದಾರವಾದಿ ಆರ್ಥಿಕ ಸುಧಾರಣೆಗಳ ಈ ದಶಕಗಳಲ್ಲಿ ತದ್ವಿರುದ್ಧ. ಜಿಡಿಪಿ ಬೆಳವಣಿಗೆ ದರಗಳು ಏರಿದಂತೆ ಎರಡು ಭಾರತಗಳ ನಡುವಿನ ಕಂದರವೂ ಏರಿದೆ. ಒಂದು ಕಡೆ, ದೇಶದ ಜಿಡಿಪಿಯ ಮೂರನೇ ಒಂದರಷ್ಟು ಆಸ್ತಿಗಳನ್ನು ಪೇರಿಸಿಕೊಂಡ 52 ಡಾಲರ್ ಬಿಲಿಯಾಧಿಪತಿಗಳು, ಇನ್ನೊಂದು ಕಡೆ, ದಿನಕ್ಕೆ 20ರೂ. ಕೂಡ ಖರ್ಚು ಮಾಡಲಿರದೆ ಬದುಕಲು ಹೆಣಗಾಡಬೇಕಾದ ನಮ್ಮ 80 ಕೋಟಿಗೂ ಹೆಚ್ಚು ಜನ.

ಟೊಳ್ಳು ದಾವೆಗಳು

ಮುಂದುವರೆದು "ಭಾರತ ರಾಷ್ಟ್ರೀಯ ಕಾಂಗ್ರೆಸ್ ಎಲ್ಲ ಮಟ್ಟಗಳಲ್ಲಿ, ವಿಶೇಷವಾಗಿ ಅಧಿಕಾರಶಾಹಿ ಮತ್ತು ರಾಜಕೀಯ ಮಟ್ಟಗಳಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಡುವಲ್ಲಿ ಮುಂಚೂಣಿಯಲ್ಲಿರುತ್ತದೆ" ಎಂದು ಠರಾವು ಹೇಳುತ್ತದೆ. ಟೊಳ್ಳು ದಾವೆಗಳ ಸಾಲಿನಲ್ಲಿ ಎಲ್ಲಕ್ಕೂ ಮುಂದೆ ಇರಬೇಕಾದ ದಾವೆ ಇದು. ಈ ಕಾಂಗ್ರೆಸ್ ಪಕ್ಷದ ನೇತೃತ್ವದ ಯುಪಿಎ-2 ಸರಕಾರದ ಮಾಜಿ ಮಂತ್ರಿಗಳು ಭ್ರಷ್ಟಾಚಾರದ ಆರೋಪಗಳ ಮೇಲೆ ಜೈಲುಗಳಲ್ಲಿ ಕೊಳೆಯುತ್ತಿದ್ದಾರೆ. ಸಿಎಜಿ ಮಹಾ ಭ್ರಷ್ಟಾಚಾರದ ಹಗರಣಗಳನ್ನು ಬಯಲಿಗೆಳೆಯುವ ವರದಿಗಳನ್ನು ಸಲ್ಲಿಸುತ್ತಲೇ ಇದೆ. ಬೃಹತ್ ಸ್ವರೂಪದ ಹಗರಣಗಳಿಗೆ ಆರ್ಥಿಕ ಸುಧಾರಣೆಗಳ ದಿಕ್ಪಥವೇ ಹಿಂದೆಂದೂ ಕಾಣದ ದಾರಿಗಳನ್ನು ತೆರೆದಿಟ್ಟಿದೆ.



ಕೃಪೆ : ಪ್ರಜಾವಾಣಿ

ಇದೇ ಧಾಟಿಯಲ್ಲಿ ಮುಂದುವರೆದು ಠರಾವಿನಲ್ಲಿ, "ಭಾರತದ ಮಾನವ ಅಭಿವೃದ್ಧಿಯ ಸವಾಲುಗಳನ್ನು ಎದುರಿಸುವ, ವಿಶೇಷವಾಗಿ ಹಸುಳೆಗಳು ಮತ್ತು ತಾಯಂದಿರ ಮರಣ ದರ, ನೀರು, ಶುಚಿತ್ವ ಮತ್ತು ಆರೋಗ್ಯಪಾಲನೆ ಹಾಗೂ ಗ್ರಾಮೀಣ, ನಗರ ಪ್ರದೇಶಗಳೆಡರಲ್ಲೂ ವಸತಿಯ ಸವಾಲುಗಳನ್ನು ಎದುರಿಸುವ ದೃಢ ರಾಜಕೀಯ ಬದ್ಧತೆ"ಯ ದಾವೆಯೂ ಇದೆ. ಹಾಗೇ ಮುಂದುವರೆದು "2020ರೊಳಗೆ ಭಾರತದಲ್ಲಿ ಹಸಿವು ಮತ್ತು ಅಪೌಷ್ಟಿಕತೆಯ ನಿರ್ಮೂಲನೆ" ಮಾಡುವ ವಚನವೂ ಇದೆ. ಕಾಂಗ್ರೆಸ್ ನೇತೃತ್ವದ ಯುಪಿಎ ಆಳ್ವಿಕೆಯಲ್ಲಿ ವಿಶ್ವ ಸಂಸ್ಥೆಯ ಮಾನವ ಅಭಿವೃದ್ಧಿಯಲ್ಲಿ ಭಾರತದ ಸ್ಥಾನ ಸತತವಾಗಿ ಕೆಳಗಿಳಿಯುತ್ತ ಬಂದಿದೆ ಎಂಬುದನ್ನು ನೆನಪಿಸಿಕೊಳ್ಳಿ. ಸ್ವತಃ ಪ್ರಧಾನ ಮಂತ್ರಿಗಳೇ ಕಳೆದ ವರ್ಷ ಮಕ್ಕಳಲ್ಲಿ ಅಪೌಷ್ಟಿಕತೆಯ ವಿಪರೀತ ಮಟ್ಟ ಒಂದು "ರಾಷ್ಟ್ರೀಯ ಅವಮಾನ" ಎಂದು ಮರುಗಿದ್ದರು.

ಈ "ರಾಷ್ಟ್ರೀಯ ಅವಮಾನ" ಎಷ್ಟೊಂದು ತೀವ್ರವಾಗಿದೆ ನೋಡಿ. ವಿಶ್ವಬ್ಯಾಂಕ್ ಸಾಪೇಕ್ಷ ಬಡತನವನ್ನು, ಅಂದರೆ ಮಕ್ಕಳಲ್ಲಿ ಕಡಿಮೆ ತೂಕ, ಮಕ್ಕಳ ಮರಣ ದರ ಮತ್ತು ಅಪೌಷ್ಟಿಕತೆ ಪೀಡಿತರ ಪ್ರಮಾಣ, ಈ ಮೂರು ಸೂಚಕಗಳ ಆಧಾರದಲ್ಲಿ ಹಸಿವಿನಿಂದ ನರಳುವ ಜನಗಳ ಪ್ರಮಾಣವನ್ನು ಲೆಕ್ಕ ಹಾಕುತ್ತದೆ. ಇದರಲ್ಲಿಯೂ 2012 ರ ಜಾಗತಿಕ ಹಸಿವು ಸೂಚ್ಯಂಕದ ಪ್ರಕಾರ ಭಾರತದ ಸ್ಥಾನ 79 ದೇಶಗಳಲ್ಲಿ 65ನೇ ಯದು. ನೆರೆಯ ಪಾಕಿಸ್ತಾನ ಮತ್ತು ನೇಪಾಳ ಇದಕ್ಕಿಂತ ಮೇಲಿನ ಸ್ಥಾನದಲ್ಲಿವೆ. ಇನ್ನೂ ಶೋಚನೀಯವೆಂದರೆ "ಮಕ್ಕಳ ಅಪೌಷ್ಟಿಕತೆಯ ಇತ್ತೀಚಿನ, 2005-10ರ ಮಾಹಿತಿಯ ಪ್ರಕಾರ ಕಡಿಮೆ ತೂಕದ ಮಕ್ಕಳ ವಿಷಯದಲ್ಲಿ, ಭಾರತದ ಸ್ಥಾನ 129 ದೇಶಗಳಲ್ಲಿ ಕೆಳಗಿನಿಂದ ಎರಡನೆಯದು. ಕೇವಲ ಟಿಮೊರ್-ಲೆಸ್ಟೆಯಲ್ಲಿ ಮಾತ್ರ ಕಡಿಮೆ ತೂಕದ ಮಕ್ಕಳ ಪ್ರಮಾಣ ಭಾರತಕ್ಕಿಂತ ಹೆಚ್ಚಿದೆ" ಎಂಬ ವಿಶ್ವಬ್ಯಾಂಕಿನ ಟಿಪ್ಪಣಿ. ಭಾರತದ ಜಾಗತಿಕ ಹಸಿವು ಸೂಚ್ಯಂಕ 1996ರಲ್ಲಿ 22.6 ಇತ್ತು, 2012ರಲ್ಲಿ ಅದು ಇನ್ನೂ ಹೆಚ್ಚಿ 22.9 ಆಗಿದೆ. ಇದೀಗ ಬಹುವಾಗಿ ಬೆನ್ನು ತಟ್ಟಿಕೊಳ್ಳುತ್ತಿರುವ ಎರಡು ದಶಕಗಳ 'ಸುಧಾರಣಾ ಪ್ರಕ್ರಿಯೆ'ಯ ಫಲಿತಾಂಶ.

ಧಾರಾಳ ವಚನಗಳು

ಇದೇ ರೀತಿ, ಠರಾವು "ಎಲ್ಲರಿಗೂ ಶಿಕ್ಷಣ, ಗುಣಮಟ್ಟದ ಶಿಕ್ಷಣ, ಅರ್ಹ ಶಿಕ್ಷಕರಿಂದ ಗುಣಮಟ್ಟದ ಬೋಧನೆ ಮತ್ತು ಸರಕಾರೀ ಶಾಲಾ ವ್ಯವಸ್ಥೆಯ ವಿಸ್ತರಣೆ, ಅದನ್ನು ಮೇಲ್ಮಟ್ಟಕ್ಕೇರಿಸುವ" ಭರವಸೆ ಕೊಡುತ್ತದೆ. ಶಿಕ್ಷಣದ ಹಕ್ಕು ಕೊಡಲು ಸಂವಿಧಾನದ ತಿದ್ದುಪಡಿ ಮಾಡಿ ವರ್ಷಗಳೇ ಸಂದರೂ ಅದನ್ನು ಇನ್ನೂ ಜಾರಿಗೆ ತಂದಿಲ್ಲ. ಅದೇ ವೇಳೆಗೆ ಸರಕಾರ ಶಿಕ್ಷಣವನ್ನು ಖಾಸಗೀಕರಿಸುವ, ವ್ಯಾಪಾರವಾಗಿ ಮಾಡುವುದನ್ನು ಕಾನೂನುಬದ್ಧಗೊಳಿಸುವ ಶಾಸನಗಳನ್ನು ತರುತ್ತಲೇ ಇದೆ. ಭಾರತದ ನಿಪುಣತೆ ಪಡೆದ ಮಾನವಶಕ್ತಿಯಲ್ಲಿ ಐದರಲ್ಲಿ ನಾಲ್ಕು ಭಾಗ ಖಾಸಗಿ ಸಂಸ್ಥೆಗಳಿಂದ ಬರುತ್ತಿದೆ, ಅತ್ತ ಅಮೆರಿಕಾದಲ್ಲೂ ಈ ಪ್ರಮಾಣ ನಾಲ್ಕರಲ್ಲಿ ಒಂದು ಮಾತ್ರ. ಸಾಕಷ್ಟು ಹಣ ಮತ್ತು ಸಿಬ್ಬಂದಿಯ ಕೊರತೆಯಿಂದ ಸರಕಾರೀ ಶಿಕ್ಷಣ ಸಂಸ್ಥೆಗಳು ನರಳುತ್ತಲೇ ಇವೆ, ಅವುಗಳನ್ನು ಬಲಿಗೊಟ್ಟು ಈ ರೀತಿಯಲ್ಲಿ ಖಾಸಗಿ ಮತ್ತು ವ್ಯಾಪಾರೀ ಶಿಕ್ಷಣ ವ್ಯವಸ್ಥೆ ವಿಸ್ತಾರಗೊಳ್ಳುತ್ತಿದೆ. ಆದರೂ ಕಾಂಗ್ರೆಸಿನ ಠರಾವಿನಲ್ಲಿ "ಪ್ರತಿವರ್ಷ ಒಂದು ಕೋಟಿ ಉದ್ಯೋಗಗಳನ್ನು ಸೃಷ್ಟಿಸುತ್ತೇವೆ ಮತ್ತು ಈ ಉದ್ಯೋಗಗಳನ್ನು ಸೇರಲು ಯುವಜನರಿಗೆ ತರಬೇತಿ ಕೊಡುತ್ತೇವೆ" ಎಂಬಿತ್ಯಾದಿ ವಚನಗಳು ಧಾರಾಳವಾಗಿವೆ.

ಆರ್ಥಿಕ ಧೋರಣೆಯ ವಿಭಾಗದಲ್ಲಿ, ಠರಾವು ಭಾರತೀಯ ರೈತನ ಸಮೃದ್ಧಿಯ ಮಾತಾಡುತ್ತದೆ, ಒಂದು ನ್ಯಾಯಪೂರ್ಣ, ಫಲದಾಯಕ ಕನಿಷ್ಠ ಬೆಂಬಲ ಬೆಲೆಯ ಭರವಸೆಗಳನ್ನು ಕೊಡುತ್ತದೆ. ಕಳೆದ ಎರಡು ವರ್ಷಗಳಲ್ಲಿ ಕೃಷಿ ಉತ್ಪನ್ನಗಳ ಉತ್ಪಾದನಾ ಖರ್ಚಿನ ಹೆಚ್ಚಳದ ಮಟ್ಟಗಳು ಸದಾ ಕನಿಷ್ಟ ಬೆಂಬಲ ಬೆಲೆಗಳ ಮಟ್ಟಗಳಿಗಿಂತ ಮೇಲೇಯೇ ಇದ್ದವು ಎಂಬುದನ್ನು ಸ್ವತಃ ಕೃಷಿ ಮಂತ್ರಿಗಳೇ ಸಂಸತ್ತಿನಲ್ಲಿ ಕೊಟ್ಟಿರುವ ಮಾಹಿತಿಗಳು ತಿಳಿಸಿರುವುದನ್ನು ಗಮನಿಸಿದ್ದೇವೆ. ನಮ್ಮ ಹತಾಶ ರೈತರು ಈಗಲೂ ಆತ್ಮಹತ್ಯೆಗಿಳಿಯುತ್ತಿದ್ದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ.

ಈ ಠರಾವು ನವ-ಉದಾರವಾದಿ ಆರ್ಥಿಕ ಸುಧಾರಣೆಗಳ ದಿಕ್ಪಥವನ್ನು ಸಮರ್ಥಿಸಿಕೊಳ್ಳುತ್ತದೆಯಷ್ಟೇ ಅಲ್ಲ, ಅದು ಹೆಚ್ಚೆಚ್ಚು "ಸಮೃದ್ಧಿ" ತಂದಿದೆ ಎಂದೂ

ಪುಟ 12ಕ್ಕೆ



ಕರ್ನಾಟಕ

ಬಿಜೆಪಿ ದುರಾಡಳಿತ ಮತ್ತು ದುಡಿಯುವ ಜನತೆಯ ದುರ್ಬರ ಸ್ಥಿತಿ

ಎಸ್. ಪ್ರಸನ್ನಕುಮಾರ್
ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ

ಕರ್ನಾಟಕ ರಾಜ್ಯದಲ್ಲಿ 2008 ಮೇ ತಿಂಗಳಲ್ಲಿ ದಕ್ಷಿಣ ಭಾರತದಲ್ಲಿ ಮೊದಲ ಬಿಜೆಪಿ ಸರಕಾರವು ಅಧಿಕಾರಕ್ಕೆ ಬಂದಿದೆ. ಕಳೆದ ಸಿ.ಐ.ಟಿ.ಯು.ಸಮ್ಮೇಳನದ ಸಂಧರ್ಭದಲ್ಲೇ ಕೆಲವೇ ತಿಂಗಳುಗಳಲ್ಲಿ ಬಿಜೆಪಿ ಅಧಿಕಾರಕ್ಕಾಗಿ ಅಪರೇಷನ್ ಕಮಲ ಹೆಸರಿನಲ್ಲಿ ರಾಜಕೀಯ ಭ್ರಷ್ಟಾಚಾರವನ್ನು ನಾಚಿಕೆಯಿಲ್ಲದೇ ಬಹಿರಂಗವಾಗಿ ನಡೆಸಿ ಶಾಸಕರ ಖರೀದಿ ಮೂಲಕ ಬಹುಮತ ಪಡೆದಿರುವುದು ಇತಿಹಾಸ. ದೇಶದ ಇತಿಹಾಸದಲ್ಲಿ ಮತ್ತು ಕರ್ನಾಟಕ ಚರಿತ್ರೆಯಲ್ಲಿ ಹಿಂದೆಂದೂ ಕಂಡರಿಯದ ಪ್ರಮಾಣದಲ್ಲಿ ಮುಖ್ಯಮಂತ್ರಿಯೇ ಭ್ರಷ್ಟಾಚಾರ ಪ್ರಕರಣದಲ್ಲಿ ಜೈಲು ಸೇರಿ ವಿಚಾರಣೆಗೆ ಒಳಗಾಗಿದ್ದಾರೆ. ಗಣಿ ಲೂಟಿ ಮತ್ತು ಭೂ ಕಬಳಿಕೆ ನಿತ್ಯ ವ್ಯವಹಾರವಾಗಿದೆ. ಹಲವು ಮಂತ್ರಿಗಳು ಸಾಲುಸಾಲಾಗಿ ಜೈಲುಗೆ ಹೋಗಿ ಬೇಲ್ ಮೇಲೆ ಬಿಡುಗಡೆಯಾಗಿದ್ದಾರೆ. ವಿಧಾನ ಸಭೆಯನ್ನು ಅಶ್ಲೀಲ ಚಟುವಟಿಕೆಗಳಿಗೆ ಬಳಸಿ ಸ್ಥಾನ ಕಳೆದುಕೊಂಡ ಮಂತ್ರಿಗಳು, ಪರಸ್ತ್ರೀಯರ ಮೇಲೆ ಲೈಂಗಿಕ ಧಾಳಿ ನಡೆಸಿದ ಮಂತ್ರಿಗಳು, ಇಂತಹ ಅವರ ಸಾಮಾಜಿಕ ಅನೈತಿಕ ಚಟುವಟಿಕೆಗಳು ಬಿಜೆಪಿ ಸರಕಾರದ 'ಹಿಂದುತ್ವ ರಾಜಕಾರಣದ' ನಿಜಸ್ವರೂಪ ಬಯಲಿಗಿಟ್ಟವೆ. ಆರ್.ಎಸ್.ಎಸ್. ನಿರ್ದೇಶಿತ ಬಿಜೆಪಿ ಸರಕಾರವು ಧರ್ಮದ ಆಧಾರದಲ್ಲಿ ಜನತೆಯನ್ನು ವಿಭಜಿಸುವ ಸಾಮಾಜಿಕ ವಿಘಟನೆಯೇ ರಾಜಕೀಯ ನೆಲೆಯಾಗಿ ಮಾಡಿಕೊಳ್ಳುವ ಮೂಲ ಫ್ಯಾಶಿಸ್ಟ್ (ಜನಾಂಗೀಯ ದ್ವೇಶ) ಕೆಲಸದಲ್ಲಿ ಹಿಂದೆ ಬಿದ್ದಿಲ್ಲ. ಅಲ್ಪ ಸಂಖ್ಯಾತ ಜನಸಮುದಾಯಗಳಾದ ಕ್ರೈಸ್ತ ಮತ್ತು ಮುಸ್ಲೀಂ ಪೂಜಾಸ್ಥಳಗಳ ಮೇಲೆ ಪಿತೂರಿ ಯೋಜನೆಗಳನ್ನು ನಿರಂತರವಾಗಿ ಜಾರಿಗೊಳಿಸಲಾಗುತ್ತಿದೆ. ಮುಖ್ಯವಾಗಿ ಕರಾವಳಿ ಜಿಲ್ಲೆಗಳಲ್ಲಿ ಸಂಘ ಪರಿವಾರದ ಹಾವಳಿ ತೀವ್ರವಾಗಿದೆ. ದಲಿತರ ಮೇಲಿನ ಧಾಳಿಗಳು ಹೆಚ್ಚಾಗುತ್ತಿವೆ. ಜಾತಿಬೇದ, ಪಂಕ್ತಿ ಬೇದಗಳು ಮುಂತಾದ ಅನಿಷ್ಟ ಪದ್ಧತಿಗಳಿಗೆ ಬಿಜೆಪಿ ಸರಕಾರವು ಆರ್‌ಎಸ್‌ಎಸ್ ಸಿದ್ಧಾಂತಕ್ಕೆ ಪೂರಕವಾಗಿ ಪುಷ್ಟೀಕರಿಸುತ್ತಿದೆ.

ಆಡಳಿತ ಮರೆತರು
ಲೂಟಿ,ಕಿತ್ತಾಟದಲ್ಲಿ ಮುಳುಗಿದರು

ಅಧಿಕಾರ ದಾಹ, ಗಣಿ,ಭೂ ಮಾಫಿಯಾಗಳ ದೋಚುವ ಹಾವಳಿ, ಸಂಪತ್ತನ್ನು ಲೂಟಿ ಹೊಡೆಯುವ ಭ್ರಷ್ಟತೆಯ ಸ್ಪರ್ಧೆಯಿಂದಾಗಿ ಹುಟ್ಟಿಕೊಂಡ ಕಿತ್ತಾಟದ ಪರಿಣಾಮವಾಗಿ ಬಿಜೆಪಿ ಒಡೆದು ಕೆಜೆಪಿ ಪಕ್ಷವನ್ನು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಸ್ಥಾಪಿಸಿದ್ದಾರೆ. ಅಧಿಕಾರಕ್ಕಾಗಿ ಕಚ್ಚಾಟ ತಾರಕ್ಕೇರಿದೆ. ಬಿಜೆಪಿ ಅಧಿಕಾರದಲ್ಲಿ ಇಲ್ಲದಿದ್ದಾಗ ಹೇಳುತ್ತಿದ್ದ ಎಲ್ಲಾ ಮೌಲ್ಯಗಳು, ಶಿಸ್ತು ಕೇವಲ ಬೂಟಾಟಿಕೆಯ ವಾದಗಳು ಎಂಬುದು ಕೆಲವೇ ತಿಂಗಳುಗಳಲ್ಲಿ ಬಯಲಾಗಿದೆ. ಭ್ರಷ್ಟಾಚಾರ, ಅಧಿಕಾರ ದುರುಪಯೋಗ ಹಿಂದೆಂದೂ ಕಂಡರಿಯದ ಮಟ್ಟದಲ್ಲಿ ನಡೆದಿದೆ. ಬಿಜೆಪಿಯ ಭಾಗವೇ ಆಗಿದ್ದ ಗಣಿಗಳ್ಳ ಜನಾರ್ಧನರೆಡ್ಡಿ ಬಣವು ಶ್ರೀರಾಮುಲು ನೇತೃತ್ವದಲ್ಲಿ ಬಿಎಸ್‌ಆರ್ ಪಕ್ಷ ಹುಟ್ಟುಹಾಕಿ ರಾಜ್ಯದಾದ್ಯಂತ ಪ್ರಚಾರದಲ್ಲಿ ತೊಡಗಿದ್ದೂ, ಅವರ ಹಣದ • ಶಕ್ತಿಯನ್ನು ಪ್ರದರ್ಶನ ಮಾಡುತ್ತಾ ಸಾಗುತ್ತಿದ್ದಾರೆ.

ವಿರೋಧ ಪಕ್ಷದ ವೈಫಲ್ಯ

ಕಾಂಗ್ರೆಸ್ ಪಕ್ಷವು ರಾಜ್ಯದಲ್ಲಿ ವಿರೋದ ಪಕ್ಷವಾಗಿ ಸರಕಾರದ ಜನವಿರೋದಿ ಧಾಳಿಗಳನ್ನು ಬಯಲು ಮಾಡುವಲ್ಲಿ ಯಾವುದೇ ಕ್ರಿಯಾಶೀಲ ಪಾತ್ರ ವಹಿಸುತ್ತಿಲ್ಲ. ಆಡಳಿತದಲ್ಲಿರುವ ಪಕ್ಷದ ವೈಫಲ್ಯವೇ ಅವರ ರಾಜಕೀಯ ಬಂಡವಾಳವಾಗಿ ಪ್ರಯೋಜನ ಪಡೆಯುವ ದಾರಿಯಲ್ಲಿ ಸಾಗಿದ್ದಾರೆ. ರೂ.2 ಕ್ಕೆ ಒಂದು ಕೆ.ಜಿ. ಅಕ್ಕಿ, ಬಡತನ ರೇಖೆಯ ಆದಾಯ ಮಿತಿ ಹೆಚ್ಚಳ, ರೈತರ ಪರವೆಂದು ಬಿಜೆಪಿಯು ಚುನಾವಣೆಗಳಲ್ಲಿ ಹೇಳಿತ್ತು. ಆದರೆ ಅದು ನೀಡಿದ್ದ ಹಲವು ಭರವಸೆಗಳು ಹುಸಿ



ಆಗಿದ್ದರೂ ವಿರೋದ ಪಕ್ಷವಾಗಿ ಯಾವುದೇ ಪರಿಣಾಮಕಾರಿ ಧ್ವನಿಯನ್ನು ಕಾಂಗ್ರೆಸ್ ಎತ್ತಲಿಲ್ಲ. ಏಕೆಂದರೆ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಅದೇ ದಿವಾಳಿಖೋರ ನೀತಿಗಳನ್ನು ಜಾರಿ ಜಾರಿಗೊಳಿಸುತ್ತಿದೆ. ಇನ್ನೊಂದು ವಿರೋಧ ಪಕ್ಷವಾದ ಜೆಡಿ (ಎಸ್) ಆಗೊಮ್ಮೆ ಈಗೊಮ್ಮೆ ರಾಜ್ಯ ಸರಕಾರದ ವಿರುದ್ದ ಧ್ವನಿ ಎತ್ತಿದರೂ, ಆರ್ಥಿಕ ನೀತಿಗಳಲ್ಲಿ ಯಾವುದೇ ಸ್ಪಷ್ಟ ತಾತ್ವಿಕ, ಮೌಲ್ವಿಕವಾದ ವ್ಯತ್ಯಾಸಗಳಿಲ್ಲದ ಹಿನ್ನಲೆಯಲ್ಲಿ ಜನಪರ ಪರ್ಯಾಯ ನೀತಿಗಳಿಗಾಗಿ ಮುಂದಾಗಿಲ್ಲ.

ದುಡಿವವರ ಮರೆತರು
ಲೂಟಿಕಾರರ ಬಲಗೊಳಿಸಿದರು

ರಾಜ್ಯದಲ್ಲಿ ಭ್ರಷ್ಟಾಚಾರ, ಆಂತರಿಕ ಕಚ್ಚಾಟಗಳ ನಡುವೆಯೂ ಬಂಡವಾಳಗಾರರ ಸೇವೆ ಮಾಡುವ ದಿಶೆಯಲ್ಲಿ ಬಿಜೆಪಿ ಸರಕಾರ ಹಿಂದೆ ಬಿದ್ದಿಲ್ಲ. ಎರಡು ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶಗಳನ್ನು ಮತ್ತು ಕೃಷಿಯಲ್ಲಿ ವಿಶ್ವ ಬಂಡವಾಳ ಹೂಡಿಕೆ ದಾರರ ಸಮಾವೇಶಗಳನ್ನು ನಡೆಸಿ ಅಂತರ ರಾಷ್ಟ್ರೀಯ ಬಂಡವಾಳಗಾರರಿಗೆ ರಾಜ್ಯದ ಭೂಮಿ, ನೀರು ಮತ್ತು ನೈಸರ್ಗಿಕ ಸಂಪತ್ತನ್ನು ಎಗ್ಗಿಲ್ಲದೇ ಧಾರೆ ಎರೆಯಲು ಕ್ರಮವಹಿಸಲಾಗಿದೆ. ತಮ್ಮ ಆಡಳಿತದ ಅವಧಿ ಮುಗಿಯುತ್ತಿದ್ದರೂ ಮುಂದಿನ ವಿಶ್ವ ಬಂಡವಾಳಗಾರರ ಸಮಾವೇಶವನ್ನು 2,3, ಜೂನ್ 2014 ಕ್ಕೆ ನಡೆಸಲು ಈಗಾಗಲೇ ಪ್ರಕಟಿಸಿದ್ದು ಮತ್ತಷ್ಟು ಭೂ ಪರಬಾರೆ ಮಾಡಲು ಯೋಜಿಸುತ್ತಿದೆ. ಗಣಿಗಾರಿಕೆಯ ಮೂಲಕ 52,857 ಹೆಕ್ಟಾರ್‌ಗಳಷ್ಟು ಜಮೀನುನಲ್ಲಿ ಲೂಟಿ ಮಾಡಲು ಪರವಾನಿಗೆ ನೀಡಲಾಗಿದೆ. ಸುಪ್ರೀಂಕೋರ್ಟ್ ಮಧ್ಯ ಪ್ರವೇಶದಿಂದಾಗಿ ಗಣಿ ಲೂಟಿಯನ್ನು ನಿಯಂತ್ರಿಸುವ ಪ್ರಕ್ರಿಯೆ ಆರಂಭವಾಗಿದೆ. ರಾಜ್ಯದಲ್ಲಿ ಕೆಲವೇ ಜನರ ಕೈಯಲ್ಲಿ ಭೂ ಕೇಂದ್ರೀಕರಣ ಹೆಚ್ಚಾಗುವಂತೆ ಮಾಡಲಾಗುತ್ತಿದೆ. ಕೇವಲ ಶೇ.6.3 ದೊಡ್ಡ ಭೂ ಮಾಲೀಕ/ಬಂಡವಾಳಗಾರ ಹಿಡುವಳಿಗಾರರ ವಶದಲ್ಲಿ ರಾಜ್ಯದ ಒಟ್ಟು ಶೇ 25 ಭೂಮಿ ಕೇಂದ್ರೀಕರಣವಾಗಿದೆ. ಸಣ್ಣ ಹಿಡುವಳಿದಾರರು ನಿರಂತರ ಭೂಮಿ ಕಳೆದುಕೊಳ್ಳುತ್ತಿರುವುದು ಇತ್ತೀಚಿನ ಕರ್ನಾಟಕ ಆರ್ಥಿಕ ಸಮೀಕ್ಷೆಯಿಂದ ಸ್ಪಷ್ಟವಾಗುತ್ತದೆ.

ಕಾರ್ಮಿಕ ವಿರೋಧಿಗಳು

ಕಾರ್ಖಾನೆಗಳ ಕಾನೂನುಗೆ ತಿದ್ದುಪಡಿ ಮಾಡಿದ ಸರಕಾರವು ಕೆಲಸದ ಅವಧಿಯನ್ನು 10 ಗಂಟೆಗಳಿಗೆ ಹೆಚ್ಚಿಸಿದೆ. ಅಂಗನವಾಡಿ



ಜನಶಕ್ತಿ
ಕನ್ನಡ ವಾರಪತ್ರಿಕೆ

ನೌಕರರಿಗೆ ದೇಶದಲ್ಲೇ ಮೊದಲಬಾರಿಗೆ ಹೊಸ ಪಿಂಚಣಿ ಯೋಜನೆಯನ್ನು ಬಲವಂತವಾಗಿ ಹೇರಿ ಶೇರು ಪೇಟೆಗೆ ಬಡ ಅಂಗನವಾಡಿ ನೌಕರರ ಹಣವನ್ನು ಬಂಡವಾಳಗಾರರಿಗೆ ವಹಿಸಲು ಕ್ರಮವಹಿಸಿದೆ. ಸಾಮಾನ್ಯ ಕನಿಷ್ಟ ಕೂಲಿಯನ್ನು ಅಂತಿಮವಾಗಿ ನಿಗದಿ ಪಡಿಸದೇ ವಿಳಂಬ ಮಾಡುತ್ತಿದೆ. ಕಾರ್ಮಿಕ ಇಲಾಖೆಗೆ ಹಲವು ತಿಂಗಳುಗಳಿಂದ ಆಯುಕ್ತರನ್ನು ನೇಮಕ ಮಾಡದೇ ಇಲಾಖೆ ನಿಷ್ಕ್ರಿಯತೆಗೆ ತಳ್ಳಿದೆ. ಕೈಗಾರಿಕಾ ಸ್ಥಾಯಿ ಮಾದರಿ ನಿಯಮಗಳಿಗೆ ತಿದ್ದುಪಡಿ ಮಾಡಿ ಕೈಗಾರಿಕಾ ಕಾರ್ಮಿಕರಿಗೆ ನಿವೃತ್ತಿ ವಯಸ್ಸನ್ನು 58 ರಿಂದ 60 ಕ್ಕೆ ಏರಿಸುವ ಕರಡು ಅಧಿಸೂಚನೆಯನ್ನು ಹಲವು ವರ್ಷಗಳಾದರೂ ಅಂತಿಮಗೊಳಿಸದೇ ಕೈಗಾರಿಕಾ ಮಾಲೀಕರ ಸಂಘಗಳ ತಾಳಕ್ಕೆ ತಕ್ಕಂತೆ ಕುಣಿಯುತ್ತಿದೆ. ಗುತ್ತಿಗೆ ಕಾರ್ಮಿಕ ಪದ್ಧತಿಯನ್ನು ರದ್ದುಗೊಳಿಸಿದ ಕೈಗಾರಿಕೆ/ಉದ್ಯಮಗಳಲ್ಲಿ ಕೂಡ ಕಾರ್ಮಿಕ ಇಲಾಖೆಯ ಮೂಲಕ ಗುತ್ತಿಗೆ ಲೈಸನ್ಸ್‌ಗಳನ್ನು ಸ್ವೇಚ್ಛವಾಗಿ ನೀಡಲಾಗುತ್ತಿದೆ. ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ರಚನೆ ಆಗಿದ್ದರೂ ಯಾವುದೇ ಕಾರ್ಮಿಕರನ್ನು ನೊಂದಣಿ ಮಾಡಲು 3 ವರ್ಷಗಳಿಂದ ನಿಷ್ಕ್ರಿಯವಾಗಿಡಲಾಗಿದೆ. ರೈತ, ಕಾರ್ಮಿಕರು ಮುಂ.ದುಡಿಯುವ ವರ್ಗಗಳು ತಮ್ಮ ನ್ಯಾಯ ಸಮ್ಮತ ಬೇಡಿಕೆಗಳಿಗಾಗಿ ಚಳುವಳಿ ನಡೆಸಿದಾಗ ಪೋಲೀಸರ ಮೂಲಕ ದಬ್ಬಾಳಿಕೆ ನಡೆಸಿ ದುಡಿಯುವ ವರ್ಗದ ವಿರೋಧಿಯೆಂಬುದನ್ನು ತೋರಿಸಿದೆ.

ಅನ್ನ, ಅಕ್ಷರ ಯೋಜನೆಗಳು ಖಾಸಗಿಯವರಿಗೆ

ರಾಜ್ಯದಲ್ಲಿ ಅಪೌಷ್ಟಿಕತೆ ಗಂಭೀರ ಸಮಸ್ಯೆಯಾಗಿದೆ ಎಂದು ಆರ್ಥಿಕ ಸಮೀಕ್ಷೆ ಗುರುತಿಸಿದೆ. ಮತ್ತು ರಾಜ್ಯದಲ್ಲಿ ಯೋಜನಾ ಆಯೋಗದ ಮಾಪನದಂತೆ ಕಳಪೆ ಮಟ್ಟದ ಆದಾಯದ ಆಧಾರದಲ್ಲೂ ಬಡವರ ಸಂಖ್ಯೆಯು 1 ಕೋಟಿ 12 ಲಕ್ಷ ಜನರಿದ್ದಾರೆ. ರಾಜ್ಯದ ಒಟ್ಟು ಜನ ಸಂಖ್ಯೆಯು 6 ಕೋಟಿ 11 ಲಕ್ಷವಾಗಿದೆ. ಅಂದರೆ ಶೇ.20 ರಷ್ಟು ಜನ, 5 ಜನರಲ್ಲಿ ಒಬ್ಬರು ಕಡು ಬಡವರಾಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಅಂಗನವಾಡಿಗಳನ್ನು ಮದ್ಯಾಹ್ನದ ಬಿಸಿಊಟದ ಯೋಜನೆಗಳನ್ನು ಬಲಪಡಿಸಿ ಜನರಿಗೆ ಆಸರೆ ನೀಡುವ ಬದಲಾಗಿ ಅಂಗನವಾಡಿಗಳನ್ನು 'ವೇದಾಂತ' ಇಸ್ಕಾನ್, ಜಿಂದಾಲ್, ಅದಮ್ಯ ಚೇತನ ಮತ್ತು ಧರ್ಮದಾನ್ಯಗಳು ಮುಂತಾಗಿ ಖಾಸಗಿ ಬಂಡವಾಳಗಾರರಿಗೆ ವಹಿಸುವ ಅಮಾನವೀಯ ಕೆಲಸಗಳಲ್ಲಿ ಸರಕಾರವು ಸಕ್ರಿಯವಾಗಿದೆ.

ಕರ್ನಾಟಕ ರಾಜ್ಯವು ಇಡೀ ದೇಶದಲ್ಲೇ ಶಿಕ್ಷಣವನ್ನು ಅತ್ಯಂತ ವ್ಯಾಪಾರೀಕರಣಕ್ಕೆ ಒಳಗಾಗಿರುವ ರಾಜ್ಯವಾಗಿದೆ. ಶಿಕ್ಷಣದ ಲಾಬಿಯು ಸರಕಾರದ ನೀತಿ ನಿರೂಪಣೆಯಲ್ಲಿ ಪ್ರಭಾವಶಾಲಿಯಾಗಿದೆ.

ದೇಶದ ಸರಾಸರಿ ಆಹಾರ ಧಾನ್ಯಗಳ ಬೆಲೆ ಏರಿಕೆಯು ಶೇ 7.08 ಪ್ರಮಾಣದಲ್ಲಿದೆ. ಆದರೆ ರಾಜ್ಯದಲ್ಲಿ ಅಹಾರ ಧಾನ್ಯಗಳ ಬೆಲೆ ಏರಿಕೆಯೂ ಶೇ.10.46 ಪ್ರಮಾಣದಲ್ಲಿ ಏರಿಕೆ ಆಗುತ್ತಿವೆ. ಇದಕ್ಕೆ ಮುಖ್ಯ ಕಾರಣ ರಾಜ್ಯದ ಬಿಜೆಪಿ ಸರಕಾರವು ತೆರಿಗೆಯನ್ನು ಅತಿ ಹೆಚ್ಚಳವಾಗಿ ಹೇರುತ್ತಿರುವುದೇ ಆಗಿದೆ. ದೇಶದಲ್ಲೇ ಅತ್ಯಂತ ಹೆಚ್ಚು ತೆರಿಗೆಯನ್ನು ಜನಸಾಮಾನ್ಯರ ಮೇಲೆ ಹಾಕುತ್ತಿರುವ ಸರಕಾರ ಬಿಜೆಪಿ ರಾಜ್ಯ ಸರಕಾರವಾಗಿದೆ. ರಾಜ್ಯದಲ್ಲಿ ಮುಂಗಾರು ಮಳೆಯು ವಿಫಲವಾಗಿರುವ ಹಿನ್ನಲೆಯು ಸೇರಿ ಅಕ್ಕಿ , ಜೋಳ ಮತ್ತು ರಾಗಿ ಬೆಳೆಗಳು ತೀವ್ರ ಕುಸಿತ ಕಂಡಿದ್ದು ಆಹಾರ ಧಾನ್ಯಗಳ ಬೆಲೆಗಳು ಮತ್ತಷ್ಟು ಏರಿಕೆ ಆಗುವ ಆತಂಕ ನಿರ್ಮಾಣವಾಗಿದೆ.

ಕುಗ್ಗಿದ ಉದ್ಯೋಗ

ರಾಜ್ಯದ ಉದ್ಯೋಗ ಸ್ಥಿತಿಯನ್ನುಅವಲೋಕಿಸಿದರೆ ಜನ ವಿವಿಧ ಉದ್ಯೋಗಗಳಲ್ಲಿ ತೊಡಗಿರುವುದು ಕಂಡು ಬರುತ್ತದೆ. ಅದರಲ್ಲಿ ಶೇ 51 ರಷ್ಟು ಜನ ಸ್ವಯಂ ಉದ್ಯೋಗದಲ್ಲಿ ತೊಡಗಿದ್ದಾರೆ. ಶೇ 40 ರಷ್ಟು ಅಂದರೆ 1 ಕೋಟಿ 10 ಲಕ್ಷ ಜನರು ಹಂಗಾಮಿ, ದಿನಗೂಲಿ, ಕಾಂಟ್ರಾಕ್ಟ್ ಮುಂತಾದ ಅಸಂಘಟಿತ ಕೆಲಸಗಳಲ್ಲಿ ದುಡಿಯುತ್ತಿದ್ದಾರೆ. ರಾಜ್ಯದಲ್ಲಿ ಸಣ್ಣ ಮತ್ತು ಅತಿ ಸಣ್ಣ ಕಾರ್ಖಾನೆಗಳು 4,14,676 ಇದ್ದು ಈ ಕಾರ್ಖಾನೆಗಳಲ್ಲಿ ಪ್ರತಿ ಕಾರ್ಖಾನೆಗಳಲ್ಲಿ 10ಕ್ಕಿಂತ ಕಡಿಮೆ ಕಾರ್ಮಿಕರಿದ್ದೂ ಒಟ್ಟು 24,04,654 ಕಾರ್ಮಿಕರು ಇದ್ದಾರೆ. ರಾಜ್ಯದಲ್ಲಿ ಒಟ್ಟಾರೆ ಖಾಯಂ ಉದ್ಯೋಗ ಹೊಂದಿರುವ ಕಾರ್ಮಿಕರ ಸಂಖ್ಯೆಯು ಶೇ 12 ಅಂದರೇ



ಸುಮಾರು 35 ಲಕ್ಷ ಜನರು ಮಾತ್ರ ಸರಕಾರಿ ಮತ್ತು ಖಾಸಗಿ ರಂಗಗಳಲ್ಲಿ ದುಡಿಯುತ್ತಿದ್ದಾರೆ.

ಮೇಲಿನ ಸಂಗತಿಗಳು ಕರ್ನಾಟಕದ ದುಡಿಯುವ ಜನರ ಜೀವನ ನಿರ್ವಹಣೆಯ ಪರಿಸ್ಥಿತಿಗಳನ್ನು ಸ್ಥೂಲವಾಗಿ ಪರಿಚಯಿಸುತ್ತವೆ. ಈ ಪರಿಸ್ಥಿತಿಗಳಲ್ಲಿ ನಾವು ಸಿಐಟಿಯು ಸಂಘಟನೆಯನ್ನು ದುಡಿಯುವ ಜನರ ಬಲಿಷ್ಟ ಸಂಘಟನೆಯಾಗಿ ಕಟ್ಟಲು ಕೈಗೊಳ್ಳಬೇಕಾದ ಕ್ರಮಗಳನ್ನು ಮತ್ತು ಕರ್ತವ್ಯಗಳನ್ನು ರೂಪಿಸಿಕೊಳ್ಳಬೇಕಾಗಿದೆ.

ಚಳುವಳಿಗಳ ಉತ್ತರ – ಸಂಘಟನೆ ವಿಸ್ತಾರ

ಕಳೆದ ಸಿಐಟಿಯುವಿನ ಸಮ್ಮೇಳನವು 2009 ಸೆಪ್ಟೆಂಬರ್ 15 ರಂದು ನಡೆದ ಸಮರಧೀರ ಚಳುವಳಿಯ ಸ್ಪೂರ್ತಿಯ ಹಿನ್ನಲೆಯಲ್ಲಿ ನಡೆದಿತ್ತು. ಮಂಡ್ಯದಲ್ಲಿ 2010 ಫೆಬ್ರವರಿ 12–14 ವರಗೆ ನಡೆದ 11ನೇ ರಾಜ್ಯ ಸಮ್ಮೇಳನವು 14 ಕರ್ತವ್ಯಗಳನ್ನು ಗುರುತಿಸಿತ್ತು. ಅದರಲ್ಲಿ 2008 ನವೆಂಬರ್ ನಿಂದ ಸಾಮಾನ್ಯ ಕನಿಷ್ಟ ಕೂಲಿ, ಗುತ್ತಿಗೆ ಪದ್ದತಿ ಶೋಷಣೆ ವಿರೋಧಿಸಿ ಮುಂತಾದ ಕಾರ್ಮಿಕರ ಪ್ರಮುಖ ಬೇಡಿಕೆಗಳ ಈಡೇರಿಕೆಗಾಗಿ ನಿರಂತರವಾಗಿ ಸಿಐಟಿಯು ವಿವಿಧ ಹಂತಗಳ ಹೋರಾಟಗಳನ್ನು ಬಲಿಷ್ಟವಾಗಿ ಮುಂದುವರೆಸಲು ಕರೆ ನೀಡಿತ್ತು. ಅದರಂತೆ ಸಿಐಟಿಯು ರಾಜ್ಯ ವ್ಯಾಪಿ ಹೋರಾಟಗಳನ್ನು ಮುಂದುವರೆಸಲಾಗಿದೆ. 2010 ಅಕ್ಟೋಬರ್ 20 ರಂದು ಬೃಹತ್ ವಿಧಾನ ಸೌಧ ಚಲೋ ಚಳುವಳಿ, 2010ರ ನವೆಂಬರ್ 22 ರಂದು ತಾಲೂಕ ಕಚೇರಿಗಳ ಮುತ್ತಿಗೆ, 2011 ಏಪ್ರಿಲ್ 19 ರ ತಾಲೂಕು ಕಚೇರಿಗಳ ಪಿಕೆಟಿಂಗ್, 2011 ಜುಲೈ 18–21 ನಿರಂತರ ಧರಣಿ ಮತ್ತು 2012 ಏಪ್ರಿಲ್ 17, 18 ಮತ್ತು 19 ರಂದು ಕಾರ್ಮಿಕ ಆಯುಕ್ತರ ಕಚೇರಿ ಮುತ್ತಿಗೆ ಮತ್ತು ರಾಜ್ಯ ವ್ಯಾಪಿ ಹೋರಾಟಗಳನ್ನು ನಡೆಲಾಗಿದೆ. ನಮ್ಮ ನಿರಂತರ ಹೋರಾಟಗಳ ಒತ್ತಡದ ಕಾರಣ ರಾಜ್ಯ ಸರಕಾರವು ಸಾಮಾನ್ಯ ಕನಿಷ್ಟ ಕೂಲಿ ನಿಗದಿ ಪಡಿಸುವ ದಿಶೆಯಲ್ಲಿ ಕನಿಷ್ಟ ವೇತನ ಕಾನೂನು ಕಲಂ 5(1) (ಎ) ಅಡಿಯಲ್ಲಿ ತಜ್ಞರ ಸಮಿತಿ ನೇಮಿಸಿದ್ದೂ ಅದರಲ್ಲಿ ಸಿಐಟಿಯು ರಾಜ್ಯ ಅದ್ಯಕ್ಷರಾದ ಕಾಂ:ವಿ.ಜೆ.ಕೆ.ನಾಯರ್ ಮತ್ತು ಪ್ರಧಾನ ಕಾರ್ಯದರ್ಶಿ ಕಾಂ. ಎಸ್. ಪ್ರಸನ್ನ ಕುಮಾರ್ ಸದಸ್ಯರಾಗಿದ್ದಾರೆ. ಸಿಐಟಿಯು ಮುಖಂಡರ ಕ್ರಿಯಾಶೀಲ ಪಾತ್ರದಿಂದಾಗಿ ಉಪಸಮಿತಿಯಲ್ಲೂ ವಿವರವಾದ ಧಾಖಲೆಗಳನ್ನು ಮಂಡಿಸಲಾಗಿದೆ. ಆದರೇ ರಾಜ್ಯ ಸರಕಾರವು ಈ ಕಾಲಾವಧಿಯಲ್ಲಿ ಸಾಮಾನ್ಯ ಕನಿಷ್ಟ ಕೂಲಿ ನಿಗದಿ ಪಡಿಸುವ ಸಮಿತಿ ಸಭೆಗಳನ್ನೇ ಕರೆಯದೇ ವಿಳಂಭ ಧೋರಣೆಯನ್ನು ಅನುಸರಿಸುತ್ತಿದೆ. ಅಲ್ಲದೇ ವಿವಿಧ ಕಾರ್ಮಿಕರ ರಂಗವಾರು ಅಂಗನವಾಡಿ, ಗ್ರಾಮ ಪಂಚಾಯತಿ, ಹಮಾಲಿ, ಬೀಡಿ, ಬಿಸಿಊಟ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಬಿಎಸ್‌ಎನ್‌ಎಲ್ ಗುತ್ತಿಗೆ ಕಾರ್ಮಿಕರು, ಆಶಾ, ಐಸಿಟಿ ಶಿಕ್ಷಕರು, ಎಲ್ಐಸಿ ಏಜೆಂಟರು, ಮುನಿಸಿಪಲ್ ಕಾರ್ಮಿಕರು, ತೋಟ ಕಾರ್ಮಿಕರು ಮತ್ತು ವಿದ್ಯುತ್ ಗುತ್ತಿಗೆ ಕಾರ್ಮಿಕರು ವಿವಿಧ ಹಂತಗಳ ಹೋರಾಟಗಳನ್ನು ನಡೆಸಿದ್ದಾರೆ. ಘನ ಕೈಗಾರಿಕೆಯ ಕಾರ್ಮಿಕರು ವೋಲ್ವೋ, ಬಾಷ್, ಕಿರ್ಲೋಸ್ಕರ್ ಫೆರಸ್, ರಾಜಶ್ರೀ ಸಿಮೆಂಟ್, ಕೊನೆಗಾ ಗಾರ್ಮೆಂಟ್ಸ್, ಹಾಸನದ ಸ್ಟೀಲ್ ಕಾರ್ಮಿಕರು ಮತ್ತು ಸಾರ್ವಜನಿಕ ಕ್ಷೇತ್ರ ಬಿಇಎಲ್, ಹೆಚ್‌ಎಎಲ್ ಮತ್ತು ಬಿಇಎಂಎಲ್, ಬಿಜಿಎಂಎಲ್, ವಿಐಎಸ್‌ಎಲ್, ಮೈಸೂರ್ ಪೇಪರ್ ಮಿಲ್ಸ್ ಹಾಗೂ ವೆಸ್ಟ್‌ಕೋಸ್ಟ್ ಪೇಪರ್ ಮಿಲ್ ಮುಂತಾದ ಕಾರ್ಮಿಕರು ಹಲವು ಹೋರಾಟಗಳಲ್ಲಿ ತೊಡಗಿದ್ದಾರೆ.

ಅದರಲ್ಲಿ ಪ್ರಮುಖವಾಗಿ ಗುರುತಿಸಬೇಕಾದ ಹೋರಾಟಗಳೆಂದರೇ ಅಂಗನವಾಡಿ ನೌಕರರ ಖಚಿತವಾದ ಪಿಂಚಣಿ ಮತ್ತು ಪ್ರಮುಖ ಬೇಡಿಕೆಗಳಿಗಾಗಿ 4 ದಿನಗಳ ನಿರಂತರ ಹಗಲು ರಾತ್ರಿ ಸಾವಿರಾರು ಮಹಿಳಾ ನೌಕರರು ಬೆಂಗಳೂರಲ್ಲಿ ನಡೆದಿದ ಹೋರಾಟ ಸಮರಧೀರವಾಗಿ ನಡೆದಿದೆ. ಮತ್ತು ರಾಜ್ಯ ಸರಕಾರ ಅಂಗನವಾಡಿ ನೌಕರರ ಪಿಂಚಣಿ ವಿಚಾರದಲ್ಲಿ ಮೋಸ ಪೂರಿತವಾಗಿ ನಡೆದುಕೊಂಡಿದ್ದಲ್ಲದೇ, ಅಂಗನವಾಡಿ ನೌಕರರು ಮುಷ್ಕರ ನಡೆಸುವುದನ್ನು ನಿಷೇದಿಸುವ ಸುತ್ತೋಲೆ ವಿರೋದಿ ದಿಟ್ಟ ಹೋರಾಟ 2011 ಮಾರ್ಚ್‌ನಲ್ಲಿ ನಡೆಸಿದ ಹೋರಾಟದ ಪರಿಣಾಮವಾಗಿ ರಾಜ್ಯ ಸರಕಾರವು ಕರಾಳ ಸುತ್ತೋಲೆಯನ್ನು ವಾಪಸ್ಸು ಪಡೆದಿದ್ದೂ, ಹೋರಾಟಕ್ಕೆ ಸಂದ ಜಯವಾಗಿದೆ. ಚಿಕ್ಕಬಳ್ಳಾಪುರದಲ್ಲಿ ಅಂಗನವಾಡಿಗಳ ಉಸ್ತುವಾರಿಯನ್ನು ಕೇಂದ್ರ ಸಚಿವ ವೀರಪ್ಪ ಮೊಯಿಲಿ ಅವರ ಚಿತಾವಣೆಯಲ್ಲಿ 'ವೇದಾಂತ' ಎಂಬ ಒರಿಸ್ಸಾದ ಗಣಿಗಾರಿಕೆ ಕಂಪನಿಗೆ ವಹಿಸುವುದನ್ನು ವಿರೋದಿಸಿ ಉದ್ಘಾಟನಾ ಕಾರ್ಯಕ್ರಮದಲ್ಲೇ ಸಮರಧೀರವಾಗಿ ಪ್ರತಿಭಟನೆ ನಡೆಸಿರುವುದು, ಹಲವು ಆತಂಕಕಾರಿ ಅಂಶಗಳನ್ನು ಒಪ್ಪಂದದಿಂದ ಕೈಬಿಡುವಂತೆ ಮಾಡಲು ಸಾದ್ಯವಾಗಿದೆ. ಬೀಡಿ ಕಾರ್ಮಿಕರ ಮಕ್ಕಳಿಗೆ ಸ್ಕಾಲರ್‌ಶಿಪ್ ವಂಚನೆ ಮಾಡುವ ಕೇಂದ್ರ ಸರಕಾರದ ಅಧೀನದಲ್ಲಿರುವ ಕಲ್ಯಾಣ ಮಂಡಳಿಯ ನಿರ್ಣಯದ ವಿರುದ್ಧ ನಡೆದ ಯಶಸ್ವಿ ಹೋರಾಟ ಮತ್ತು ಬೀಡಿ ಕಾರ್ಮಿಕರ ಕನಿಷ್ಟಕೂಲಿ ಅಧಿಸೂಚನೆ ಪ್ರಕಟಣೆ ಹೊರಡಿಸಿ ಜಾರಿಗೊಳಿಸಲು ನಿರಂತರವಾಗಿ 2012 ಮಾರ್ಚ್ 25 ರಿಂದ ಜೂನ್ 4 ವರಗೆ ಇಡೀ ದಕ್ಷಿಣಕನ್ನಡ ಜಿಲ್ಲೆಯ ಲಕ್ಷಾಂತರ ಬೀಡಿ

ಪುಟ 10 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಚಳುವಳಿಗಳ ಉತ್ತರ ಸಂಘಟನೆ ವಿಸ್ತಾರ....

ಪುಟ 9 ರಿಂದ

ಕಾರ್ಮಿಕರು ಮುಷ್ಕರ ನಡೆಸಿರುವುದು, ಇಡೀ ರಾಜ್ಯ ವ್ಯಾಪಿ ಮುಷ್ಕರವಾಗಿ ಪರಿಣಮಿಸಿದೆ. ಹೋರಾಟದ ಒತ್ತಡಕ್ಕೆ ಸರಕಾರವು ಅಧಿಸೂಚನೆಯನ್ನು ಪ್ರಕಟಿಸಿರುವುದು ಮುಷ್ಕರ ಐತಿಹಾಸಿಕ ಯಶಸ್ವಿಗೆ ಕಾರಣವಾಗಿದೆ. ಗ್ರಾಮ ಪಂಚಾಯತಿಗಳಿಗೆ ರಾಜ್ಯ ಹಣಕಾಸು ಆಯೋಗದ ಸಿಫಾರಸ್ಸಿನಂತೆ ಅನುದಾನ ಬಿಡುಗಡೆಗಾಗಿ ಮತ್ತು ಕನಿಷ್ಟ ಕೂಲಿ, ಬಡ್ತಿಗಳ ಅನುಷ್ಠಾನಕ್ಕಾಗೆ ಗ್ರಾಮ ಪಂಚಾಯತಿ ನೌಕರರ ಯಶಸ್ವಿ ಹೋರಾಟಗಳನ್ನು ನಡೆಸಿದ್ದಲ್ಲದೇ ಗ್ರಾಮ ಪಂಚಾಯತಿಗಳಲ್ಲಿ ಚುನಾಯಿತ ಸದಸ್ಯರನ್ನು ಸಂಘಟಿಸಿ ಚಳುವಳಿಗೆ ಇಳಿಸಿರುವುದು ಗಮನಾರ್ಹವಾಗಿದೆ. ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಂದ ಸೌಲಭ್ಯಗಳಿಗಾಗಿ ಮತ್ತು ಎಪಿಎಂಸಿ ಯಿಂದ ಜನಶ್ರೀ ಭೀಮಾ ಯೋಜನೆ ಕಂತು ಮೊತ್ತವನ್ನು ಪಾವತಿಸುವಂತೆ ನಡೆಸಿದ ಹಮಾಲಿ ಕಾರ್ಮಿಕರ ಹೋರಾಟಗಳು, ಕೆಎಸ್‌ಆರ್‌ಟಿಸಿ 4 ನಿಗಮಗಳ ನೌಕರರನ್ನು ಸಂಘಟಿಸಿವಲ್ಲಿ ಆಡಳಿತವರ್ಗದ ಮತ್ತು ಮಾನ್ಯತೆ ಪಡೆದ ಎಐಟಿಯುಸಿ ಸಂಘಟನೆಗಳ ಧಾಳಿಗಳ ವಿರುದ್ಧ ನೌಕರರ ಹೋರಾಟ, ನೈರುತ್ಯ ರೇಲ್ವೆ ನೌಕರರನ್ನು ಸಿಐಟಿಯು ನೇತೃತ್ವದಲ್ಲಿ ಸಂಘಟಿಸುತ್ತಿರುವುದನ್ನು ಸಹಿಸಲಾರದ ಹೆಚ್.ಎಂ.ಎಸ್ ಹುಬ್ಬಳ್ಳಿ ಮುಖಂಡರು ಧಾಳಿಗಳನ್ನು ನಡೆಸಿದ್ದೂ, ಹಿಮ್ಮೆಟ್ಟಿಸಲು ಮಾಡಿದ ಪ್ರಯತ್ನ, ಆಟೋ ಚಾಲಕರು ಟಾಪ್ ಬಣ್ಣ ಬದಲಾಯಿಸುವಂತೆ ಹೊರಡಿಸಿದ ಆದೇಶವನ್ನು ಹಿಂಪಡೆಯುವರಗೆ ಮತ್ತು ಧರ ಪರಿಷ್ಕರಣೆಗಾಗಿ ಬೆಂಗಳೂರಲ್ಲಿ ನಡೆದ ಹೋರಾಟ, ಬಿಸಿ ಊಟ ನೌಕರರು, ಕಟ್ಟಡ ಕಾರ್ಮಿಕರ ಹೋರಾಟ, ಬಹುರಾಷ್ಟ್ರೀಯ ವೋಲ್ವೋ ಬಸ್ಸೆಸ್ ಕಂಪನಿ (ಸ್ವಿಜ್ಜರ್‌ಲ್ಯಾಂಡ್ ದೇಶದ ಮೂಲ) ಕಾರ್ಮಿಕ ಮುಖಂಡರನ್ನು ವಜಾ ಮಾಡಿರುವುದರ ವಿರೋಧಿಸಿ, ಕಾರ್ಮಿಕರ ಬೇಡಿಕೆಗಳಿಗಾಗಿ 70 ದಿನಗಳಿಗೂ ಹೆಚ್ಚಿನ ಮುಷ್ಕರ, ಡೆನ್ಸೋ ಕಿರ್ಲೋಸ್ಕರ್ ಕಾರ್ಮಿಕರ 2 ತಿಂಗಳ ಮುಷ್ಕರ, ಕೊನೆಗಾ ಗಾರ್ಮೆಂಟ್ಸ್ ಕಾರ್ಮಿಕರ ಹೋರಾಟ, ಮೈಸೂರು ಜಿಲ್ಲೆಯಲ್ಲಿ ರೆಡಿಮಿಕ್ಸ್ ಕಾರ್ಮಿಕರ 119 ದಿನಗಳ ಮುಷ್ಕರ, ಹೆರಿಟೇಜ್ ಗಾಲ್ಫ್ ಕಾರ್ಮಿಕರ 62 ದಿನಗಳ ಮುಷ್ಕರ, ಪ್ರಭಾವಿ ಜೆಎಸ್‌ಎಸ್ ಆಸ್ಪತ್ರೆ ನೌಕರರ 23 ದಿನಗಳ ಮುಷ್ಕರ, ಬೆಳಗಾಂ ನಗರ ಪ್ರಭಾವಿ ಕೆಎಲ್‌ಇ ಆಸ್ಪತ್ರೆ ನೌಕರರ ಯಶಸ್ವಿ ಧೀರ್ಘಕಾಲಿಕ 60 ದಿನಗಳಿಗೂ ಹೆಚ್ಚಿನ ದಿನಗಳ ಮುಷ್ಕರ, ಕೊಪ್ಪಳ ಜಿಲ್ಲೆಯ ಕಿರ್ಲೋಸ್ಕರ್ ಫೆರಸ್ ಕಾರ್ಮಿಕರ 74 ದಿನಗಳ ಹೋರಾಟ, ಐಸಿಟಿ ಶಿಕ್ಷಕರ 7 ದಿನಗಳ ನಿರಂತರ ಹೋರಾಟ ಮುಂತಾದವು ಗಮನಾರ್ಹ ಹೋರಾಟಗಳಾಗಿವೆ.

ಅಲ್ಲದೇ ಸ್ಥಳೀಯವಾಗಿ ತಾಲೂಕ/ ಜಿಲ್ಲಾ ಮಟ್ಟಗಳಲ್ಲಿ ಹಲವು ಹೋರಾಗಳನ್ನು ನಡೆಸಲಾಗಿದೆ. ಇಂತಹ ಹಲವು ಹೋರಾಟಗಳ ಅನುಭವದ ಹಿನ್ನಲೆಯಲ್ಲಿ ಈ ಸಮ್ಮೇಳನ ನಡೆಯುತ್ತಿದೆ.

ಕಾರ್ಮಿಕರನ್ನು ಅಣಿನೆರೆಸುವ ಸಾಮರ್ಥದಲ್ಲಿ ಪ್ರಗತಿ:

ಮೇಲಿನ ಹೋರಾಟಗಳ ಪ್ರಕ್ರಿಯೆಯಲ್ಲಿ ಗಮನಿಸಬೇಕಾದ ಅಂಶವೆಂದರೆ ವಿವಿಧ ರಾಜ್ಯ ಸಂಘಗಳು ಸಾವಿರಾರು ಸಂಖ್ಯೆಯ ಕಾರ್ಮಿಕರು ಚಳುವಳಿಗೆ ದುಮುಕುವಂ ಮಾಡಲು ಈ ಕಾಲಾವಧಿಯಲ್ಲಿ ಗಣನೀಯವಾ ಉತ್ತಮಗೊಂಡಿರುವುದು ಸಕಾರಾತ್ ಅಂಶವಾಗಿದೆ.

ನಮ್ಮನ್ನು ಒಡೆಯುವ ಶಕ್ತಿಗಳ ಬಗ್ಗೆ ಜಾಗೃತಿ ಇರಲಿ

ಜಾಗತಿಕ ಆಳುವ ವರ್ಗಗಳು ಕಾರ್ಮಿಕ ವರ್ಗದ ಮತ್ತು ಅವಲಂಬಿತ ದೇಶಗಳಲ್ಲಿ ರಾಷ್ಟ್ರೀಯ ಆಂದೋಲನಗಳ ಐಕ್ಯತೆಯನ್ನು ತಡೆಯಲು ಕೈಲಾಗುವುದನ್ನೆಲ್ಲ ಮಾಡುತ್ತಿವೆ. ವಿಶ್ವ ಹಣಕಾಸು ಬಂಡವಾಳದ ಅತ್ಯಂತ ಶಸ್ತ್ರಸಜ್ಜಿತ ಕಾವಲು ಭಟನಂತಿರುವ ಅಮೆರಿಕ ಸಂಯುಕ್ತ ಸಂಸ್ಥಾನಗಳ ಚಟುವಟಿಕೆ ಒಂದಾದ ಮೇಲೊಂದರಂತೆ ಹಲವು ದೇಶಗಳ ಸ್ವಾತಂತ್ರ್ಯವನ್ನು ತುಳಿದು ಹಾಕುತ್ತಿದೆ. ಈ ಮೊದಲು ಇರಾಕಿನಲ್ಲಿ ಅದರ ಪಾಶವೀ ಕೃತ್ಯಗಳನ್ನು ನೋಡಿದ್ದೇವೆ. ಇದೀಗ ಸಿರಿಯಾದ ಸರದಿ, ನಂತರ ಇರಾನಿನ ಮೇಲೆರಗುವ ಯೋಜನೆ ಅವರದು. ಸಮಸ್ತ ಮಧ್ಯ-ಪೂರ್ವ ಮತ್ತು ನಿಕಟ-ಪೂರ್ವ ಪ್ರದೇಶದಲ್ಲಿ, ಅಂದರೆ ಪ್ಯಾಲೆಸ್ತೀನ್‌ನಿಂದ ಹಿಡಿದು ಅಫಘಾನಿಸ್ತಾನದ ವರೆಗೆ ಎಲ್ಲೆಡೆ ಅವರ ಸೇನೆಗಳಿವೆ, ಇರಾನಿನಲ್ಲಿ ಬಿಟ್ಟು, ಅಲ್ಲಿ ತಮ್ಮ ಹತೋಟಿ ಸ್ಥಾಪಿಸಲು ಅವರಿಗೆ ಕಷ್ಟವಾಗಿದೆ. ಈ ಎಲ್ಲ ದೇಶಗಳಲ್ಲಿ, ನಮ್ಮ ದೇಶದಲ್ಲಿ ಕೂಡ, ಅವರು ಒಂದೆಡೆ 'ಭಯೋತ್ಪಾದನೆಯ ವಿರುದ್ಧ ಸಮರ' ಎನ್ನುತ್ತಲೇ ಭಯೋತ್ಪಾದಕರಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ತಮ್ಮ ಸೇವೆ ಮಾಡುತ್ತಿರುವ ವರೆಗೆ ಅವರು ಭಯೋತ್ಪಾದಕರನ್ನು ಬಳಸುತ್ತಿರುತ್ತಾರೆ, ಅವರು ಅಮೆರಿಕಾದ ಹಿತಕ್ಕನುಗುಣವಾಗಿ ಕೆಲಸ ಮಾಡುತ್ತಿಲ್ಲ ಎಂದು ಕಂಡಾಗ ಅವರೊಡನೆ ಸಮರ ನಡೆಸುತ್ತಾರೆ. ಭಯೋತ್ಪಾದಕ ಶಕ್ತಿಗಳು ನೆಲೆ ವಿಸ್ತರಿಸಿ ಕೊಳ್ಳುತ್ತಿದ್ದರೆ, ಅದಕ್ಕೆ ಕಾರಣ ಆಂಗ್ಲ ಮತ್ತು ಅಮೆರಿಕನ್ ಪಡೆಗಳು ಅಫಘಾನಿಸ್ತಾನ ಮುಂತಾದ ದೇಶಗಳಲ್ಲಿ ಭಯೋತ್ಪಾದಕರನ್ನಷ್ಟೇ ಅಲ್ಲ, ಜನಸಾಮಾನ್ಯರನ್ನೂ ಕೊಲ್ಲುತ್ತಿದ್ದಾರೆ. ಅವರ ಆಫ್-ಪಾಕ್ ಕಾರ್ಯತಂತ್ರ ತದ್ವಿರುದ್ಧ ಫಲ ನೀಡುತ್ತಿದೆ. ಅಫಘಾನಿಸ್ತಾನದಿಂದ ಪಾಕಿಸ್ತಾನದ ವ[illegible] ಅಲ್ಲಿಂದ ನಮ್ಮ ಕಾಶ್ಮೀರದ ವರೆಗೆ ಮತ್ತು ಇತರೆಡೆಗಳಲ್ಲೂ ಭಯೋತ್ಪಾದಕರು ಬಲಗೊಳ್ಳುತ್ತಿದ್ದಾರೆ. ನಮ್ಮದೇ ದೇಶದಲ್ಲಿ ಇಸ್ಲಾಮೀ ಮೂಲಭೂತವಾದಿಗಳು ಮತ್ತು ಹಿಂದೂ ಕೋಮುವಾದಿಗಳು ಪರಸ್ಪರ ಪೋಷಿಸುತ್ತಿದ್ದಾರೆ, ಮತ್ತು ಬಲಗೂಡಿಸಿ ಕೊಳ್ಳುತ್ತ ಜನರನ್ನು ಒಡೆಯಲು ಪ್ರಯತ್ನಿಸುತ್ತಿದ್ದಾರೆ.

– ವಿ.ಜೆ.ಕೆ.ನಾಯರ್
(ಅಧ್ಯಕ್ಷೀಯ ಮಾತುಗಳಿಂದ)

ಚಳುವಳಿಗಾರರ ಮೇಲೆ ಆಕ್ರಮಣ......

ಪುಟ 5 ರಿಂದ

ಬಿ.ಎಂ.ಭಟ್‌ರ ಮೇಲೆ ನಡೆಯುತ್ತಿರುವ ಹಲ್ಲೆ ತಡೆಯಲು ಕಾರಿನ ಹಿಂದಿನ ಸೀಟಲ್ಲಿ ಇದ್ದ ಲಾರೆನ್ಸ್, ಸುಮಲತ ಪ್ರಯತ್ನ ಪಡುತ್ತಿದ್ದಾಗ ಇಬ್ಬರು ಲಾರೆನ್ಸ್‌ನ್ನು ಹೊರಗಡೆ ಎಳೆದು ಹೊಡೆಯ ತೊಡಗಿದರು. ಆ ತರುವಾಯ ಹುಡುಗಿ ಎಂಬುದನ್ನೂ ನೋಡದೆ ಇಬ್ಬರು ದಾಂಡಿಗರು ಸುಮಲತರನ್ನು ಕಾರಿನಿಂದ ಎಳೆದು ಹಾಕಿ ಸಿಕ್ಕಾ ಪಟ್ಟೆ ಎಳೆದಾಡಿ ಮಹಿಳೆಯೊಬ್ಬರ ಜೊತೆ ವರ್ತಿಸಬಾರದ ರೀತಿಯಲ್ಲಿ ಅಸಭ್ಯವಾಗಿ ವರ್ತಿಸಿದರು. ಆವಾಗ ಅಲ್ಲಿಗೆ ಬಂದ ಅಬ್ಬಾ ಎಂಬ ಮುಸ್ಲಿಂ ಮಹಿಳೆ ತನ್ನ ಜೀವವನ್ನು ಲೆಕ್ಕಿಸದೆ ಅವಳನ್ನು ಬಿಡಿಸಿದರು. ಅದೇ ದಾರಿಯಲ್ಲಿ ಬರುತ್ತಿದ್ದ ನಿರಾಶ್ರಿತರು ಹಲ್ಲೆ ತಡೆದು ಹಿಂದೆ ಇರುವ ಪೋಲಿಸರಿಗೆ ತಿಳಿಸಿದರು. ಪೋಲೀಸರು ಬಂದು ಅವರನ್ನು ಚದುರಿಸಿ ಬಿಜೆಪಿ ಕಾರ್ಯಕರ್ತ ವೆಂಕಪ್ಪಗೌಡನನ್ನು ಬಂಧಿಸಿದರು. ಹಲ್ಲೆಗೊಳಗಾದ ಬಿ.ಎಂ.ಭಟ್, ಸುಮಲತ, ಲಾರೆನ್ಸ್, ಸರಕಾರಿ ಆಸ್ಪತ್ರೆಯಲ್ಲಿ ದಾಖಲಾದರು. ಜನರು ತಾಲೂಕು ಕಚೇರಿ ಎದುರು ಧರಣಿ ನಡೆಸಿ ಆರೋಪಿಗಳನ್ನು ತಕ್ಷಣ ಬಂಧಿಸಲು ಒತ್ತಾಯಿಸಿದರು.

ಮೊಕದ್ದಮೆ ದಾಖಲು

ಪೋಲಿಸರು ಹಲ್ಲೆಕೋರ ಬಿಜೆಪಿ ಗೂಂಡಾಗಳ ಮೇಲೆ 307, 354, 324, 354, ಮೊದಲಾದ ಕಲಂಗಳಡಿ ಕೇಸ್ ದಾಖಲಿಸಿದರು. ಆದರೆ ಹಲ್ಲೆಕೋರರಾದ ಬಿಜೆಪಿಯ ಹರೀಶ್ ಶೆಟ್ಟಿ, ಭಾಸ್ಕರ, ಪ್ರಕಾಶ್, ಲಕ್ಷ್ಮಣ, ಹಿಂದೂ ಜಾಗರಣ ವೇದಿಕೆಯ ವಿಠಲ, ಸಂತೋಷ, ಶಿವರಾಮು ವಿಶ್ವ ಹಿಂದೂ ಪರಿಷತ್ತಿನ ಶ್ರೀನಿವಾಸ ಮುಂತಾದವರನ್ನು ಪೋಲಿಸರು ಇನ್ನೂ ಬಂಧಿಸಬೇಕಾಗಿದೆ.

ಮರಳಿ ಪ್ರತಿಭಟನೆ

ಜನವರಿ 18 ರಂದು ನಿವೇಶನ ರಹಿತರು ಪುನಃ ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ, ಜಿಲ್ಲಾ ಮುಖಂಡರುಗಳಾದ ವಸಂತ ಆಚಾರಿ, ಯಾದವ ಶೆಟ್ಟಿ ಹಾಗೂ ಡಿವೈಎಫ್ಐ ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ ಹಲ್ಲೆ ಖಂಡಿಸಿ ಹೋರಾಟ ಬೆಂಬಲಿಸಿ ಮಾತಾಡಿದರು. ಬಿ.ಎಂ.ಭಟ್ ಅವರೂ ಮಾತಾಡಿದರು. ಆ ಸಂದರ್ಭ ಸ್ಥಳಕ್ಕೆ ಬಂದ ಇ.ಓ. ಅವರು 15 ದಿವಸಗಳ ಸಮಯ ಅವಕಾಶ ಕೊಡಿ. ತಾಲೂಕಿನ ಎಲ್ಲಾ ಕಡೆ ನಿವೇಶನ ಹಂಚಿಕೆಗೆ ಆದ್ಯತೆ ನೀಡಿ ದುಡಿಯುತ್ತೇನೆ ಎಂದೂ, ಕೂತವರ ಪಟ್ಟಿ ಕೊಡಿ ಅವರನ್ನು ನಿವೇಶನ ರಹಿತರ ಪಟ್ಟಿಗೆ ಸೇರಿಸಿ ಅವರಿಗೂ ನಿವೇಶನ ನೀಡಲಾಗುವುದು ಎಂದು ಮತ್ತೆ ಕೋರಿದರು. ಈ ಕೋರಿಕೆಗೆ ಗೌರವ ನೀಡಿ, ಫೆಬ್ರವರಿ 10ರ ತನಕ ಕಾಯುವ ನಿರ್ಧಾರ ಮಾಡಿ, ಸಿಗದಿದ್ದರೆ ಫೆಬ್ರವರಿ 11ರಿಂದ ತಾಲೂಕು ಕಚೇರಿ ಎದುರು ಅನಿರ್ಧಿಷ್ಟ ಹೋರಾಟ ನಡೆಸಲು ತೀರ್ಮಾನಿಸಲಾಯಿತು. ಈ ನಡುವೆ ಜನವರಿ21 ರಂದು ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳ ಕಚೇರಿಯ ಮುಂದೆ ಸಿಪಿಐ(ಎಂ) ಜಿಲ್ಲಾ ಸಮಿತಿ ಪ್ರತಿಭಟನೆ ನಡೆಸಿ ತಪ್ಪಿತಸ್ಥರ ಮೇಲೆ ಕ್ರಮಕ್ಕೆ ಒತ್ತಾಯಿಸಿತು.


ಹಲ್ಲೆ ನಡೆಸಿದ ಆರೋಪಿಗಳಲ್ಲಿ ಹೆಚ್ಚಿನವರು ಹಿಂದೆ ಇದೇ ತಾಲೂಕಿನಲ್ಲಿ ಕಮ್ಯುನಿಸ್ಟ್ ಚಳವಳಿಯಿಂದಾಗಿ ಜಾರಿ ಆದ ಭೂಸುಧಾರಣಾ ಕಾಯ್ದೆಯಿಂದ ಜಮೀನು ಪಡೆದ ಕುಟುಂಬಗಳವರೇ ಆಗಿದ್ದಾರೆ. ಸಂಗಾತಿ ಎಳ್ಚಿತ್ತಾಯ ನೇತೃತ್ವದಲ್ಲಿ ಉಳುವವನೆ ಹೊಲದೊಡೆಯ ಎಂದು ಹೋರಾ[illegible] ನಡೆಸುವಾಗ, ಇದೇ ಬಿಜೆಪಿಯ ಹಿಂದಿನ ರೂ[illegible] ಜನಸಂಘದ ಕಾರ್ಯಕರ್ತರಿಂದ ಹಲ್ಲೆಗೊಳಗಾ[illegible]ದ್ದರು. ಆ ನೆನಪು ಇಲ್ಲದ ಈ ಹಲ್ಲೆಕೋರ[illegible] ಬಡವರು 5 ಸೆಂಟ್ಸ್ ನಿವೇಶನ ಕೇಳುವು[illegible] ಸಹಿಸದಾದರು.

ಬೆಳ್ತಂಗಡಿಯಲ್ಲಿ ಕಾಂಗ್ರೆಸ್ ಪಕ್ಷ ಇದು[illegible] ಇಲ್ಲದಂತೆ. ಈ ಹೋರಾಟದ ವಿಷಯವ[illegible] ಶಾಸಕ ವಸಂತ ಬಂಗೇರ ಅವ[illegible] ತಿಳಿಸಲಾಗಿದ್ದರೂ, ನಿರಾಶ್ರಿತರು ಮನೆ [illegible] ಕೂತಲ್ಲಿಗೆ ಬರುವುದೇ ಆಗಲಿ, ಅವರಿಗೆ ನಿವೇ[illegible] ಒದಗಿಸಲು ಬೆಂಬಲ ನೀಡುವುದಾಗ[illegible] ಹಲ್ಲೆಗೊಳಗಾದವರನ್ನು ಸೌಜನ್ಯಕ್ಕಾದರೂ ಬೆ[illegible] ನೀಡಿ ಈ ಹಲ್ಲೆಯನ್ನು ಖಂಡಿಸುವುದಾಗ[illegible] ಮಾಡದೇ ಬಿಜೆಪಿಯ ಈ ನೀಚ ಕೆಲಸಕ್ಕೆ ಮ[illegible] ಸಮ್ಮತಿ ತಮ್ಮದೆಂದು ಸಾಬೀತುಪಡಿಸಿದ್ದಾ[illegible] ತಾಲೂಕಿನಲ್ಲಿ ಕಾಂಗ್ರೆಸ್, ಜನತಾದಳ, ಬಿಜ[illegible] ಪಕ್ಷಗಳ ಎಂಎಲ್‌ಎಗಳನ್ನು ಗೆಲ್ಲಿಸಿ ಕೊಟ್ಟರೂ[illegible] ಹಕ್ಕುಪತ್ರ, ನಿವೇಶನ ಸಿಕ್ಕಿಲ್ಲ. ಭರವಸೆ ನಿ[illegible] ಮತ ಪಡೆದವರು ಅದನ್ನು ಈಡೇರಿಸಿಲ್ಲ [illegible] ಹೋರಾಟವಲ್ಲದೇ ಬೇರೆ ದಾರಿಯಾದರ[illegible] ಏನಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಏನು ನಡೆದಿದೆ ಇಲ್ಲಿ–ವಿದ್ಯುತ್ ಸಮಸ್ಯೆ ಹೆಸರಿನಲ್ಲಿ?

ಬಿಜೆಪಿ ದರ್ಬಾರ್



ಆರ್.ರಾಮಕೃಷ್ಣ

ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಪರಿಸ್ಥಿತಿ ಬಿಗಡಾಯಿಸಿದೆ. ಜನವರಿ ತಿಂಗಳು. ಕೊರೆಯುವ ಚಳಿ ಇನ್ನೂ ಕರಗಿಲ್ಲ. ಬೇಸಿಗೆ ದೂರದಲ್ಲಿದೆ. ಈಗಾಗಲೇ ರಾಜ್ಯದಲ್ಲಿ ಅನಿಯಮಿತ ವಿದ್ಯುತ್ ಕಡಿತ(ಲೋಡ್ ಶೆಡ್ಡಿಂಗ್) ಎಂದೋ ಜಾರಿಗೆ ಬಂದು ಬಿಟ್ಟಿದೆ. ನಗರ ಪ್ರದೇಶದಲ್ಲೇ ಯಾವಾಗ ವಿದ್ಯುತ್ ಇರುತ್ತದೆ ಯಾವಾಗ ಇರುವುದಿಲ್ಲ ಎಂಬ ಮಾಹಿತಿ ಇಲ್ಲದೇನೆ ವಿದ್ಯುತ್ ಪೂರೈಕೆ ದಿಢೀರನೆ ಇಲ್ಲವಾಗುವುದು ತೀರಾ ಮಾಮೂಲಿಯಾಗಿದೆ. ಇನ್ನು ಗ್ರಾಮಾಂತರ ಪ್ರದೇಶಗಳ ಜನರ ಪರಿಸ್ಥಿತಿಯ ಬಗೆಗೆ, ಪಂಪ್‌ಸೆಟ್ ಬಳಕೆದಾರರರ ಸಂಕಷ್ಟಗಳ ಬಗೆಗೆ ಹೇಳುವುದೇನು ?

ರಾಜ್ಯ ಬಿಜೆಪಿ ಸರ್ಕಾರದ ಇಂಧನ ಸಚಿವೆ ಶೋಭಾ ಕರಂದ್ಲಾಜೆಯವರು ಇತ್ತೀಚೆಗೆ ಸರ್ಕಾರಕ್ಕೆ ರಾಜಿನಾಮೆ ಕೊಟ್ಟಿದ್ದಾರೆ. ಹಾಗೇ ರಾಜೀನಾಮೆ ಕೊಡುವಾಗ ವಿದ್ಯುತ್ ಕ್ಷೇತ್ರದಲ್ಲಿ ತಮ್ಮ ಸರ್ಕಾರ ಮಾಡಿದ ಬಾರಿ ಸಾಧನೆಗಳ ಪಟ್ಟಿಯನ್ನು ಬಿಡುಗಡೆ ಮಾಡಿದ್ದಾರೆ.

ಶೋಭಾ ಕರಂದ್ಲಾಜೆಯವರು ಈಗ ಬಿಜೆಪಿ ತೊರೆದು ಯಡಿಯೂರಪ್ಪನವರ ನೇತೃತ್ವದ ಕೆಜೆಪಿಯನ್ನು ಸೇರಿದ್ದರೂ, ಸೇರುವವರಿದ್ದರೂ ಇಲ್ಲಿಯವರೆಗೂ ಅವರು ಬಿಜೆಪಿ ಸರ್ಕಾರದ ಇಂಧನ ಮಂತ್ರಿಯಾಗಿದ್ದವರು. ಮಧ್ಯೆ ಬಿಜೆಪಿ ಪಕ್ಷದೊಳಗಿನ ಆಂತರಿಕ ಕಿತ್ತಾಟಗಳ ಫಲವಾಗಿ ಇಂಧನ ಖಾತೆಯನ್ನು ಒಂದಷ್ಟು ಕಾಲ ಕೆ.ಎಸ್. ಈಶ್ವರಪ್ಪನವರು ನಿರ್ವಹಿಸಿದ್ದರು.

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವ ಮುಂಚೆ ಜನರಿಗೆ ವಿದ್ಯುತ್ ಉತ್ಪಾದನೆಯ ವಿಷಯದಲ್ಲಿ ಬಾರಿ ಬಾರಿ ಭರವಸೆಗಳನ್ನು ನೀಡಲಾಗಿತ್ತು. ವಿದ್ಯುತ್ ಕೊರತೆಗೆ ಶಾಶ್ವತ ಪರಿಹಾರ ನೀಡುವ ಭರವಸೆಯನ್ನು ಬಿಜೆಪಿ ಪಕ್ಷ ಕೊಟ್ಟಿತ್ತು. ಅದನ್ನೆಲ್ಲಾ ಜನ ಈಗ ನೆನೆಸಿಕೊಂಡರೆ ಆಳವಾದ ನಿಟ್ಟುಸಿರು ಹೊರಬೀಳುತ್ತದೆ ಅಷ್ಟೆ. ಶೋಭಾ ಅವರು ತಮ್ಮ ಬೆನ್ನು ತಾವೇ ತಟ್ಟಿಕೊಂಡು ತಮ್ಮ ತುತ್ತೂರಿ ತಾವೇ ಊದಿಕೊಳ್ಳುತ್ತಿದ್ದರೂ ಕೂಡ ವಿದ್ಯುತ್ ಕ್ಷೇತ್ರದ ಒಳಹೊರಗನ್ನು ಬಲ್ಲವರು ವಿದ್ಯುತ್ ಉತ್ಪಾದನೆ ವಿಷಯದಲ್ಲಿ ಈ ಬಿಜೆಪಿ ಸರ್ಕಾರ ಕೈಗೊಂಡಿರುವ ನಿರ್ಧಾರಗಳ ಬಗೆಗೆ ಎತ್ತಿರುವ ಪ್ರಶ್ನೆಗಳನ್ನು ಅರ್ಥಹೀನ ಎಂದೋ ಸುಳ್ಳು ಆರೋಪ ಎಂದೋ ಯಾರೂ ತಳ್ಳಿಹಾಕಲು ಸಾಧ್ಯವಿಲ್ಲ.

...ಸ್ಟು ಪಟ್ಟ ತೊಟ್ಟುಕೊಂಡಿರುವ ಕಂಪನಿಯೇ ...ಗಲಿ !!!

ಬೆಂಗಳೂರು ಸಮೀಪದ ಬಿಡದಿ ಬಳಿಯಲ್ಲಿ ...ಉದ್ದೇಶಿಸಿರುವ 700 ಮೆಗಾವ್ಯಾಟ್ಸ್ ಸಾಮರ್ಥ್ಯದ ಅನಿಲ ಆಧಾರಿತ ವಿದ್ಯುತ್ ಉತ್ಪಾದನಾ ಘಟಕದ ಗುತ್ತಿಗೆಯನ್ನು 'ಅಲ್‌ಸ್ತೋಮ್' ಎಂಬ ಸ್ವಿಟ್ಸರ್ ಲೆಂಡ್ ಮೂಲದ ಒಂದು ಕಂಪನಿ ಪಡೆದಿದೆ. ಈ ಅಲ್‌ತೋಮ್ ಕಂಪನಿಯನ್ನು 2012ರ ಫೆಬ್ರವರಿ 22 ರಂದು ವಿಶ್ವಬ್ಯಾಂಕ್ ಮೂರು ವರ್ಷಗಳ ಕಾಲಕ್ಕೆ ಕಪ್ಪುಪಟ್ಟಿಗೆ ಸೇರಿಸಿದೆ. ಜನವರಿ ತಿಂಗಳ ಮೊದಲ ವಾರದಲ್ಲಿ ಬಿಜೆಪಿ ಸರ್ಕಾರ ಈ ಕಂಪನಿಗೆ 2,184 ಕೋಟಿ ರೂಪಾಯಿಗಳನ್ನು ನೀಡುವ ನಿರ್ಧಾರ ತೆಗೆದುಕೊಂಡಿದೆ.

ಗುತ್ತಿಗೆ ಹರಾಜು(ಟೆಂಡರ್) ಪ್ರಕ್ರಿಯೆಯಲ್ಲಿ ಸರ್ಕಾರಿ ಸ್ವಾಮ್ಯದ ಬಿಎಚ್‌ಇಎಲ್ ಲಿ. ಅಲ್ಲದೇ ಎಲ್ ಅಂಡ್ ಟಿ, ಸೀಮನ್ಸ್, ಟಾಟಾ ಪ್ರಾಜೆಕ್ಟ್ ಲಿ. ಮುಂತಾದವುಗಳು ಭಾಗವಹಿಸಿದ್ದರೂ ಕೂಡ ಹರಾಜು ನಿಯಮಾವಳಿಗಳಲ್ಲಿ ತಮಗೆ ಬೇಕಾದ ಕಂಪನಿಗೆ ಅನುಕೂಲವಾಗುವಂತೆ ಬದಲಾವಣೆ ಮಾಡಲಾಗಿದೆ ಮತ್ತು ಅಲ್‌ಸ್ತೋಮ್



ಕಂಪನಿಯು ಅತಿ ಕಡಿಮೆ ದರವನ್ನು ನಮೂದಿಸಿರುವಂತೆ ದಾಖಲೆ ತೋರಿಸಿ ಅಲ್‌ಸ್ತೋಮ್ಸ್ ಕಂಪನಿಗೇ ಗುತ್ತಿಗೆ ದೊರೆಯುವಂತೆ ಮಾಡಲಾಗಿದೆ ಎಂಬ ಗಂಭೀರವಾದ ಆರೋಪಗಳು ಕೇಳಿಬರುತ್ತಿವೆ. ಕಡಿಮೆ ದರ ನಿಗದಿ ಮಾಡಿರುವ ಬೇರೆ ಕಂಪನಿಗಳು ಇದ್ದರೂ ಅವುಗಳಿಗೆ ಗುತ್ತಿಗೆ ದಕ್ಕದಂತೆ ತಂತ್ರಗಾರಿಕೆ ಮಾಡಲಾಗಿದೆ ಎಂದೂ ಆರೋಪಿಸಲಾಗಿದೆ.

ಈ ಪ್ರಸಂಗದಲ್ಲಿ ಶೋಭಾ ಕರಂದ್ಲಾಜೆಯವರು ಕೊಟ್ಟಿರುವ ಪ್ರತಿಕ್ರಿಯೆಯನ್ನು ಗಮನಿಸಬೇಕಿದೆ.

" ಅಲ್ ತೋಮ್ಸ್ ಕಂಪನಿಯನ್ನು ವಿಶ್ವ ಬ್ಯಾಂಕ್ ಕಪ್ಪುಪಟ್ಟಿಗೆ ಸೇರಿಸಿರುವ ವಿಷಯ ನನ್ನ ಗಮನಕ್ಕೆ ಬಂದಿಲ್ಲ" ಎನ್ನುತ್ತಾರೆ ಅವರು. ಅಂದರೆ "ನಮ್ಮ ಕಂಪನಿಯನ್ನು ಕಪ್ಪುಪಟ್ಟಿಗೆ ಸೇರಿಸಲಾಗಿದೆ, ನಮಗೆ ಗುತ್ತಿಗೆ ಕೊಡಬೇಡಿ" ಎಂದು ಆ ಕಂಪನಿಗಳ ಮುಖ್ಯಸ್ಥರು ಬಂದು ಶೋಭಾ ಕರಂದ್ಲಾಜೆಯವರಿಗೆ ಮನವಿ ಕೊಟ್ಟಂತೆ ಕಾಣುವುದಿಲ್ಲ. !! ಪಾಪ, ಶೋಭಾ ಅವರಿಗಾದರೂ ವಿಷಯ ಹೇಗೆ ಗೊತ್ತಾಗಬೇಕು.!!!

ಮಾಹಿತಿ ತಂತ್ರಜ್ಞಾನದ ಈ ಯುಗದಲ್ಲಿ ಎರಡು ಸಾವಿರ ಕೋಟಿ ರೂಪಾಯಿ ದಾಟುವ ಯೋಜನೆಯ ಗುತ್ತಿಗೆಯೊಂದನ್ನು ನೀಡುವಾಗ ಸಂಬಂಧಿಸಿದ ಸಚಿವರು ಕಂಪನಿಯ ಹಿನ್ನೆಲೆ–ಮುನ್ನೆಲೆ–ಚರಿತ್ರೆ ತಿಳಿದುಕೊಳ್ಳದೇ ಹಾಗೇ 'ಮುಗ್ಧ'ರಾಗಿ ತೀರ್ಮಾನ ತೆಗೆದುಕೊಂಡು ಬಿಡುತ್ತಾರೆ ಎಂದರೆ ಕರ್ನಾಟಕ ವಿದ್ಯುತ್ ನಿಗಮದ ಅಧ್ಯಕ್ಷರಾದ ಮತ್ತು ಈ ಸಂಬಂಧದ ತೀರ್ಮಾನ ಕೈಗೊಳ್ಳುವ ಸಭೆಯ ಅಧ್ಯಕ್ಷತೆ ವಹಿಸಿದ್ದ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಮತ್ತು ಬಿಜೆಪಿ–ಕೆಜೆಪಿ ಪಟಾಲಂ ನಂಬಬೇಕಷ್ಟೆ.

ದಶಕಗಳ ಕಾಲ ಎಬಿವಿಪಿ–ಬಿಜೆಪಿ, ಸಂಘಪರಿವಾರದ ಗರಡಿಯಲ್ಲಿ ಪಳಗಿ ರಾಜಕಾರಣದ ಪಟ್ಟುಗಳನ್ನು ಚೆನ್ನಾಗಿ ಕಲಿತುಕೊಂಡುಬಿಟ್ಟಿದ್ದೇನೆ ಎಂದುಕೊಂಡಿರುವ ಶೋಭಾ ಕರಂದ್ಲಾಜೆಯವರು ತತಕ್ಷಣಕ್ಕೆ 'ಕಂಪನಿ ಕುರಿತು ಮಾಹಿತಿ ಇರಲಿಲ್ಲ' ಅಂತ ಹೇಳಿ ಜಾರಿಕೊಳ್ಳುವುದು ಸುಲಭ ಎಂದು ಭಾವಿಸಿರಬಹುದು. ಆದರೆ ಅವರು ಉತ್ತರ ನೀಡಬೇಕಾದ ಪ್ರಶ್ನೆಗಳು ಇವು ಮಾತ್ರವೇ ಅಲ್ಲ. ಇನ್ನೂ ಹಲವಾರು ಪ್ರಶ್ನೆಗಳು ಉತ್ತರ ಬಯಸಿ ಮೇಲೆದ್ದು ಬರುತ್ತಿವೆ.

ದೂರದೃಷ್ಟಿಯ ವಿದ್ಯುತ್ ಖರೀದಿ 'ವ್ಯವಹಾರ'ಗಳ ತುಡಿತ

ಪ್ರಸಕ್ತ ಬೇಸಿಗೆ ಕಾಲದ ಗಂಭೀರ ವಿದ್ಯುತ್ ಸಮಸ್ಯೆ ಬಗೆಗೆ ರಾಜ್ಯದ ಬಿಜೆಪಿ ಸರ್ಕಾರ ಏನು ಮಾಡಿದೆ ಎಂದು ಕೇಳಬೇಡಿ. ಏಕೆಂದರೆ ರಾಜ್ಯದ ಇಂಧನ ಸಚಿವರು ಸರ್ಕಾರದ ನೇತಾರರಿಗೆ ಬಿಡುವಿರಲಿಲ್ಲ. ಭವಿಷ್ಯದ ವಿದ್ಯುತ್ ಸಮಸ್ಯೆ ಪರಿಹರಿಸುವ ಕೆಲಸದಲ್ಲಿ ಅವರು ತುಂಬಾ 'ಬ್ಯುಸಿ'ಯಾಗಿದ್ದರು. ಈ ಭವಿಷ್ಯದ ವಿದ್ಯುತ್ ಸಮಸ್ಯೆ ಬಗೆಹರಿಸುವುದು ಎಂದರೆ ಏನು ಎಂಬುದು ಈಗ ಪ್ರಶ್ನೆ.

2013 ರ ಆಗಸ್ಟ್‌ನಿಂದ 2015ರ ಜೂನ್ 30 ರವರೆಗಿನ ಅವಧಿಗೆ ಸುಮಾರು ಎರಡು ವರ್ಷಗಳ ಕಾಲಕ್ಕೆ ಪ್ರತಿನಿತ್ಯ 1,500 ಮೆಗಾವಾಟ್ ವಿದ್ಯುತ್ ಖರೀದಿ ವಿಷಯದಲ್ಲಿ ಟೆಂಡರ್ ಕರೆಯುವ ಪ್ರಕ್ರಿಯೆ ಸಂಬಂಧ ಸರ್ಕಾರ ಬಾರಿ ಉತ್ಸಾಹಭರಿತವಾಗಿ ತೊಡಗಿತ್ತು. ಇಂಥ ಖರೀದಿ–ವ್ಯವಹಾರಗಳ ಸಂಬಂಧ ಟೆಂಡರ್ ಕರೆಯುವುದು ಎಂದರೆ ಈ ಬಿಜೆಪಿ ಸರ್ಕಾರದ ಸಚಿವರುಗಳಿಗೆ ಅದೇನೋ ಬಾರಿ ಹುರುಪು.

ಸರ್ಕಾರವು ತನ್ನ ಪೂರ್ಣಾವಧಿ ಪೂರೈಸುತ್ತದೆ ಎಂದರೂ ಆ ಹಂತದಲ್ಲಿ ಸರ್ಕಾರಕ್ಕೆ ಇದ್ದ ಆಯಸ್ಸು ಎರಡು–ಮೂರು ತಿಂಗಳು. ಅದನ್ನೂ ಪೂರೈಸುವ ಭರವಸೆ ಇಲ್ಲದೇ ಸರ್ಕಾರ ಅಲುಗಾಡುತ್ತಿರುವಂತಹ ಪರಿಸ್ಥಿತಿಯನ್ನು ರಾಜ್ಯದ ಜನ ನೋಡುತ್ತಿದ್ದಾರೆ. ಇಂಥ ಒಂದು ಮಹತ್ವದ ವಿದ್ಯುತ್ ಖರೀದಿ ತೀರ್ಮಾನವನ್ನು ಇಷ್ಟು ಮುಂಚಿತವಾಗಿ ಮಾಡಲು ಇದ್ದ ಒತ್ತಡವೇನು ಎಂಬ ಪ್ರಶ್ನೆ ಇಂಧನ ಇಲಾಖೆಯ ಒಳಗಿನಿಂದಲೇ ಎದ್ದಿದೆ.

ಮುಂದಿನ ಆಗಸ್ಟ್ ತಿಂಗಳ ಸಂದರ್ಭದ ವಿದ್ಯುತ್ ಕೊರತೆಯನ್ನು ಈಗಲೇ ಯಾರು ಸರಿಯಾಗಿ ಅಂದಾಜು ಮಾಡುವುದು ಸಾಧ್ಯವಿಲ್ಲ. ರಾಜ್ಯದಲ್ಲಿ ಉತ್ತಮ ಮಳೆಯಾಗಿ ಜಲಾಶಯಗಳು ತುಂಬಿ ಬಿಟ್ಟರೆ ಅಗ್ಗದ ಜಲ ವಿದ್ಯುತ್ ಉತ್ಪಾದನೆಯ ಪ್ರಮಾಣವನ್ನು ಹೆಚ್ಚು ಮಾಡಿ ಬೊಕ್ಕಸಕ್ಕೆ ದೊಡ್ಡ ಪ್ರಮಾಣದಲ್ಲಿ ಹಣ ಉಳಿಸುವ ಸಾಧ್ಯತೆ ಇರುತ್ತದೆ. ಅದೇ ರೀತಿಯಾಗಿ ಮಳೆಗಾಲದಲ್ಲಿ ಹದವಾದ ಮಳೆ ಆಗುತ್ತಿದ್ದಲ್ಲಿ ವಿದ್ಯುತ್ ಬೇಡಿಕೆ ಸಹ ಗಣನೀಯವಾಗಿ ಕಡಿಮೆಯಾಗುವ ಸಂಭವ ಇರುತ್ತದೆ. ಪರಿಸ್ಥಿತಿ ಹೀಗಿರುವಾಗ ಎಂಟು ತಿಂಗಳ ಮೊದಲೇ ಎರಡು ವರ್ಷಗಳ ಕಾಲದ ನಿರಂತರ ವಿದ್ಯುತ್ ಖರೀದಿಗೆ ಟೆಂಡರ್ ಕರೆಯಲು ಬಿಜೆಪಿ ಸರ್ಕಾರದ ಸಚಿವ–ಸಚಿವೆಯರಿಗೆ ಯಾಕೆ ಇಷ್ಟೊಂದು ಆತುರವೋ ಜನರಿಗೆ ತಿಳಿಯಬೇಕಾಗಿದೆ.

ರಾಜ್ಯಕ್ಕೆ ತಮಿಳುನಾಡಿನ ಕೂಡುಂಕುಳಂ ಅಣು ವಿದ್ಯುತ್ ಸ್ಥಾವರದಿಂದ 221 ಮೆಗಾವ್ಯಾಟ್ ವಿದ್ಯುತ್ ಸಿಗುವ ಸಾಧ್ಯತೆ, ಬಳ್ಳಾರಿ ಶಾಖೋತ್ಪನ್ನ ಸ್ಥಾವರದ ಎರಡನೇ ಘಟಕದಿಂದ ಹಾಗೂ ಯುಪಿಸಿಎಲ್‌ನ ಸ್ಥಾವರದ ಎರಡನೇ ಘಟಕದಿಂದ ವಿದ್ಯುತ್ ದೊರಕುವ ಸಂಭವ, ಇವೆಲ್ಲವುಗಳ ಜೊತೆಗೆ ಮಳೆಯ ಪರಿಸ್ಥಿತಿ ನೋಡಿಕೊಂಡು ರಾಜ್ಯದಲ್ಲಿ ಅಧಿಕಾರಕ್ಕೆ ಬರುವ ನೂತನ ಸರ್ಕಾರ ವಿದ್ಯುತ್ ಖರೀದಿ ಬಗೆಗೆ ತೀರ್ಮಾನ ಕೈಗೊಳ್ಳಬಹುದಿತ್ತು ಎಂಬುದು ಹಲವು ಅಧಿಕಾರಿಗಳ ಪ್ರಬಲ ವಾದ. ಮೇಲ್ನೋಟಕ್ಕೆ ಈ ವಾದದಲ್ಲಿ ಸಾಕಷ್ಟು ಸತ್ಯಾಂಶ ಇರುವುದು ಯಾರಿಗಾದರೂ ಕಂಡು ಬರುತ್ತದೆ.

ಬಿಜೆಪಿ ಸರ್ಕಾರದ ಇಂತಹ ಹಲವಾರು ನಡೆಗಳ ಬಗೆಗೆ ವಿದ್ಯುತ್ ಕ್ಷೇತ್ರದ ಒಳಹೊರಗು ಬಲ್ಲ ತಜ್ಞರಿಂದ, ಸಾಮಾಜಿಕ ಕಾಳಜಿಯುಳ್ಳ ಅಧಿಕಾರಿ ವರ್ಗದಿಂದ ವಿರೋಧ–ಆಕ್ಷೇಪ ಬರುತ್ತಿರುವುದು ಇದೇ ಮೊದಲೇನು ಅಲ್ಲ. ಈ ಹಿಂದೆ ರಾಜ್ಯದ ಶಾಖೋತ್ಪನ್ನ ವಿದ್ಯುತ್ ಘಟಕಗಳಿಗೆ ಅಗತ್ಯ ಪ್ರಮಾಣದ ಕಲ್ಲಿದ್ದಲು ಸಂಗ್ರಹ ಕಾಪಾಡಿಕೊಳ್ಳದ ಕ್ರಮದ ಸಂಬಂಧ ಇದೇ ರೀತಿಯ ಹಲವು ಪ್ರಶ್ನೆಗಳು ಎದ್ದಿದ್ದವು.

ಪುಟ 14ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಮಡೆಸ್ನಾನ, ಪಂಕ್ತಿಬೇಧ ....

ಪುಟ 2 ರಿಂದ

ಹಿಡಿದು ಹೋರಾಟಕ್ಕೆ ಅಣಿ ನೆರೆಸಬೇಕಿದೆ. ಹಾಗೆಯೇ ವಿವಿಧ ಪ್ರದೇಶಗಳಲ್ಲಿರುವ ಇಂತಹ ಜ್ವಲಂತ ಸಾಮಾಜಿಕ ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳಬೇಕು.


ಜನಶಕ್ತಿ: ಈ ಹೋರಾಟ ಬೆಳೆಯತೊಡಗಿರುವಂತೆ ಕೆಲವರು ಇದು ಹಿಂದೂ ಧರ್ಮದ ಪ್ರಶ್ನೆ, ಬೇರೆ ಧರ್ಮೀಯರು ಇದರಲ್ಲಿ ಪ್ರವೇಶಿಸಬಾರದು ಎನ್ನುತ್ತಾರಲ್ಲ?

ಬೇಬಿ: ಅದು ಸರಿಯಲ್ಲ. ಇಂತಹ ಯಾವುದೇ ಪ್ರತಿರೋಧ ಆಯಾ ಧರ್ಮದ ಒಳಗಿನಿಂದಲೇ ಬರಬೇಕು. ಮಹಾತ್ಮಗಾಂಧೀಜಿ ಅದನ್ನೇ ಮಾಡಿದರು. ನಿಜ, ಅದರರ್ಥ ಬೇರೆ ಧರ್ಮೀಯರು ಭಾಗವಹಿಸಬಾರದು ಎಂಬುದಲ್ಲ. ಹಿಂದಿನ ಹಲವಾರು ಸಾಮಾಜಿಕ ಸುಧಾರಣೆಯ ಹೋರಾಟಗಳಲ್ಲಿ ಜಾತಿ, ಮತಬೇಧಗಳಿಲ್ಲದೇ ದೇಶದ ನಾಗರೀಕರಾಗಿ ಎಲ್ಲರೂ ಭಾಗವಹಿಸಿದ್ದಾರೆ, ಬದಲಾವಣೆಗಳಾಗಿವೆ.

ಜನಶಕ್ತಿ: ಹೌದು ಇದೇ ಹೊತ್ತಿನಲ್ಲಿ ನೀವ್ಯಾಕೆ ಮುಸ್ಲಿಂ, ಕ್ರಿಶ್ಚಿಯನ್ ಧರ್ಮೀಯರಲ್ಲಿರುವ ಕಂದಾಚಾರಗಳ ಬಗ್ಗೆ ದನಿ ಎತ್ತುವುದಿಲ್ಲ, ವಿಶೇಷವಾಗಿ ಮಹಿಳೆಯರ ಸಮಾನತೆ ಕೇಳುವ ನೀವು ಮಸೀದಿಗಳಲ್ಲಿ ಮಹಿಳೆಯರ ಬಗೆಗಿನ ತಾರತಮ್ಯಗಳ ಬಗ್ಗೆ ಏನು ಹೇಳುತ್ತೀರಿ ಎಂದು ಜಾಥಾ ಸಂದರ್ಭಗಳಲ್ಲಿ ಕೆಲವರು ಕೇಳಿದ್ದಾರೆ?

ಬೇಬಿ: ಈ ಮೊದಲು ಹೇಳಿದಂತೆ ಒಂದು ಧಾರ್ಮಿಕ ಸಮುದಾಯದಲ್ಲಿರುವ ಕಂದಾಚಾರಗಳ ವಿರುದ್ಧ ಆಯಾ ಧರ್ಮೀಯರೇ ದನಿ ಎತ್ತಬೇಕು. ಆಗ ಅವರಿಗೆ ಎಲ್ಲಾ ಪ್ರಗತಿಪರರ ಬೆಂಬಲ ದೊರೆಯುತ್ತದೆ. ಮಸೀದಿಯಲ್ಲಿ ಪ್ರಾರ್ಥನೆ ಮಾತ್ರವಲ್ಲ, ಕೆಲವೆಡೆ ಮಹಿಳೆಯು ಶಿಕ್ಷಣ ಪಡೆಯುವ ಹಕ್ಕನ್ನು ನಿರಾಕರಿಸಲಾಗುತ್ತಿದೆ. ಇತ್ತೀಚೆಗಿನ ಮಲಾಲಳ ಪ್ರಕರಣವು ಸಮಾಜದ ಎಲ್ಲಾ ವಿಭಾಗಗಳ ಗಮನ ಸೆಳೆಯುತ್ತಿದೆ. ತಾಲಿಬಾನ್ ಶಕ್ತಿಗಳು ಮುಸ್ಲಿಂ ಯುವತಿಯರು ಶಿಕ್ಷಣ ಪಡೆಯುವುದನ್ನೇ ವಿರೋಧಿಸುತ್ತಾರೆ. ಇದಕ್ಕೆ ಎಲ್ಲೆಡೆ ವಿರೋಧವೂ ವ್ಯಕ್ತವಾಗಿದೆ. ಆ ಸಂದರ್ಭದಲ್ಲಿ ಇಸ್ಲಾಮಿಕ್ ರಾಷ್ಟ್ರಗಳು ಸಹ ಯುವತಿಯರ ಶಿಕ್ಷಣವನ್ನು ಬೆಂಬಲಿಸಿದವು. ಅಲ್ಲದೇ ಪ್ರಜಾಸತ್ತಾತ್ಮಕ ಸಾರ್ವಜನಿಕ ಅಭಿಪ್ರಾಯ ಮುಸ್ಲಿಂ ಬಾಲಕಿಯರ ಶಿಕ್ಷಣದ ಪರವಾಗಿದೆ. ನನಗೆ ಖಾತ್ರಿಯಿದೆ ಮುಸ್ಲಿಂ ಮಹಿಳೆಯರು ಹೆಚ್ಚೆಚ್ಚು ಶಿಕ್ಷಣ ಪಡೆದಂತೆ ಅವರೇ ಮಸೀದಿಗಳಿಗೆ ಪ್ರವೇಶ, ಶಿಕ್ಷಣದ ಹಕ್ಕಿಗಾಗಿ ಆಗ್ರಹ ಪಡಿಸಬಲ್ಲರು.

ಇದೇ ಹೊತ್ತಿನಲ್ಲಿ ಒಂದು ಸಂಗತಿ ಮರೆಯಬಾರದು. ಹಿಂದೂ ಸಮಾಜದೊಳಗೇ ಪ್ರಶ್ನಾತೀತ ಕಾನೂನು ಎಂದೇ ಒಂದು ಹಂತದಲ್ಲಿ ಪರಿಗಣಿತವಾದ ಮನುಸ್ಮೃತಿಯು 'ಮಹಿಳೆ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ' ಎಂದೇ ಪ್ರತಿಪಾದಿಸುತ್ತದೆ. ಪ್ರಾಚೀನ ಕಾಲದಲ್ಲಿ ವಿದ್ವಾಂಸಳಾದ ಗಾರ್ಗಿ ಇಂತಹದ್ದನ್ನು ಪ್ರಶ್ನಿಸಿದ್ದಾಳೆ. ಮಹಿಳೆಯನ್ನು ದಮನಿಸುವ ಪ್ರವೃತ್ತಿ ಬಹಳಷ್ಟು ಸಂಘಟಿತ ಧರ್ಮಗಳಲ್ಲಿದೆ.



ಅಂದಹಾಗೆ ಬೌದ್ಧ, ಜೈನ ಧರ್ಮಗಳಂತಹವನ್ನು ಹೊರತು ಪಡಿಸಿ.

ಜನಶಕ್ತಿ: ಹಾಗೇ ಶಬರಿಮಲೆಯ ಅಯ್ಯಪ್ಪ ದೇವಾಲಯದಲ್ಲಿ ಮಹಿಳೆಯರಿಗೆ ಪ್ರವೇಶ ನಿರ್ಬಂಧವಿರುವ ಬಗ್ಗೆ ಎಡ ಶಕ್ತಿಗಳ ನಿಲುವೇನು?

ಬೇಬಿ: ಅಲ್ಲಿ ನಿರ್ದಿಷ್ಟ ವಯಸ್ಸಿನ ಮಹಿಳೆಯರ ಪ್ರವೇಶಕ್ಕೆ ಮಾತ್ರ ನಿರ್ಭಂಧವಿದೆ. ಮುಟ್ಟಾಗುವವರು ದೇವಾಲಯದ ಕೆಲವು ಆಚರಣೆಗಳನ್ನು ಮಾಡುವಂತಿಲ್ಲ ಎಂದು ದೇವಸ್ಥಾನ ಮಂಡಳಿಯವರು ಹೇಳುತ್ತಾರೆ. ಅದು ಅಲ್ಲಿಯ ಸಂಪ್ರದಾಯ. ಉಳಿದಂತೆ ಮಹಿಳೆಯರು ಪ್ರವೇಶಿಸಬಹುದು. ಇಲ್ಲಿ ಜಾತಿ ತಾರತಮ್ಯದ ಪ್ರಶ್ನೆಯಿಲ್ಲ, ಲಿಂಗ ಸಂಬಂಧಿ ಅಂಶವಿದೆ. ಮಹಿಳೆಯರು ಇದನ್ನು ವಿರೋಧಿಸಲು ಮುಂದಾದರೆ ನಾವೂ ಬೆಂಬಲಿಸುತ್ತೇವೆ.

ಜನಶಕ್ತಿ: ಮಡೆಸ್ನಾನ, ಪಂಕ್ತಿಬೇಧವನ್ನು ವಿರೋಧಿಸಿ ಪ್ರಜಾಸತ್ತಾತ್ಮಕವಾಗಿ ಚಳುವಳಿ ನಡೆದಿರುವಾಗ ಸರಕಾರದ ಪ್ರತಿಕ್ರಿಯೆಯ ಬಗ್ಗೆ ನೀವೇನು ಹೇಳ ಬಯಸುತ್ತೀರಿ?

ಬೇಬಿ: ಸರಕಾರದ ಪ್ರತಿಕ್ರಿಯೆ ಸಮರ್ಥನೀಯವಲ್ಲ. ಮಾತ್ರವಲ್ಲ ಖಂಡನೀಯ. ಜಾತಿ ತಾರತಮ್ಯದ ವಿರುದ್ಧದ ಹೋರಾಟ ನಡೆಸುತ್ತಿರುವವರ ಮೇಲೆ ಪೋಲೀಸರನ್ನು ಬಿಟ್ಟು ಆಕ್ರಮಣ ನಡೆಸಿ ದಮನ ಮಾಡುವುದನ್ನು ತೀವ್ರವಾಗಿ ಖಂಡಿಸುತ್ತೇವೆ. ಇಂತಹ ದಮನಕಾರಿ ಪ್ರಯತ್ನಗಳಿಂದ ನಾವು ವಿಚಲಿತರಾಗುವುದಿಲ್ಲ ವೆಂಬುದನ್ನು ಹೇಳಬಯಸುತ್ತೇವೆ. ಸರ್ಕಾರ ಈಗ ಹೂಡಿರುವ ಎಲ್ಲಾ ಮೊಕದ್ದಮೆಗಳನ್ನು ಹಿಂಪಡೆಯಬೇಕು. ಲಾಠಿ ಚಾರ್ಜಿಗೆ ಕಾರಣರಾದವರ ಮೇಲೆ ಕ್ರಮವಹಿಸಬೇಕು ಎಂದೂ ಆಗ್ರಹಿಸುತ್ತೇವೆ. ಈ ಹೋರಾಟ ಇನ್ನಷ್ಟೂ ವ್ಯಾಪಕತೆ ಪಡೆದು ಮುಂದೆ ಸಾಗಲಿದೆ. ನಮಗೆ ಖಂಡಿತ ಯಶ ಕಾಣುವ ವಿಶ್ವಾಸವಿದೆ.

.....ಕಾಂಗ್ರೆಸಿನ 'ಜೈಪುರ ಘೋಷಣೆ'

ಪುಟ 7 ರಿಂದ

ಹೊಗಳಿದೆ. ಉದಾಹರಣೆಗೆ, ಅದು ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಹೂಡಿಕೆಗೆ ಅವಕಾಶ ಕೊಡುವ ನಿರ್ಣಯವನ್ನು ಸಂಪೂರ್ಣವಾಗಿ ಅನುಮೋದಿಸುತ್ತದೆ.

ಚುನಾವಣಾ ನಗಾರಿ

ಈ ಠರಾವಿನ ಪ್ರಮುಖ ಅಂಶ ಮಾತ್ರ ಕಾಂಗ್ರೆಸ್ ಪಕ್ಷ ಮುಂಬರುವ ಚುನಾವಣೆಗಳಲ್ಲಿ ಜನತೆಯ ಬೆಂಬಲ ಕೇಳಲು ಮುಂದಿಡುವ ಅವೇ ಮೂರು ಮುಖ್ಯ ಘೋಷಣೆಗಳು : ನಗದು ವರ್ಗಾವಣೆ ಅಥವ ನೇರ ಪ್ರಯೋಜನ ವರ್ಗಾವಣೆ–'ನಿಮ್ಮ ದುಡ್ಡು ನಿಮ್ಮ ಕೈಗೆ' ಸ್ಕೀಮು, ರಾಷ್ಟ್ರೀಯ ಆಹಾರ ಭದ್ರತಾ ಶಾಸನ ಮತ್ತು ಭೂಸ್ವಾಧೀನದಲ್ಲಿ ಪರಿಹಾರ ಹಾಗೂ ಮರುವಸತಿ ಕುರಿತ ಒಂದು ಹೊಸ ಶಾಸನ.

ನಗದು ವರ್ಗಾವಣೆ ಯೋಜನೆ ಜನತೆಗೆ ಮಾಡುತ್ತಿರುವ ಒಂದು ಮಹಾವಂಚನೆ ಮಾತ್ರವಲ್ಲ, ಕಾನೂನುಬಾಹಿರ ಕ್ರಮ ಕೂಡ. ಏಕೆಂದರೆ, ಈ ಯೋಜನೆಯ ಅಡಿಗಲ್ಲಾದ 'ಆಧಾರ್' ಕುರಿತ ಶಾಸನವನ್ನು ಸಂಸತ್ತು ಇನ್ನೂ ಪಾಸು ಮಾಡಿಲ್ಲ ಎಂಬುದನ್ನು ನಾವೀಗಾಗಲೇ ನೋಡಿದ್ದೇವೆ. ಸಂಸತ್ತಿನ ಮುಂದಿರುವ ಆಹಾರ ಭದ್ರತಾ ಕಾನೂನು ಆಹಾರಧಾನ್ಯಗಳ ಸಾರ್ವತ್ರಿಕ ಲಭ್ಯತೆಯ ಭರವಸೆ ಕೊಡುತ್ತಿಲ್ಲ. ದೇಶದ ಎಲ್ಲ ಕುಟುಂಬಗಳಿಗೆ, ಅವು ಎಪಿಎಲ್ ಇರಲಿ, ಬಿಪಿಎಲ್ ಇರಲಿ, ಸಾರ್ವತ್ರಿಕ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಕನಿಷ್ಟ 35 ಕೆಜಿ ಆಹಾರಧಾನ್ಯಗಳನ್ನು ಕೆಜಿಗೆ 2ರೂ. ದಾಟದ ದರದಲ್ಲಿ ಒದಗಿಸದೆ ದೇಶದಲ್ಲಿ ಯಾವುದೇ ಅರ್ಥಪೂರ್ಣ ಆಹಾರ ಭದ್ರತೆ ಸಾಧ್ಯವಿಲ್ಲ.

ಹೀಗೆ, ಈ ಮೂರು ಭರವಸೆಗಳು ಕಾಂಗ್ರೆಸ್ ಪಕ್ಷದ ಚುನಾವಣಾ ಕಾರ್ಯತಂತ್ರದ ನಗಾರಿ ಎಂಬುದು ಸ್ಪಷ್ಟ. ಆದರೇನು ಮಾಡುವುದು, ನವ–ಉದಾರವಾದಿ ಆರ್ಥಿಕ ಸುಧಾರಣೆಗಳ ಮೂಲಕ ಹೆಚ್ಚೆಚ್ಚು ಬೆಳವಣಿಗೆ ದರಗಳನ್ನು ಸಾಧಿಸುವ ಪ್ರಯತ್ನಗಳು, ಅದೇ ವೇಳೆಗೆ, "ಅಸಮಾನತೆಯನ್ನು ಇಳಿಸಲು ಎಲ್ಲರನ್ನು ಒಳಗೊಳ್ಳುವ ಉದ್ಯೋಗ ಸಹಿತ ಬೆಳವಣಿಗೆ" ಇವೆರಡು ಪರಸ್ಪರ ಹೊಂದಾಣಿಕೆಯಾಗದ ವಿಷಯಗಳು. 'ಹೊಳೆಯುವ ಭಾರತ'ದ ಹೊಳಪಿನ ತೀವ್ರತೆಗೆ ಅನುಗುಣವಾಗಿ 'ನರಳುವ ಭಾರತ'ದ ನರಳಿಕೆಯ ತೀಕ್ಷ್ಣತೆಯೂ ಹೆಚ್ಚುತ್ತದೆ. ಬಂಡವಾಳಶಾಹಿಯ ತರ್ಕದ ಪರಿಯಿದು. ಭಾರತ ತನ್ನ ಆರ್ಥಿಕವನ್ನು ಮತ್ತು ಸಂಪನ್ಮೂಲಗಳನ್ನು ಅಂತರ್ರಾಷ್ಟ್ರೀಯ ಮತ್ತು ದೇಶೀ ಬಂಡವಾಳದ ಲಾಭಗಳನ್ನು ಗರಿಷ್ಟ ಮಟ್ಟಕ್ಕೇರಿಸಲಿಕ್ಕಾಗಿ ಬಲವಂತದಿಂದ ತೆರೆದು ಕೊಡುತ್ತ ಹೋದಂತೆ ಜನಗಳ ಶೋಷಣೆ ತೀವ್ರಗೊಳ್ಳುತ್ತದೆ, ಆ ಮೂಲಕ ಎರಡು ಭಾರತಗಳ ನಡುವಿನ ಕಂದರ ವಿಸ್ತಾರಗೊಳ್ಳುತ್ತ ಹೋಗುತ್ತದೆ.

ಪರ್ಯಾಯ ದಿಕ್ಕಿನ ವೇದಿಕೆಯಾಗಬೇಕು

ಧೋರಣೆಯ ದಿಕ್ಕಿನಲ್ಲಿ ಸಾಗುವ ಪ್ರಯತ್ನದಲ್ಲಿ 'ಜೈಪುರ ಘೋಷಣೆ' ಭಾರತದ ಸ್ವತಂತ್ರ ವಿದೇಶಾಂಗ ಧೋರಣೆಯನ್ನು ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿಗೆ ಅನುಕೂಲ ಕಲ್ಪಿಸುವ ಧೋರಣೆಯತ್ತ ವಾಲಿಸುತ್ತದೆ. ಭಾರತದ ವಿದೇಶಾಂಗ ಧೋರಣೆ "ಪಂಡಿತ್ ಜವಹರಲಾಲ್ ನೆಹರುರವರು ನಿರೂಪಿಸಿದಂತೆ ಅಲಿಪ್ತತೆಯ ಬಹುತಾಳಿಕೆಯ ನೀತಿಗಳ ಮೇಲೆ ನಿಂತಿದೆ, *ಆದರೂ ತ್ವರಿತವಾಗಿ ಬದಲಾಗುತ್ತಿರುವ ಜಾಗತಿಕ ದೃಶ್ಯದಲ್ಲಿ ರಾಷ್ಟ್ರಗಳ ನಡುವಿನ ಸಂಬಂಧಗಳ ಅಗತ್ಯಗಳನ್ನು ಪೂರೈಸುವಂತೆ ಸೃಜನಾತ್ಮಕವಾಗಿ ಅನುಗೊಳಿಸಿದ*" ಧೋರಣೆ ಎಂದು ಅದು ಹೇಳುತ್ತದೆ. ಇಲ್ಲಿ ಒತ್ತು ನೀಡಿರುವ ಭಾಗ ಈ ವಾಲಿಕೆಯನ್ನು ತೋರಿಸುತ್ತದೆ. "ದಕ್ಷಿಣ ಏಶ್ಯದಲ್ಲಿ ಭಾರತದ ನೇತೃತ್ವವನ್ನು ಪುನರ್ರೂಪಿಸುವ ಅಗತ್ಯವಿದೆ" ಎಂದು ಮುಂದುವರೆದು ಅದು ಹೇಳಿರುವುದು ನಮ್ಮ ನೆರೆ ದೇಶಗಳಲ್ಲಿ ಆತಂಕ ಮೂಡಿಸುವುದು ಖಂಡಿತ. ಇದರ ಅರ್ಥವೇನು ಎಂಬುದರ ಸ್ಪಷ್ಟೀಕರಣವೇನೂ ಇಲ್ಲ.

ಆದ್ದರಿಂದ, ಭಾರತದ ಜನತೆ ಇನ್ನು ಆರ್ಥಿಕ ದಾಳಿಗಳಿಗೆ ಮತ್ತು ವಿದೇಶಿ ಬಂಡವಾಳದ ಮೇಲೆ ಹೆಚ್ಚಿನ ಅವಲಂಬನೆಗೆ, ಅದರ ಪರಿಣಾಮವಾಗಿ ನಮ್ಮ ಸ್ವತಂತ್ರ ವಿದೇಶಾಂಗ ಧೋರಣೆಯ ಮೇಲೆ ಒತ್ತಡಗಳನ್ನು ಎದುರಿಸಲು ಸಿದ್ಧವಾಗಬೇಕಿದೆ. ಈ ಎರಡೂ ಪ್ರಮುಖ ವಿಷಯಗಳಲ್ಲಿ ಬಿಜೆಪಿಯನ್ನು ಕಾಂಗ್ರೆಸ್ ಪಕ್ಷದಿಂದ ಭಿನ್ನವಾಗಿಸುವ ಸಂಗತಿ ಸುಮಾರಾಗಿ ಏನೂ ಇಲ್ಲ. ಭಾರತಕ್ಕೆ ಮತ್ತು ನಮ್ಮ ಜನತೆಗೆ ಬೇಕಾಗಿರುವುದು ನಮ್ಮ ದೇಶವನ್ನು ಶ್ರೀಮಂತಗೊಳಿಸುವ ಮತ್ತು ಜನತೆಯ ಸಮೃದ್ಧಿಯನ್ನು ಹೆಚ್ಚಿಸುವ ಒಂದು ಪರ್ಯಾಯ ಧೋರಣೆಯ ದಿಕ್ಕು. ಮುಂಬರುವ ಚುನಾವಣೆಗಳನ್ನು ಇಂತಹ ಒಂದು ಎಡ ಮತ್ತು ಪ್ರಜಾಪ್ರಭುತ್ವವಾದಿ ಪರ್ಯಾಯವನ್ನು ಮುಂದಿಡಲು ಮತ್ತು ಪ್ರತಿಪಾದಿಸಲು ಒಂದು ವೇದಿಕೆಯಾಗಿ ಬಳಸಬೇಕು.


ಜನಶಕ್ತಿ
ಕನ್ನಡ ವಾರಪತ್ರಿಕೆ

ಜನತೆಯ ನಗದು ಕಾರ್ಪೋರೇಟ್ ಜೇಬುಗಳಿಗೆ ವರ್ಗಾವಣೆ!

ಯುಪಿಎ-2 ಸರಕಾರ ಇತ್ತೀಚೆಗೆ ಡೀಸೆಲ್ ದರಗಳ ಏರಿಕೆಯಲ್ಲಿ ಅನುಸರಿಸಿರುವ ನೀತಿಯನ್ನು ಪ್ರತಿಭಟಿಸುತ್ತ ಅಖಿಲ ಭಾರತ ಕಿಸಾನ್ ಸಭಾ ಮಾಡಿರುವ ಈ ವರ್ಣನೆ ಅಕ್ಷರಶಃ ಸತ್ಯ. ಸರಕಾರದ ಹಣಕಾಸು ಕೊರತೆಯನ್ನು ಇಳಿಸಲು ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಕೊಡಲಾಗುತ್ತಿದೆ ಎನ್ನುವ 'ಸಬ್ಸಿಡಿ'ಗಳಲ್ಲಿ ಕಡಿತ ತರುವ ಹೆಸರಿನಲ್ಲಿ ಪೆಟ್ರೋಲ್ ದರಗಳ ಮೇಲಿನ ಹತೋಟಿಯನ್ನು ತೆಗೆಯಲಾಯಿತು. ನಂತರ ಅಡುಗೆ ಅನಿಲ ಸಿಲಿಂಡರುಗಳ ಸಂಖ್ಯೆಯ ಮೇಲೆ ಮಿತಿ ಹಾಕಲಾಯಿತು. ಈಗ ಡೀಸೆಲ್ ದರಗಳನ್ನು ಕೂಡ ಹತೋಟಿ ಮುಕ್ತಗೊಳಿಸಲಾಗಿದೆ. ಹೀಗೆ ಮಾಡುವಾಗಲೂ ಅದರ ಶ್ರೀಮಂತ-ಪರ ಪಕ್ಷಪಾತ ಪ್ರದರ್ಶನಗೊಂಡಿದೆ.

ಹತೋಟಿ-ಮುಕ್ತಗೊಳಿಸುವುದೆಂದರೆ ಪೆಟ್ರೋಲ್, ಡೀಸೆಲ್ ಬೆಲೆಗಳು ಏರಿದಾಗ, ಅದು ತಾನು ಮಾಡಿದ್ದಲ್ಲ, ತೈಲ ಮಾರಾಟ ಕಂಪನಿಗಳು ಮಾಡಿದ್ದು ಎಂದು ಕೈತೊಳೆದುಕೊಳ್ಳಲು ಸರಕಾರಕ್ಕೆ ಅವಕಾಶ ಎಂದರ್ಥವಷ್ಟೆ ಎಂಬುದು ಜನತೆಗೆ ಹೊಸ ಸಂಗತಿಯೇನಲ್ಲ. ಈಗ ಡೀಸೆಲ್ ದರಗಳನ್ನು ಏರಿಸಿರುವ ಪರಿಯನ್ನು ನೋಡಿ. ಚಿಲ್ಲರೆ ಬಳಕೆದಾರರಿಗೆ ಸದ್ಯಕ್ಕೆ 45 ಪೈಸ+ತೆರಿಗೆಗಳು. ಮುಂದೆ ಪ್ರತಿ ತಿಂಗಳು ಇಂತಹ ಏರಿಕೆ, 'ಸಬ್ಸಿಡಿ' ಅಂಶ ಸೊನ್ನೆಯಾಗುವ ವರೆಗೆ. ಆದರೆ ಸಗಟು ಬಳಕೆದಾರರಿಗೆ ತಕ್ಷಣವೇ ರೂ. 9.25 ಏರಿಕೆ, ತೆರಿಗೆ ಸೇರಿ ರೂ.10.80 ಏರಿಕೆ. ಈ ಸಗಟು ಬಳಕೆದಾರರೆಂದರೆ ಯಾರು? ರೈಲ್ವೆ, ಸಾರಿಗೆ, ವಿದ್ಯುತ್ ಉತ್ಪಾದನೆ ಇತ್ಯಾದಿ. ಇವುಗಳೆಲ್ಲ ಈ ಭಾರೀ ಏರಿಕೆಯ ಹೊರೆಯನ್ನು ದಾಟಿಸುವುದು ಜನಸಾಮಾನ್ಯರ ಮೇಲೆಯೇ. ಇತ್ತೀಚೆಗಷ್ಟೇ ರೈಲು ದರಗಳನ್ನು ಏರಿಸಿರುವ ರೈಲ್ವೆ ಮಂತ್ರಾಲಯ ಈ ಡೀಸೆಲ್ ಬೆಲೆಯೇರಿಕೆಯಿಂದ ತನ್ನ ಇಂಧನ ಖರ್ಚಿನಲ್ಲಿ 30ಶೇ. ಹೆಚ್ಚಳವಾಗುತ್ತದೆ ಎಂದು ತಕ್ಷಣವೇ ಹೇಳಿದೆ. ಸಾರಿಗೆ ದರಗಳನ್ನು ಏರಿಸದೆ ಗತ್ಯಂತರವಿಲ್ಲ ಎಂದು ರಾಜ್ಯ ಸಾರಿಗೆ ಸಂಸ್ಥೆಗಳು ಹೇಳುತ್ತಿವೆ. ವಿದ್ಯುತ್ ದರಗಳು ಅವುಗಳ ಉತ್ಪಾದನೆಗೆ ತಗಲುವ ಖರ್ಚುಗಳಿಗೆ ಅನುಗುಣವಾಗಿ ಹೆಚ್ಚುತ್ತಲೇ ಇರಬೇಕಾಗುತ್ತದೆ ಎಂದು ವಿದ್ಯುತ್ ಮಂತ್ರಾಲಯ ಎರಡು ವಾರಗಳ ಹಿಂದಷ್ಟೇ ಗೊಣಗಿತ್ತು.

ಇಲ್ಲಿ ಇನ್ನೊಂದು ಸಂಗತಿಯೂ ಇದೆ. ಡೀಸೆಲ್ ದರಗಳು ಪೆಟ್ರೋಲಿಗಿಂತ ಕಡಿಮೆಯಿರುವುದರಿಂದ ಕಾರು ಡೀಸೆಲ್ ಕಾರುಗಳಿಗೆ ಬೇಡಿಕೆ ಹೆಚ್ಚಿತ್ತು. ಇದರ ಲಾಭ ಗಿಟ್ಟಿಸಲು ಕಾರು ತಯಾರಕರು ಡೀಸೆಲ್ ಕಾರುಗಳಿಗೆ ಹೆಚ್ಚಿನ ಬೆಲೆ ನಿಗದಿ ಮಾಡಿದ್ದಾರೆ. ಅವರಿಗೆ ತಕ್ಷಣವೇ ತೊಂದರೆಯಾಗದಿರಲಿ, ಡೀಸೆಲ್ ಕಾರುಗಳನ್ನು ಖರೀದಿಸಿರುವ ಶ್ರೀಮಂತ ವಿಭಾಗಗಳಿಗೆ ತಕ್ಷಣೇ 'ಹೊರೆ'ಯಾಗದಿರಲಿ ಎಂದು ಚಿಲ್ಲರೆ ಬಳಕೆದಾರರಿಗೆ ದರ ಏರಿಕೆಗಳನ್ನು ಕಂತುಗಳಲ್ಲಿ ಮಾಡಲು ಸರಕಾರ ತೈಲ ಮಾರಾಟ ಕಂಪನಿಗಳಿಗೆ ಅನುಮತಿ ಕೊಟ್ಟಿದೆ.



ವೇದರಾಜ ಎನ್.ಕೆ.



ಕೃಪೆ : ದಿ ಹಿಂದು

ಮತ್ತೊಂದು ಗಮನಿಸಬೇಕಾದ ಸಂಗತಿಯೆಂದರೆ ಡೀಸೆಲ್ ಬೆಲೆಗಳ ಮೇಲಿನ ಹತೋಟಿ ತೆಗೆದಿರುವುದನ್ನು ಖಾಸಗೀ ವಲಯದ ತೈಲ ಶುದ್ಧೀಕರಣ ಕಂಪನಿಗಳು ಸ್ವಾಗತಿಸಿವೆ. ಮುಕೇಶ್ ಅಂಬಾನಿಯ ರಿಲಯಂಸ್ ಮತ್ತು ರುಯಾಗಳ ಎಸ್ಸಾರ್ ಆಯಿಲ್‌ನ ಶೇರು ಬೆಲೆಗಳು ಸರಕಾರದ ಈ ಪ್ರಕಟಣೆಯ ನಂತರ ಇದುವರೆಗಿನ ಗರಿಷ್ಠ ಬೆಲೆಗಳನ್ನು ತಲುಪಿವೆಯಂತೆ. "ಒಮ್ಮೆ ಚಿಲ್ಲರೆ ಬೆಲೆಗಳು ಮತ್ತು ಮಾರುಕಟ್ಟೆ ಬೆಲೆಗಳ ನಡುವೆ ಸಾಮ್ಯತೆ ಬಂತೆಂದರೆ, ಅದು ಬಳಕೆದಾರರಿಗೆ ಹೆಚ್ಚಿನ ಆಯ್ಕೆಯನ್ನು ಕೊಟ್ಟು ಪ್ರಯೋಜನಕಾರಿಯಾಗುತ್ತದೆ, ಅಲ್ಲದೆ ಬೇಡಿಕೆಯ ನಿರ್ವಹಣೆಗೆ ನೆರವಾಗುತ್ತದೆ" ಎಂದು ಎಸ್ಸಾರ್ ಆಯಿಲ್‌ನ ಸಿಇಒ ಸಂತೋಷ ವ್ಯಕ್ತಪಡಿಸಿದ್ದಾರೆ.

ಅವರ ಸಂತೋಷ ಸಹಜವೇ. ಈ ಖಾಸಗಿ ಬಂಕ್‌ಗಳು ಕೇಳುವ ದರ ತೆರಲಾರದೆ ವಾಹನ ಚಾಲಕರು, ಅದರಲ್ಲೂ ಲಾರಿ, ಟ್ರಕ್ ಚಾಲಕರು ಅವುಗಳೆಡೆ ಕಣ್ಣೆತ್ತಿಯೂ ನೋಡದೆ ಅವುಗಳೆಲ್ಲ ಬಿಕೋ ಎನ್ನುತ್ತಿದ್ದವು. ಇನ್ನು ಸಾರ್ವಜನಿಕ ವಲಯದ ತೈಲ ಮಾರಾಟ ಕಂಪನಿಗಳೂ 'ಮಾರುಕಟ್ಟೆ' ದರಗಳಲ್ಲಿ ಮಾರುತ್ತವೆಯಾದ್ದರಿಂದ ತಮ್ಮನ್ನೂ 'ಆಯ್ದು'ಕೊಳ್ಳಲು ಅಡ್ಡಿಯೇನೂ ಇಲ್ಲ ಎಂಬ ಸಂತೋಷ ಅವರಿಗೆ. ಅವರು ಅಲ್ಲಿಗೇ ನಿಂತಿಲ್ಲ. ಯುಪಿಎ ಸರಕಾರದ ಬಜೆಟುಗಳಲ್ಲಿ 'ಸಬ್ಸಿಡಿ'ಗಳಿಗಿಂತ ಹೆಚ್ಚಿನ ಪ್ರಮಾಣದ ತೆರಿಗೆ ರಿಯಾಯಿತಿಗಳನ್ನು ಪಡೆದು ಹಣಕಾಸು ಕೊರತೆಯನ್ನು ಹೆಚ್ಚಿಸಿದ ವರ್ಗಕ್ಕೆ ಸೇರಿದ ಈ ಮಹಾನುಭಾವ "ದೇಶದ ಆರ್ಥಿಕಕ್ಕೆ ಕೂಡ ಅದು ಒಳ್ಳೆಯದು. ಊದುತ್ತಾ ಹೋಗುತ್ತಿರುವ ಸಬ್ಸಿಡಿಗಳನ್ನು ಕಡಿತಮಾಡಿ ಹಣಕಾಸು ಶಿಸ್ತು ಹಳಿ ತಪ್ಪದಂತೆ ಮಾಡುತ್ತದೆ" ಎಂದು ಯುಪಿಎ ನೇತಾರುಗಳ ಮಾತುಗಳನ್ನು ಪ್ರತಿಧ್ವನಿಸಿದ್ದಾನೆ.

ಡೀಸೆಲ್ ದರ ಏರಿಕೆಯಿಂದ ಹಣದುಬ್ಬರದ ಮೇಲೆ 'ಹಿತಕರ' ಪ್ರಭಾವ!

ಪೆಟ್ರೋಲ್, ಡೀಸೆಲ್ ಬೆಲೆಯೇರಿಕೆಗಳು ಸದಾ ಹಣದುಬ್ಬರವನ್ನು ಇನ್ನಷ್ಟು ಹೆಚ್ಚಿಸುತ್ತವೆ ಎಂಬುದು ದೇಶದ ಜನಸಾಮಾನ್ಯರ ಅನುಭವ. ಆದರೆ ಅದು ನಿಜವಲ್ಲ ಎನ್ನುತ್ತಿದ್ದಾರೆ ದೇಶದ ಯೋಜನಾ ಆಯೋಗದ ಉಪಾಧ್ಯಕ್ಷರು- ಹೌದು, ದಿನಕ್ಕೆ 32ರೂ. ಗಿಂತ ಹೆಚ್ಚು ಖರ್ಚು ಮಾಡಬಲ್ಲವರು ಬಡವರಲ್ಲ ಎನ್ನುತ್ತ ಯೋಜನಾ ಭವನದ ಶೌಚಾಲಯದ ನವೀಕರಣಕ್ಕೇ 35ಲಕ್ಷ ಖರ್ಚನ್ನು ಸಮರ್ಥಿಸಿಕೊಂಡಿರುವ ಆರ್ಥಿಕಜ್ಞ, ಡೀಸೆಲ್ ಬೆಲೆಯೇರಿಕೆ ಹಣದುಬ್ಬರದ ಮೇಲೆ 'ಹಿತಕರ' ಪ್ರಭಾವ ಬೀರಲಿದೆಯಂತೆ. "ಬೆಲೆಯನ್ನು ಏರದಂತೆ ಒತ್ತಿಟ್ಟಿದ್ದು, ನೀವು ಅದನ್ನು ಏರಿಸಿದಾಗ, ಜನಗಳ ಬಳಿ ಬೇರೆ ಸರಕುಗಳನ್ನು ಕೊಳ್ಳಲು ಹಣವಿರುವುದಿಲ್ಲ; ಅದು ಮಾರುಕಟ್ಟೆಯಲ್ಲಿ ಇತರ ಬೆಲೆಗಳ ಮೇಲಿನ ಒತ್ತಡವನ್ನು ಸೌಮ್ಯಗೊಳಿಸುತ್ತದೆ" ಎಂದು ಅವರು ಮತ್ತು ಸರಕಾರದ ಇತರ ವಕ್ತಾರರು ಡೀಸೆಲ್ ಬೆಲೆಯೇರಿಕೆಯನ್ನು ಸಮರ್ಥಿಸಿಕೊಂಡಿರುವುದಾಗಿ ವರದಿಯಾಗಿದೆ. ಇನ್ನೊಂದು ವಿಚಿತ್ರ ತರ್ಕವಲ್ಲವೇ? ನವ-ಉದಾರವಾದಕ್ಕೆ ಜೋತು ಬಿದ್ದವರು ಇಂತಹ ತರ್ಕಗಳನ್ನು ಮುಂದಿಡುತ್ತಲೇ ಇರಬೇಕಾಗುತ್ತದೆ.

ಇಂತಹ ಸರಕಾರಕ್ಕೆ ಮತ್ತು ದೊಡ್ಡ ಉದ್ಯಮಿಗಳಿಗೆ ರಿಝರ್ವ್ ಬ್ಯಾಂಕ್ ಅವರ ನಿರೀಕ್ಷೆಯಂತೆ ಬ್ಯಾಂಕ್ ದರಗಳನ್ನು ಇಳಿಸುತ್ತಿಲ್ಲ ಎಂದು ಆತಂಕವುಂಟಾಗಿತ್ತು. ಈ ತಿಂಗಳಾಂತ್ಯದಲ್ಲಿ ಮಾಡುವ ಆರ್ಥಿಕದ ಕಾಲು-ವಾರ್ಷಿಕ ಪರಾಮರ್ಶೆಯಲ್ಲಿ ಖಂಡಿತ ಇಳಿಸುತ್ತಾರೆ ಎಂಬ ನಿರೀಕ್ಷೆಯೂ ಸುಳ್ಳಾಗಬಹುದೇ ಎಂದು 'ಭಯ ಕಾಡು'ತ್ತಿದೆಯಂತೆ ಅವರನ್ನು.

ಇದಕ್ಕೆ ಕಾರಣ-ಸಮಾಜದ ಕೆಳವಿಭಾಗಗಳವರು ತಮ್ಮ ಬಜೆಟಿನ ಬಹುಭಾಗವನ್ನು ಆಹಾರಕ್ಕೆ ಖರ್ಚು ಮಾಡಬೇಕಾಗಿದೆ, ಅವರಿಗೆ ವಿಪರೀತ ಆಹಾರ ಬೆಲೆಯುಬ್ಬರವೇ ಹೆಚ್ಚು ಆತಂಕ ಉಂಟುಮಾಡುವಂತದ್ದು ಎಂದು ರಿಝರ್ವ್ ಬ್ಯಾಂಕ್ ಗವರ್ನರ್ ಮತ್ತೊಮ್ಮೆ ಹೇಳಿರುವುದು. ತಮ್ಮ 'ಸುರೇಶ್ ತೆಂಡುಲ್ಕರ್ ಸ್ಮಾರಕ ಭಾಷಣ'ದಲ್ಲಿ ಅವರು, ಬಡವರು ಮತ್ತು ಬಡತನದ ಬಗ್ಗೆ ನಮ್ಮ ತಿಳುವಳಿಕೆಯನ್ನು ಉತ್ತಮ ಪಡಿಸಿಕೊಳ್ಳುವ ಅಗತ್ಯ ಇದೆ ಎಂದಿದ್ದಾರೆ. ಇದಕ್ಕೆ ಮೊದಲು ಅವರು ಉತ್ತರ ಪ್ರದೇಶದಲ್ಲಿ ಮಾತಾಡುತ್ತ ಹಣದುಬ್ಬರದ ವಿರುದ್ಧ ಹೋರಾಟ ಕೇಂದ್ರೀಯ ಬ್ಯಾಂಕಿನ ಮೊದಲ ಆದ್ಯತೆ ಎಂದಿದ್ದರು. ಆಹಾರ ವಸ್ತುಗಳ ಬೆಲೆಗಳ ಸೂಚ್ಯಂಕ ಡಿಸೆಂಬರ್ ತಿಂಗಳಲ್ಲಿ ಎರಡಂಕಿ ದಾಟಿದೆ. ಹಿಂದಿನ ತಿಂಗಳು 8.5 ಶೇ. ಇದ್ದದ್ದು 11.16ಕ್ಕೆ ಏರಿದೆ. ಯೋಜನಾ ಆಯೋಗದ ಉಪಾಧ್ಯಕ್ಷರು ಏನೇ ಸಮಜಾಯಿಷಿ ಕೊಟ್ಟರೂ ಡೀಸೆಲ್ ಬೆಲೆ ಹತೋಟಿ ತೆಗೆದ ನಂತರ, ಪೆಟ್ರೋಲ್ ಬೆಲೆ ಹತೋಟಿ ತೆಗೆದಾಗ ಆದಂತೆ ಹಣದುಬ್ಬರ ಮತ್ತಷ್ಟು ಹೆಚ್ಚಬಹುದೇ ಹೊರತು 'ಹಿತಕರ' ಪ್ರಭಾವ ಬೀರಲಾರದು.

ಈ ನಡುವೆ ಉದ್ಯಮಿಗಳ ಸಂಘ ಅಸೋಚಾಮ್ ಹೆಚ್ಚುತ್ತಿರುವ ಹಣದುಬ್ಬರ, ಆರ್ಥಿಕ ಬೆಳವಣಿಗೆಯಲ್ಲಿ ಇಳಿಕೆ ಮತ್ತು ಜಾಗತಿಕ ನಿಧಾನಗತಿಯಿಂದಾಗಿ ಹಣಕಾಸು ಪರಿಸ್ಥಿತಿ ಮತ್ತಷ್ಟು ಹದಗೆಡಬಹುದು ಎಂದಿದೆ. "ಪ್ರತಿಕ್ರಮಗಳನ್ನು ಕೈಗೊಳ್ಳಲು ಏನೂ ಅವಕಾಶವಿಲ್ಲದ್ದರಿಂದ ದೇಶದ ಆರ್ಥಿಕ 1991ರ ಆರ್ಥಿಕ ಬಿಕ್ಕಟ್ಟಿನ ಪರಿಸ್ಥಿತಿಯ ಸನಿಹ ಬರುತ್ತಿದೆ" ಎಂದು ಅದು ಭೀತಿ ವ್ಯಕ್ತಪಡಿಸಿದೆ.

ಸೂಚನೆ

ಚಂದಾದಾರರು, ಏಜೆನ್ಸಿದಾರರಿಗೆ, ಜನಶಕ್ತಿಯ ಪ್ರಸಾರ, ಚಂದಾ, ಏಜೆನ್ಸಿಗಳಿಗೆ ಸಂಬಂಧಿಸಿದ ವ್ಯವಹಾರ, ವಿಚಾರಣೆ, ದೂರುಗಳು ಇತ್ಯಾದಿ ಇನ್ನೂ ಮುಂದೆ ಈ ಕೆಳಗಿನ ವಿಳಾಸದಲ್ಲೇ ಮಾಡತಕ್ಕದ್ದು.

ವಿಳಾಸ :
40/5, 2ನೇ 'ಬಿ' ಮೈನ್, 16ನೇ ಕ್ರಾಸ್,
ಸಂಪಂಗಿರಾಮನಗರ, ಬೆಂಗಳೂರು-560027
email : janashakthi13.admn@gmail.com
Phone : 9483966467
ದೂರವಾಣಿ ಸಂಪರ್ಕಕ್ಕೆ ಸಮಯ :
ಬೆಳಗ್ಗೆ 10.00 ರಿಂದ ಸಂಜೆ 6.00

ಜೀವ ವಿಮಾ ಕ್ಷೇತ್ರದ ಅಭದ್ರತೆಗೆ ಕೇಂದ್ರ ಸರ್ಕಾರ ಸಂಚು ವಿಮಾ ಪ್ರತಿನಿಧಿಗಳು ವಿರೋಧಿಸಬೇಕು

ಸಾರ್ವಜನಿಕ ವಲಯದ ಭಾರತೀಯ ಜೀವ ವಿಮಾ ನಿಗಮವನ್ನು ಅಭದ್ರಗೊಳಿಸುವ ಹಾಗೂ ಸಂಸ್ಥೆಯ ಆಧಾರ ಸ್ಥಂಭವಾಗಿರುವ ವಿಮಾ ಪ್ರತಿನಿಧಿಗಳ ಸಂಖ್ಯೆಯನ್ನು ಕಡಿಮೆಗೊಳಿಸಿ ಖಾಸಗಿ ಕಾರ್ಪೋರೇಟ್ ವಿದೇಶಿ ವಿಮಾ ಕಂಪನಿಗಳಿಗೆ ಅವಕಾಶ ನೀಡುವ ಪ್ರಯತ್ನವನ್ನು ಕೇಂದ್ರ ಸರಕಾರ ಆರಂಭಿಸಿದೆ. ಇದರ ವಿರುದ್ಧ ತೀವ್ರ ಹೋರಾಟ ಮಾಡಬೇಕಾಗಿದೆ ಎಂದು ಸಂಸತ್ ಸದಸ್ಯರಾದ ಪಿ.ಕೆ ಬಿಜು ವಿಮಾ ಪ್ರತಿನಿಧಿಗಳಿಗೆ ಕರೆ ನೀಡಿದರು.

ದಾವಣಗೆರೆ ನಗರದಲ್ಲಿ ಜನವರಿ 8 ಮತ್ತು 9, 2013 ರಂದು ನಡೆದ ಅಖಿಲ ಭಾರತ ಜೀವವಿಮಾ ಪ್ರತಿನಿಧಿಗಳ ಸಂಘದ 3ನೇ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೇಂದ್ರ ಸರಕಾರ ಎಲ್ಲಾ ಸಾರ್ವಜನಿಕ ರಂಗ ಉದ್ಯಮಗಳನ್ನು ಆರ್ಥಿಕ ಉದಾರೀಕರಣದ ಹೆಸರಿನಲ್ಲಿ ಖಾಸಗೀಕರಣ ಮಾಡುತ್ತಿದೆ. ಇದರಿಂದ ಜನ ಸಾಮಾನ್ಯರು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಮತ್ತೊಂದೆಡೆ ಇದರ ಲಾಭ ಪಡೆದ ಬಂಡವಾಳಿಗರು ಜನರ ಹಣವನ್ನು ಲೂಟಿ ಹೊಡೆದು ಮಿಲಿಯಾಧಿಪತಿಗಳಾಗಲು ಸರ್ಕಾರವೇ ಅವಕಾಶ ನೀಡುತ್ತಿದೆ. ಇದರ ವಿರುದ್ದ ದೇಶದ ಜನರು ಬೀದಿಗಿಳಿಯಬೇಕೆಂದು ಅವರು ಕರೆ ನೀಡಿದರು. ಸಮಾರಂಭದ ಮುಖ್ಯ ಅತಿಥಿಗಳಾಗಿ ಸಂಘದ ಅಖಿಲ ಭಾರತ ಕಾರ್ಯದರ್ಶಿ ಪಿ.ಜಿ.ದಿಲೀಪ್ ಮಾತನಾಡಿ ಕಳೆದು ಒಂದು ದಶಕದಲ್ಲಿ ಭಾರತಕ್ಕೆ ವಿಮೆ ಮಾರಾಟದ ಹೆಸರಿನಲ್ಲಿ ಬಂದ 23 ವಿದೇಶಿ ವಿಮಾ ಕಂಪೆನಿಗಳು ಕೇವಲ 5,850.55 ಕೋಟಿ ಬಂಡವಾಳ ತೊಡಗಿಸಿವೆ. ಸಾರ್ವಜನಿಕರಿಂದ ಎಲ್ಐಸಿ ವಿಮಾ ಕಂಪನಿ ಒಂದೇ ರೂ.5,1252.9 ಕೋಟಿ ಬಂಡವಾಳ ಹೂಡಿಕೆ ಮಾಡಿದೆ ಹಾಗೂ ಶೇ.97% ಹೊಸ ವ್ಯವಹಾರ ಎಲ್ಐಸಿ ವಿಮಾ ಪ್ರತಿನಿಧಿಗಳು ಸಂಗ್ರಹಿಸಿದ್ದಾರೆ. ಆದರೆ ಕೇಂದ್ರ ಸರಕಾರ ಮತ್ತು ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ(ಐಆರ್‌ಡಿಎ)ನಿರಂತರ ಎಲ್ಐಸಿ ಮತ್ತು ಪ್ರತಿನಿಧಿಗಳ ಅಸ್ಥಿರತೆಗೆ ಪ್ರಯತ್ನಿಸುತ್ತಿದೆ ಎಂದು ಬಲವಾಗಿ ಖಂಡಿಸಿದರು.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ಪ್ರಸನ್ನಕುಮಾರ್ ಶುಭಕೋರಿ ಮಾತನಾಡುತ್ತಾ ಕೇಂದ್ರ ಸರಕಾರದ ಜನ ವಿರೋಧಿ ನೀತಿಗಳನ್ನು ವಿವರಿಸುತ್ತಾ ಸಾರ್ವಜನಿಕರ ಪಡಿತರ ವ್ಯವಸ್ಥೆ, ಗೊಬ್ಬರ ಔಷಧಿ, ವಸತಿಗೆ ನೀಡಬೇಕಾದ ಸಬ್ಸಿಡಿಗಳನ್ನು ಕಡಿತಗೊಳಸಿ ಟಾಟಾ, ಬಿರ್ಲಾ, ರಿಯಲನ್ಸ್ ಅಂತಹ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳ ಸಹಯೋಗದೊಂದಿಗೆ ಉದ್ಯೋಗ ಸೃಷ್ಟಿಯ ಹೆಸರಿನಲ್ಲಿರೂ. 5.25 ಲಕ್ಷ ಕೋಟಿ ತೆರಿಗೆ ವಿನಾಯಿತಿಯನ್ನು ಕಾರ್ಪೋರೇಟ್ ಸಂಸ್ಥೆಗಳಿಗೆ ನೀಡಲಾಗಿದೆ. ಇದ್ದರಿಂದ ಇವರ ಜನಪರತೆ ತಿಳಿಯುತ್ತದೆ ಎಂದು ಕುಟಿಕಿದರು. ಮತ್ತೋರ್ವ ಅತಿಥಿ, ಮಾಯಕೊಂಡ ಕ್ಷೇತ್ರದ ಶಾಸಕ ಬಸವರಾಜ ನಾಯಕ್ ಸಮ್ಮೇಳನಕ್ಕೆ ಶುಭಕೋರಿದರು.

ನಂತರ ಸಂಘಟನೆಯ ದಕ್ಷಿಣ ಮಧ್ಯವಲಯ ಪ್ರಧಾನ ಕಾರ್ಯದರ್ಶಿ ಹಾಗೂ ಕೇಂದ್ರ ಕಾರ್ಯದರ್ಶಿ ಎಲ್. ಮಂಜುನಾಥ ಮಾತನಾಡುತ್ತಾ ಕಳೆದ 9 ವರ್ಷದಲ್ಲಿ ನಡೆಸಿದ ಹೋರಾಟ ಮತ್ತು ಮಾತುಕತೆ ಭಾಗವಾಗಿ ಹಲವಾರು ಸೌಲಭ್ಯಗಳು ದೊರಕಿವೆ ಎಂದು ವಿವರಿಸಿ ಕೇಂದ್ರ ಸರ್ಕಾರ ವಿಮಾ ಪ್ರತಿನಿಧಿಗಳಿಗೆ ಖಾತರಿ ಪಿಂಚಣಿ, ಕಲ್ಯಾಣನಿಧಿಯನ್ನು ಸ್ಥಾಪಿಸಲು ಒತ್ತಾಯಿಸಿದರು. ಮತ್ತು ರಾಜ್ಯದ 8 ವಿಭಾಗದಲ್ಲಿ ಸಂಘಟನೆ ವಿಸ್ತಾರದೊಂದಿಗೆ ಬಲಿಷ್ಠವಾಗಿ ಕಟ್ಟಲು ಕರೆ ನೀಡಿದರು. ನಂತರ ದಕ್ಷಿಣ ಮಧ್ಯ ವಲಯ ಕಾರ್ಯಾಧ್ಯಕ್ಷರು ಹಾಗೂ ರಾಷ್ಟ್ರೀಯ ಉಪಾಧ್ಯಕ್ಷರೂ ಆದ ಸಿ.ಎ. ಜೋಸೆಫ್ ಮಾತನಾಡುತ್ತಾ ರಾಜ್ಯದಲ್ಲಿ ಸಂಘಟನೆ ಬೆಳೆಯುತ್ತಿದ್ದು ಎಲ್ಐಸಿ ಆಡಳಿತ ಮಂಡಳಿಯು 1972 ಪ್ರತಿನಿಧಿಕಾಯ್ದೆ ತಿದ್ದುಪಡಿಯ ಪರಿಣಾಮವಾಗಿ 12,23,057 ಜನ ವಿಮಾಪ್ರತಿನಿಧಿಗಳು ಸೇವೆಯಿಂದ ವಜಾಗೊಂಡಿದ್ದಾರೆ. ಸರ್ಕಾರ ಈಗಲಾದರೂ ತಿದ್ದುಪಡಿ ವಾಪಸ್ ಪಡೆಯಲು ಪ್ರಸ್ತಾವನೆ ಕಳುಹಿಸಲು ಒತ್ತಾಯಿಸಿದರು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ರಾಜ್ಯ ಅಧ್ಯಕ್ಷರಾದ ಎಸ್.ಜಿ.ಪಂಪಣ್ಣ ವಹಿಸಿದ್ದರು. ಆರಂಭದಲ್ಲಿ ಧ್ವಜಾರೋಹಣ, ನಂತರ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ.ರಮೇಶ್ ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಅತಿಥಿಗಳಾಗಿ ಪಾಲ್ಗೊಂಡಿದ್ದ ಎಲ್ಐಸಿಯ ಶಿವಮೊಗ್ಗ ಹಿರಿಯ ವಿಭಾಗೀಯ ಅಧಿಕಾರಿಗಳಾದ ಯೋಗಾನಂದಮೂರ್ತಿಯವರು ಮಾತನಾಡುತ್ತಾ ನಾವು ವಿಶ್ವದ ನಂ 1 ವಿಮಾ ಸಂಸ್ಥೆಯಾಗಿದ್ದು ಈ ಕೀರ್ತಿ ವಿಮಾ ಪ್ರತಿನಿಧಿಗಳಿಗೆ ಸಲ್ಲಬೇಕು ಎಂದರು.



ಕರ್ನಾಟಕ ರಾಜ್ಯದ 8 ವಿಭಾಗಗಳಾದ ಉಡುಪಿ, ರಾಯಚೂರು, ಮೈಸೂರು, ಧಾರವಾಡ, ಶಿವಮೊಗ್ಗ, ಬೆಂಗಳೂರು –1 ಮತ್ತು 2, ಹಾಗೂ ಬೆಳಗಾವಿ ಸೇರಿದಂತೆ 3ನೇ ರಾಜ್ಯ ಸಮ್ಮೇಳನಕ್ಕೆ 380 ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಇದರಲ್ಲಿ 150ಕ್ಕೂ ಹೆಚ್ಚು ಮಹಿಳಾ ಪ್ರತಿನಿಧಿಗಳು ಪಾಲ್ಗೊಂಡಿದ್ದು ವಿಶೇಷವಾಗಿತ್ತು. ವೇದಿಕೆ ಮೇಲೆ ರಾಜ್ಯ ಕಾರ್ಯಾಧ್ಯಕ್ಷರಾದ ಎಫ್.ಎಸ್. ಸಿಂಧಗಿ ಉಪಾಧ್ಯಕ್ಷರಾದ ಎ.ಪ್ರತಿಭಾ ಮಹಿಳಾ ಉಪಸಮಿತಿ ರಾಜ್ಯಾಧ್ಯಕ್ಷರಾದ ಪಿ.ಯಜುರ್ವೇದಿ, ದ ಕ್ಷಿ ಣ ಮಧ್ಯವಲಯಖಜಾಂಚಿ ಜಿ.ಎನ್.ತಿಪ್ಪೇಸ್ವಾಮಿ ಕಾರ್ಯದರ್ಶಿ .ಬಿ.ಜಯರಾಮ ಹಾಗೂ ಆಂಧ್ರ ಸಮಿತಿಯ ಪ್ರಧಾನ ಕಾರ್ಯದರ್ಶಿ ಪಿ.ಎಲ್.ಎನ್.ನರಸಿಂಹರಾವ್, ಉಪಾಧ್ಯಕ್ಷರಾದ. ನಾಗರತ್ನಮ್ ಉಪಸ್ಥಿತರಿದ್ದರು. ಸ್ವಾಗತ ಸಮಿತಿಯ ಕೋಶಾಧ್ಯಕ್ಷರಾದ ಡಿ.ಸಿ.ಶಿವಮೂರ್ತಿ ಕಾರ್ಯಾಧ್ಯಕ್ಷ ಕಲ್ಲನಗೌಡ, ಜಗಳೂರು ತಿಪ್ಪೇಸ್ವಾಮಿ, ಎ.ಗುರುಬಸಪ್ಪ , ರವಿಕುಮಾರ್, ಬಿ.ಜಿ. ಸೋಮಶೇಖರಪ್ಪ, ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಕೆ.ಎಲ್.ಭಟ್ ಆಸೀನರಾಗಿದ್ದರು. ಸ್ವಾಗತ ಸಮಿತಿಯ ಗೌರಧ್ಯಕ್ಷರಾದ ಎಂ.ಎಸ್.ನಾಗರಾಜ್ ಸ್ವಾಗತ ಕೋರಿದರು. ಕೊನೆಯಲ್ಲಿ ಶಿವಮೂರ್ತಿ ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕ್ರಮವನ್ನು ಚನ್ನಬಸವನಗೌಡ ನಿರ್ವಹಿಸಿದರು.

ಸ್ವಾತಂತ್ರ್ಯ ಹೋರಾಟಗಾರ್ತಿ ಕ್ಯಾಪ್ಟನ್ ಲಕ್ಷ್ಮೀ ಸೆಹಗಲ್ ವೇದಿಕೆಯಲ್ಲಿ ಎರಡು ದಿನ ಸಮ್ಮೇಳನ ನಡೆಯಿತು. ಕೇಂದ್ರ ಸರ್ಕಾರ ವಿಮೆಯಲ್ಲಿ ವಿದೇ[illegible] ಬಂಡವಾಳ ಹೂಡಿಕೆಗೆ ಸಂಸತ್ತಿನಲ್ಲಿ ಅನುಮೋದನೆ ಪಡೆದರೆ ಅದನ್ನು ವಿರೋಧಿಸಿ ತಕ್ಷಣ ಒಂದು ದಿನ ಮಿಂಚಿನ ಮುಷ್ಕರ ಮಾಡುವುದು ಹಾಗೂ 20 ಮತ್ತು 21 ಫೆಬ್ರವರಿ 2013 ರಂದು ನಡೆಯುವ 2 ದಿನದ ಅಖಿಲ ಭಾರತ ಮುಷ್ಕರದಲ್ಲಿ ಸಂಪೂರ್ಣವಾಗಿ ಪಾಲ್ಗೊಂಡು ಯಶಸ್ವಿಗೊಳಿಸುವುದು ಸೇರಿದಂತೆ ಸಮ್ಮೇಳನವು ಸರ್ವಾನುಮತದಿಂದ 26 ನಿರ್ಣಯಗಳನ್ನು ಅಂಗೀಕರಿಸಿತು. ಅಲ್ಲದೇ ಕರ್ನಾಟಕದಲ್ಲಿ ಎಲ್ಐಸಿಯ ಪೂರ್ಣ ಮಟ್ಟದ ವಲಯ ಕಛೇರಿಯನ್ನು, ಬೆಂಗಳೂರು ಹಾಗೂ ರಾಮನಗರ, ಗುಲ್ಬರ್ಗಾ ಮತ್ತು ತುಮಕೂರುಗಳಲ್ಲಿ ಎಲ್ಐಸಿಯ [illegible] ವಿಭಾಗೀಯ ಕಛೇರಿಗಳನ್ನು ಆರಂಭಿಸಲು ಪ್ರಸ್ತಾವನೆ ಕೇಂದ್ರ ಸರ್ಕಾರದ ಮುಂದೆ ಇದ್ದು ತಕ್ಷಣವೇ ಅದನ್ನು ಜಾರಿಗೊಳಿಸಲು ಸಮ್ಮೇಳನ ಒತ್ತಾಯಿಸಿದೆ. ರಾಜ್ಯದ ಎಲ್ಲಾ ಕಛೇರಿಗಳಲ್ಲಿ ಎಲ್ಲಾ ಅರ್ಜಿಗಳನ್ನು ಕನ್ನಡದಲ್ಲಿ ನೀಡಲು ಸಮ್ಮೇಳನ ಒತ್ತಾಯಿಸಿತು.

ನೂತನ ರಾಜ್ಯ ಸಮಿತಿ

ಮುಂದಿನ ಮೂರು ವರ್ಷದ ಅವಧಿಗೆ ನೂತನವಾಗಿ 150ಜನರ ರಾಜ್ಯ ಮಂಡಲಿ ಹಾಗೂ 25 ಜನರ ರಾಜ್ಯಕಾರ್ಯಕಾರಿ ಸಮಿತಿ ಅಲ್ಲದೇ 18 ಜನರ ರಾಜ್ಯ ಕಾರ್ಯದರ್ಶಿ ಮಂಡಲಿಯನ್ನು ಸಮ್ಮೇಳನವು ಆಯ್ಕೆ ಮಾಡಿತು.

ನೂತನ ರಾಜ್ಯ ಸಮಿತಿ.

ಅಧ್ಯಕ್ಷರು–ಬಿ.ಜಯರಾಮ

ಕಾರ್ಯಾಧ್ಯಕ್ಷರು–ಎಫ್.ಎಸ್.ಸಿಂಧಗಿ

ಪ್ರಧಾನ ಕಾರ್ಯದರ್ಶಿ–ರಮೇಶ್‌ಕುಮಾರ್

ಖಜಾಂಚಿ–ಸುಮನ್‌ರಾವ್

ವರದಿ – ಎಲ್.ಮಂಜುನಾಥ

ವಿದ್ಯುತ್ ಸಮಸ್ಯೆ ಹೆಸರಿನಲ್ಲಿ

ಪುಟ 11 ರಿಂದ

ಅನುಮಾನಗಳು ವ್ಯಕ್ತವಾಗಿದ್ದವು. ವ್ಯತ್ಯಾಸವೆಂದರೆ ಕಲ್ಲಿದ್ದಲು ಖರೀದಿ ಸಂಬಂಧ'ದಲ್ಲಿ ಮುನ್ನೆಚ್ಚರಿಕೆಯ ಕ್ರಮವಾಗಿ ಕಲ್ಲಿದ್ದಲನ್ನು ತರಿಸಿಕೊಳ್ಳುವ ಎಂದಿನ ಕ್ರಮವನ್ನೇ ಆಗ ಬುಡಮೇಲು ಮಾಡಲಾಗಿತ್ತು. ಅದರ ಸಂಬಂಧ ಆಗ ಆಕ್ಷೇಪಗಳು ಈ ವಲಯದ ಒಳಗಿನಿಂದಲೇ ಕೇಳಿ ಬಂದಿದ್ದವು. ಆಗ ಮುನ್ನೆಚ್ಚರಿಕೆಯ ಕಲ್ಲಿದ್ದಲು ಸಂಗ್ರಹವನ್ನು ಕೈ ಬಿಟ್ಟ ಕ್ರಮ–ಈಗ ತೀವ್ರ ಮುನ್ನೆಚ್ಚರಿಕೆಯ ವಿದ್ಯುತ್ ಖರೀದಿ ಕ್ರಮ–ಇವು ಒಂದಕ್ಕೊಂದು ಎಷ್ಟೊಂದು ವೈರುಧ್ಯಮಯ ನೋಡಿ. ವೈರುಧ್ಯ ಏನೇ ಇದ್ದರೂ ಈ ಇಂತಹ ಕ್ರಮಗಳ ಹಿಂದಿನ ಮೂಲ ಪ್ರೇರಣೆ ಬಹುಶ: ಒಂದೇ ಇರಬಹುದು ಅನಿಸುತ್ತದೆ. ಆ ಪ್ರೇರಣೆ ಏನು ಅಂತ ಶೋಭಾ ಕರಂದ್ಲಾಜೆಯವರನ್ನು ಕೇಳುವುದೋ ಅಥವಾ ಈಶ್ವರಪ್ಪನವರನ್ನು ಕೇಳುವುದೋ ಅಂತ ಯೋಚಿಸಿದರೆ ಶೋಭಾ ಅವರನ್ನೇ ಕೇಳುವುದು ಒಳ್ಳೆಯದು ಅನಿಸುತ್ತೇ. ಪಾಪ ಈಶ್ವರಪ್ಪನವರು ತಮ್ಮ ಮನೆಯ ನೋಟು ಎಣಿಸುವ ಯಂತ್ರವನ್ನು ಲೋಕಾಯುಕ್ತ ಪೋಲಿಸರು ಹೊತ್ತುಕೊಂಡು ಹೋಗಿರುವುದರಿಂದ ಅವರು ಮಂಡೆ ಬಿಸಿ ಮಾಡಿಕೊಂಡು ಕೂತಿದ್ದಾರೆ.

ಕೃಷಿ ಕೂಲಿಕಾರರ ತಳಗವಾದಿ ವಲಯ ಸಮ್ಮೇಳನ

ದೇಶದ ಒಂದು ದೊಡ್ಡ ರಾಜಕೀಯ ಪಕ್ಷ ಸ್. ಪಕ್ಷಕ್ಕೆ ಆ ಪಕ್ಷದ ಸ್ವಾತಂತ್ರ್ಯಪೂರ್ವ ಲದ ಹಿರಿಯ ಮುಖಂಡರೊಬ್ಬರನ್ನು ರಿಮಗನನ್ನು ಅಖಿಲ ಭಾರತ ಉಪಾಧ್ಯಕರಾಗಿ ಯ್ಕೆ ಮಾಡಲಾಗಿದೆ. ಆ ಕಾರಣಕ್ಕಾಗಿ ದೇಶದ ುವಜನ ಪಟಾಕಿ ಸಿಡಿಸಿ ಸಂಭ್ರಮಿಸುವಂತೆ ರೇಪಿಸಿಲಾಗಿದೆ. ದೇಶ ಸ್ವಾತಂತ್ರ್ಯ ಕಂಡ ಲದಿಂದಲೂ ಈ ಪಕ್ಷಕ್ಕೆ ಪ್ರತ್ಯಕ್ಷವಾಗಿ ಮತ್ತು ವೊಮ್ಮೆ ಪರೋಕ್ಷವಾಗಿ ಈ ಕುಟುಂಬದವರೆ ಷ್ಟ್ರೀಯ ನಾಯಕರು. ದೇಶದ ಮತ್ತೊಂದು ಡ್ಡ ಪಕ್ಷ ಬಿಜೆಪಿ. ಅದರ ಅಖಿಲ ಭಾರತ ್ಯಕ್ಷರು ಬದಲಾಗಿದ್ದಾರೆ. ಆ ಆಧ್ಯಕ್ಷರ ರಲಾವಣೆಯ ದೆಸೆಯಿಂದ ಪಕ್ಷದ ದೆಸೆಯೇ ದಲಾಗುತ್ತದೆ ಎಂದು ಡಂಗೂರ ಡೆಯಲಾಗುತ್ತಿದೆ. ಈ ಪಕ್ಷಗಳೆಲ್ಲ ತಮ್ಮದು ಭುತ್ವ ತತ್ವದಲ್ಲಿ ಕೆಲಸ ಮಾಡುವ ಪಕ್ಷ ತ್ತು ಸಂಘಟನೆಗಳೆಂದು ಬೊಬ್ಬೆ ಹಾಕುತ್ತವೆ. ರರೆ ಇಲ್ಲಿ ಒಂದು ವಿಷಯ ಗಮನಿಸಬೇಕಿದೆ. ಇಲ್ಲಿ ಈ ಎರಡೂ ಆಯ್ಕೆಗಳೂ ಅಕ್ಷರ ನೇಮಕಗಳಾಗಿವೆ. ಅದರಲ್ಲಿ ಪ್ರಜಾಪ್ರಭುತ್ವ ್ರಿಯೆ ಎಲ್ಲಿದೆ ಎಂಬುದೇ ಪ್ರಶ್ನೆ. ಈಗ ಪ್ರಜಾ ಭುತ್ವ ರೀತಿಯಲ್ಲಿ ಕೆಲಸ ಮಾಡುವುದು ಎಂದರೆ ರೆಂಬ ಪ್ರಶ್ನೆ ಏಳುತ್ತದೆ. ಅದಕ್ಕೆ ಇಲ್ಲೊಂದು ದಾಹರಣೆ ಇದೆ. ಗಮನಿಸಿ.

ಮಂಡ್ಯ ಜಿಲ್ಲೆಯಲ್ಲಿ ಮಳವಳ್ಳಿ ಜನಪರ ುವಳಿಗಳ ದೃಷ್ಟಿಯಿಂದ ಒಂದು ಪ್ರಮುಖ ಂದ್ರ. ಈ ಪ್ರದೇಶದಲ್ಲಿ ಜಮೀನು ಂದಿರುವವರ ಹೊಲ ಗದ್ದೆಗಳಲ್ಲಿ ಕೂಲಿ ಾಡ ಬದುಕು ನಿರ್ವಹಿಸಬೇಕಾದ ಕೃಷಿ ಲಿಕಾರರು ಪ್ರಾಂತ ಕೃಷಿ ಕೂಲಿಕಾರರ ಘದ ನೇತೃತ್ವದಲ್ಲಿ ಸಂಘಟಿತರಾಗುತ್ತಾ ಬರುತ್ತಿದ್ದಾರೆ. ಕೂಲಿಕಾರರು ಸಂಘಟಿತರಾಗುವ ಕ್ರಮ ಏನು ? ಅವರ ಸಮಿತಿಗಳು, ಸಮಿತಿಗೆ ಪದಾಧಿಕಾರಿಗಳು ಆಯ್ಕೆಯಾಗುವ ಪ್ರಕ್ರಿಯೆ ಹೇಗಿದೆ ನೋಡಿ. ಮಳವಳ್ಳಿ ತಾಲ್ಲೂಕನ್ನು ಸಂಘಟನೆಯ ದೃಷ್ಟಿಯಿಂದ ಎರಡು ವಲಯವಾಗಿ ವಿಂಗಡಿಸಿಕೊಳ್ಳಲಾಗಿದೆ.

ಒಂದು ಹುಸ್ಕೂರು ವಲಯ. ಮತ್ತೊಂದು ತಳಗವಾದಿ ವಲಯ. ಮಳವಳ್ಳಿ ವಲಯದಲ್ಲಿ ಸಮ್ಮೇಳನ ನಡೆದ ಬಗೆ ನೋಡಿ.

ಈ ವಲಯ ವ್ಯಾಪ್ತಿಯ ಆರು ಗ್ರಾಮ ಪಂಚಾಯ್ತಿಗಳ ಅಡಿಯ 18 ಗ್ರಾಮಗಳಲ್ಲಿ ಗ್ರಾಮ ಸಮ್ಮೇಳನಗಳು ನಡೆದಿವೆ. ಗ್ರಾಮ ಸಮ್ಮೇಳನ ಎಂದರೆ ಆ ಗ್ರಾಮದಲ್ಲಿರುವ ಕೃಷಿ ಕೂಲಿಕಾರರ ಸಂಘದ ಸದಸ್ಯರು ಸೇರಿ ತಮ್ಮ ಗ್ರಾಮದ ಸಮಸ್ಯೆಗಳು ಹಾಗೂ ಕೂಲಿಕಾರರಾಗಿ ತಮ್ಮ ಬದುಕಿನ ಸಮಸ್ಯೆಗಳು ಅದಕ್ಕೆ ಕಾರಣವಾದ ನೀತಿಗಳು ಮತ್ತು ಪರಿಹಾರ, ಪರಿಹಾರ ಪಡೆಯಲು ಮಾಡಬೇಕಾದ ಹೋರಾಟ-ಸಂಘಟನೆಯನ್ನು ಬಲಪಡಿಸಬೇಕಾದ ರೀತಿ ಇತ್ಯಾದಿಗಳ ಕುರಿತು ಚರ್ಚಿಸಿ ಆ ಚರ್ಚೆಯ ಆಧಾರದಲ್ಲಿ ಸಂಘಟನೆಯ ಮುಂದಿನ ನಡೆಯ ಕುರಿತು ತೀರ್ಮಾನಿಸುವುದು. ತೀರ್ಮಾನಗಳ ಜಾರಿಗಾಗಿ ನೂತನ ಸಮಿತಿ ಆಯ್ಕೆ ಮಾಡುವುದು. ಸಮ್ಮೇಳನವು ಸಮಿತಿಯನ್ನು ಆಯ್ಕೆ ಮಾಡುತ್ತದೆ. ಸಮಿತಿಯು ತನ್ನೊಳಗೆ ನೂತನ ಪದಾಧಿಕಾರಗಳನ್ನು ಆಯ್ಕೆ ಮಾಡಿಕೊಳ್ಳುತ್ತದೆ. ವಲಯ ಸಮ್ಮೇಳನದಲ್ಲಿ ತಮ್ಮ ಗ್ರಾಮ ಘಟಕವನ್ನು ಯಾರು ಪ್ರತಿನಿಧಿಸಬೇಕೆಂದು ಸಹ ಸಮ್ಮೇಳನ ಪ್ರಜಾಸತ್ತಾತ್ಮಕವಾಗಿ ಆಯ್ಕೆಮಾಡುತ್ತದೆ. ಇಲ್ಲಿ 'ಪ್ರಜಾಸತ್ತಾತ್ಮಕ ಆಯ್ಕೆ' ಎಂದರೆ ಹಳೆಯ ಸಮಿತಿ ಸೂಚಿಸಿದ ಹೊಸ ಸಮಿತಿಗೆ ಸಮ್ಮೇಳನದಲ್ಲಿ ಸಹಮತ ಬರಬಹುದು. ಅಗತ್ಯವಿದ್ದರೆ ಚುನಾವಣೆ ನಡೆದು ಬಹುಮತದ ಆಧಾರದಲ್ಲಿ ನೂತನ ಸಮಿತಿಗೆ ಸದಸ್ಯರ ಆಯ್ಕೆ ಆಗಬಹುದು. ಇದು ಪ್ರಕ್ರಿಯೆ. ದಲಿತರು, ಅನಕ್ಷರಸ್ಥ ಮಹಿಳೆಯರು, ಬಡಬಗ್ಗರೇ ಹೆಚ್ಚಿನ ಸಂಖ್ಯೆಯಲ್ಲಿರುವ ಕೃಷಿ ಕೂಲಿಕಾರರ ಸಮ್ಮೇಳನವೇ ಈ ರೀತಿ ಪ್ರಜಾಸತ್ತಾತ್ಮಕ



ವಿಧಾನದಲ್ಲಿ ನಡೆಯಲು ಸಾಧ್ಯವಾದರೆ ದೇಶವನ್ನು ಮುನ್ನಡೆಸಬೇಕಾದ ರಾಜಕೀಯ ಪಕ್ಷಗಳಲ್ಲಿ ಪ್ರಜಾಪ್ರಭುತ್ವ ಪ್ರಕಿಯೆ ಯಾವ ರೀತಿಯ ನಡೆಯಬೇಕು? ನಾಗಪುರದಲ್ಲಿ ಕುಳಿತ ಆರೆಸ್ಸೆಸ್ ಮುಖಂಡರು ಬಿಜೆಪಿ ಪಕ್ಷದ ಆಧ್ಯಕ್ಷರು ಯಾರಾಗಬೇಕೆಂದು ನಿರ್ದೇಶಿಸುವುದೇನಿದೆ ?

ಗಂಗಾವತಿಯಲ್ಲಿ ನಡೆಯಲಿರುವ ರಾಜ್ಯ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ನಡೆಯುತ್ತಿರುವ ಜಿಲ್ಲಾ ತಾಲ್ಲೂಕು ಸಮ್ಮೇಳನಗಳ ಪ್ರಕ್ರಿಯೆಯ ಭಾಗವಾಗಿ ಈ ಈ ಮಳವಳ್ಳಿ ವಲಯ ಸಮ್ಮೇಳನವು ಜನವರಿ 11, 2013 ರಂದು ನೆಲ್ಲೂರು ಗ್ರಾಮದಲ್ಲಿ ನಡೆಯಿತು. ಉದ್ಯೋಗ ಖಾತ್ರಿ ಯೋಜನೆಯಲ್ಲಿನ ಅನ್ಯಾಯಗಳು, ತಮ್ಮ ಗ್ರಾಮಗಳಲ್ಲಿನ ರಸ್ತೆ, ಚರಂಡಿ, ಸ್ಮಶಾನ ಜಾಗದ ಸಮಸ್ಯೆ, ರೇಷನ್ ಸಮಸ್ಯೆ, ನಿವೇಶನ ರಹಿತರ ಸಮಸ್ಯೆ, ಭಾಗ್ಯಜ್ಯೋತಿ, ಕುಟಿರ ಜ್ಯೋತಿ ಯೋಜನೆ ಪ್ರಯೋಜನ ಬಡವರಿಗೆ ದಕ್ಕಬೇಕಾದ ಬಗ್ಗೆ, ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ನೀಡದ ಪ್ರಶ್ನೆ, ಬರ ಆವರಿಸಿಕೊಂಡಿರುವ ಈ ಸಮಯದಲ್ಲಿ ರೈತರ ಸಂಕಷ್ಟಗಳು, ಕಬ್ಬಿಗೆ ವೈಜ್ಞಾನಿಕ ಬೆಲೆ ನೀಡದ ಸರ್ಕಾರದ ರೈತ ವಿರೋಧಿ ಧೋರಣೆ, ಪಂಪ್‌ಸೆಟ್‌ಗೆ ಉಚಿತ ವಿದ್ಯುತ್ ದೊರಕಬೇಕಾದ ವಿಷಯ ಇತ್ಯಾದಿ ಸಮಸ್ಯೆಗಳ ಕುರಿತು ಸಮ್ಮೇಳನವು ಚರ್ಚಿಸಿತು.

ಸಂಘಟನೆಯ ರಾಜ್ಯ ಉಪಾಧ್ಯಕ್ಷರಾದ ಜಿ.ಎನ್. ನಾಗರಾಜ್ ಅವರು ಸಮ್ಮೇಳನವನ್ನು ಉದ್ಘಾಟಿಸಿದರು. ಸಂಘದ ಜಿಲ್ಲಾ ಅಧ್ಯಕ್ಷರಾದ ಎಂ. ಪುಟ್ಟಮಾದು, ಜಿಲ್ಲಾ ಕಾರ್ಯದರ್ಶಿ ಕೆ.ಬಸವರಾಜು, ಬಿ.ಎಂ.ಶಿವಮಲ್ಲಯ್ಯ, ಲಿಂಗರಾಜು ಸಿಐಟಿಯು ಮುಖಂಡರಾದ ಮಹದೇವಮ್ಮ ಅತಿಥಿಗಳಾಗಿ ಭಾಗವಹಿಸಿ ದ್ದರು. ಕೆ.ಎಚ್. ಪುಟ್ಟಮಾದೇಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಕೆ. ಹೆಚ್. ಹನುಮೇಗೌಡ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಸಣ್ಣಯ್ಯ ಧ್ವಜಾರೋಹಣ ನೆರವೇರಿಸಿದರೆ ಕೃಷ್ಣ ನಿರೂಪಿಸಿದರು. ತಳಗವಾದಿ ವಲಯ ಸಮಿತಿಗೆ 17 ಜನರ ಸಮಿತಿಯನ್ನು ಸಮ್ಮೇಳನ ಆಯ್ಕೆ ಮಾಡಿತು. ಸಮಿತಿಯ ಆಧ್ಯಕ್ಷರಾಗಿ ಕೆ.ಎಚ್. ಪುಟ್ಟಮಾದೇಗೌಡ, ಕಾರ್ಯದರ್ಶಿಯಾಗಿ ಕೆ. ಹನುಮೇಗೌಡ ಅವರನ್ನು ಮತ್ತು ಇತರ ಪದಾಧಿಕಾರಿಗಳನ್ನು ನೂತನ ಸಮಿತಿ ತನ್ನೊಳಗೇ ಆಯ್ಕೆ ಮಾಡಿಕೊಂಡಿದೆ. ನಾಗಪುರದಿಂದಾಗಲಿ, ದೆಹಲಿಯ ಜನಪಥ್ 10 ರಿಂದಾಗಲಿ ಯಾವ ಸಂದೇಶವೂ, ಲಕೋಟೆ ಪತ್ರವೂ ಇಲ್ಲಿಗೆ ಬಂದಿಲ್ಲ.

....ಶ್ರಮ ಜೀವಿಗಳೇ, ತಲೆ ಬಾಗುವೆನು"

ಟ 8 ರಿಂದ

ಕಾಶ ಸಿಗಲಿಲ್ಲ. ಅವರು ದೀರ್ಘ ಕಾಲ ುತ್ರಗಳಂತೆ ಬುದ್ಧಿವಂತರ ಸಲಹೆ ಪಡೆದು ಸ ಮಾಡುತ್ತಾ ಬಂದಿದ್ದಾರೆ. ಜಾಣ ್ಯಾವಂತ ವಿಭಾಗ ಅವರ ಶ್ರಮದ ಬಹು ಗವನ್ನು ತೆಗೆದು ಕೊಂಡಿದ್ದಾರೆ. ಇದು ಎಲ್ಲ ಶಗಳ ಕಥೆಯಾಗಿದೆ. ಆದರೆ ಕಾಲ ಲಾಗಿದೆ. ಕೆಳ ವರ್ಗಗಳು ಇದನ್ನು ನವಾಗಿ ಅರಿತು ಕೊಳ್ಳುತ್ತಿದ್ದಾರೆ. ತಮ್ಮೆ ಂತವಾದ ಪಾಲು ಪಡೆಯಲು ಚ್ಚುಗುತ್ತಿದ್ದಾರೆ."

"ಯುರೋಪಿನ, ಅಮೆರಿಕೆಯ ಜನ ು ಮೊದಲು ಎಚ್ಚರಗೊಂಡಿದ್ದಾರೆ ಮತ್ತು ಹೋರಾಟ ಮಾಡಲು ಆರಂಭಿಸಿದ್ದಾರೆ. **ಭಾರತದಲ್ಲಿಯೂ ಇಂತಹ ಎಚ್ಚರದ ಸೂಚನೆಗಳು ಕಾಣತೊಡಗಿವೆ. ಇತ್ತೀಚೆಗೆ ಕೆಳ ವರ್ಗಗಳು ಕೈಗೊಂಡ ಮುಷ್ಕರಗಳೇ ಇದಕ್ಕೆ ಸಾಕ್ಷಿ. ಅವರು ಎಷ್ಟೇ ಪ್ರಯತ್ನ ಮಾಡಿದರೂ ಮೇಲ್ವರ್ಗಗಳು ಇನ್ನು ಮುಂದೆ ಕೆಳ ವರ್ಗಗಳನ್ನು ಅದುಮಿಡಲಾರವು."**

ಮುಷ್ಕರದ ಬಗ್ಗೆ ಹೀಗಳೆದು ಮಾತನಾಡುವವರೇ ಎಲ್ಲ ಕಡೆ ಕಾಣುವಾಗ ವಿವೇಕಾನಂದರು ದುಡಿಯುವ ಜನರ ಮಹತ್ವವನ್ನು ಹೇಳಲು ಮುಷ್ಕರದ ಉದಾಹರಣೆಯನ್ನು ಬಳಸುತ್ತಾರೆ. ಯಾವುದೇ ರೀತಿ ವ್ಯಂಗ್ಯವಿಲ್ಲದೆ. ಭಾರತದಲ್ಲಿ ಮುಷ್ಕರಗಳು ಹೆಚ್ಚುತ್ತಿರುವ ಬಗ್ಗೆ ಕೂಡ ದುಡಿಯುವ ಜನರ ಎಚ್ಚರದ ಕುರುಹು ಎಂದು ಅವರು ಭಾವಿಸುವುದು ಕೂಡ ವಿಶೇಷವೇ. ಅಮೇರಿಕೆ ಹಾಗೂ ಯುರೋಪಿನಲ್ಲಿ ಅವರು ಪ್ರವಾಸ ಮಾಡಿದಾಗ ಅವರು ಯಾವುದೇ ಮಾರ್ಕ್ಸ್‌ವಾದಿಗಳನ್ನು ಭೇಟಿ ಮಾಡಿದ ಅಥವಾ ಅವರ ಸಂಪರ್ಕಕ್ಕೆ ಬಂದ ಪ್ರಸಂಗವಿಲ್ಲ. ಆದರೆ ಅಮೆರಿಕದ ಸ್ವಾತಂತ್ರ್ಯ ಹೋರಾಟ, ಫ್ರೆಂಚ್ ಕ್ರಾಂತಿ, ಅಮೆರಿಕದಲ್ಲಿ ಗುಲಾಮಗಿರಿಯ ವಿರುದ್ಧದ ಅಂತರ್ಯುದ್ಧದ ಬಗ್ಗೆ ತಿಳುವಳಿಕೆ ಅವರನ್ನು ಪ್ರಭಾವಿಸಿತು. ಅಮೆರಿಕದಲ್ಲಿ ಅವರನ್ನು ನೀಗ್ರೋ ಎಂದು ಭಾವಿಸಿ ಹಲವೆಡೆ ತಿರಸ್ಕಾರ ಮಾಡಿದ್ದು ಅವರಿಗೆ ಆ ಕೆಳ ವರ್ಗದ ಜನರು ಅನುಭವಿಸುವ ಅವಮಾನ, ತಿರಸ್ಕಾರಗಳ ನೇರ ಪರಿಚಯ ಮಾಡಿಸಿತು. ಮತ್ತೆ ಇದೇ ಸಮಯದಲ್ಲಿ ಯುರೋಪಿನಲ್ಲಿ ಶಿಕ್ಷಣ ಪಡೆದ, ದಕ್ಷಿಣ ಆಫ್ರಿಕಾದಲ್ಲಿ ಅಲ್ಲಿಯ ಕಪ್ಪು ಜನರ ಮೇಲಿನ ದೌರ್ಜನ್ಯವನ್ನು ಮತ್ತಷ್ಟು ತೀಕ್ಷ್ಣವಾಗಿ ಅನುಭವಿಸಿದ ಗಾಂಧೀಜಿಯವರ ಉದಾಹರಣೆ ಅವರು ಕಾರ್ಮಿಕರ ಬಗ್ಗೆ, ಅವರ ಜೀವನ, ಹೋರಾಟಗಳು, ಮುಷ್ಕರಗಳ ಬಗ್ಗೆ ತಳೆದ ವಿರೋಧೀ ದೃಷ್ಟಿಕೊನ ಮತ್ತೆ ನೆನಪಿಗೆ ಬರುತ್ತದೆ.

ವಿವೇಕಾನಂದರೇನೂ ಒಬ್ಬ ರಾಜಕೀಯ ವ್ಯಕ್ತಿಯಲ್ಲ. ಒಬ್ಬ ಸಾಮಾಜಿಕ ವ್ಯಕ್ತಿಯೂ ಅಲ್ಲ. ಒಬ್ಬ ಧಾರ್ಮಿಕ ಸನ್ಯಾಸಿ. ಆದರೂ ಅವರು ತಳೆದ ಸಾಮಾನ್ಯ ಜನರ ಪರ ನಿಲುವು, ಅದರಲ್ಲಿಯೂ ದುಡಿಯುವ ಜನರ ಪರವಾದ ಪ್ರಖರ ಹಾಗೂ ಧೃಡ ವಿಚಾರ ಪ್ರಣಾಲಿ ಯಾರಿಗಾದರೂ ಅಚ್ಚರಿ ತರುವಂತಹದು.

ಭಾರತದ ದುಡಿಯುವ ಜನರು ಎಚ್ಚರಾಗಲಿ. ಮೇಲ್ವರ್ಗಗಳು ಇನ್ನು ಮುಂದೆ ಕೆಳವರ್ಗಗಳನ್ನು ಅದುಮಿಡಲಾರವು ಎಂಬ ಅವರ ಭರವಸೆಯ ನುಡಿ ನಿಜವಾಗಲಿ.

JANASHAKTHI KANNADA VARA PATRIKE FEB 03, 2013 Price : **Rs. 10/-** RNI No. KARKAN /2006/17926 Posted on every Satuarda
Postal Reg. No. RNP/KA/BGS/2078/2013-15 Posted at MBC Bangalore GP

"ನಿರಂತರ ತುಳಿತಕ್ಕೊಳಗಾದ ಭಾರತದ ಶ್ರಮ ಜೀವಿಗಳೇ, ನಿಮಗೆ ತಲೆ ಬಾಗುವೆನು"

ವಿವೇಕಾನಂದ

ಫೆಬ್ರವರಿ 20–21, ಭಾರತದ ಕಾರ್ಮಿಕ ವರ್ಗ ನಮ್ಮ ದೇಶ ಇಲ್ಲಿಯವರೆಗೆ ಕಂಡರಿಯದಂತಹ ಒಂದು ಮಹಾ ಹೋರಾಟಕ್ಕೆ ಸಜ್ಜಾಗುತ್ತಿದೆ. ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರು ಹಾಗೂ ಅವರಲ್ಲಿ ಅಪಾರ ಗೌರವವಿಟ್ಟ, ಕನ್ನಡದ ಹೆಮ್ಮೆಯ ಕವಿ ಕುವೆಂಪುರವರು ಕಾರ್ಮಿಕ ವರ್ಗದ ಬಗ್ಗೆ, ಅವರ ಮುಷ್ಕರಗಳ ಬಗ್ಗೆ ಆಡಿದ ಮಾತುಗಳನ್ನು ನೆನೆಸಿಕೊಳ್ಳುವುದು ನಮಗೆಲ್ಲರಿಗೂ ಸ್ಫೂರ್ತಿಯನ್ನು ತುಂಬುತ್ತವೆ.

ಜಿ.ಎನ್. ನಾಗರಾಜ್

ಸ್ವಾಮಿ ವಿವೇಕಾನಂದರು ಶ್ರಮ ಜೀವಿಗಳ ಬಗ್ಗೆ, ಅವರ ನಿಸ್ವಾರ್ಥ ದುಡಿಮೆಯ ಬಗ್ಗೆ, ಸಮಾಜದಲ್ಲಿ ಅವರ ಪಾತ್ರದ ಬಗ್ಗೆ, ಅವರ ದೀನ ಸ್ಥಿತಿಯ ಬಗ್ಗೆ ಎಣೆಯಿಲ್ಲದ ಗೌರವದಿಂದ ಹಲವು ಬಾರಿ ಮಾತಾಡಿದ್ದಾರೆ. ಅವರ ಬಗ್ಗೆ ಕೀಳು ಮಾತನ್ನಾಡಿದಾಗ, ಅಂತಹ ಪ್ರಶ್ನೆಗಳನ್ನು ಕೇಳಿದಾಗ ಅವರ ಮನೋಭಾವವನ್ನು ಖಂಡಿಸಿ ಗುಡುಗಿದ್ದಾರೆ. ದೇದೀಪ್ಯಮಾನವಾದ ಅವರ ಮಾತಿನ ಹೊಳಪನ್ನು ಸವಿಯೋಣ ಬನ್ನಿ.

" ಓ, ಭರತಖಂಡದ ಶ್ರಮಜೀವಿಗಳೇ, ನಿಮ್ಮ ಮೌನವಾದ ದುಡಿತದಿಂದ ಬ್ಯಾಬಿಲೋನಿಯಾ, ಪರ್ಶಿಯಾ, ಅಲೆಕ್ಸಾಂಡ್ರಿಯಾ, ಗ್ರೀಸ್, ರೋಮ್, ವೆನಿಸ್, ಜಿನೇವಾ, ಬಾಗ್ದಾದ್, ಸಮರ್ ಖಂಡ್, ಸ್ಪೇನ್, ಪೋರ್ಚುಗಲ್, ಫ್ರಾನ್ಸ್, ಡೆನ್‌ಮಾರ್ಕ್, ಹಾಲೆಂಡ್, ಇಂಗ್ಲೆಂಡ್ ಇವುಗಳೆಲ್ಲ ಪ್ರವರ್ಧಮಾನಕ್ಕೆ ಬಂದವು, ಮೇಲುಗೈ ಸಾಧಿಸಿದುವು. ಆದರೆ ನೀವು– ಯಾರು ನಿಮ್ಮ ಬಗ್ಗೆ ಚಿಂತೆ ಮಾಡುವ ಶ್ರಮ ತೆಗೆದು ಕೊಳ್ಳುತ್ತಾರೆ.

ನನ್ನ ಪ್ರೀತಿಯ ಸ್ವಾಮಿ, ನಿಮ್ಮ ಪೂರ್ವಜರು ಕೆಲ ತಾತ್ವಿಕ ಗ್ರಂಥಗಳನ್ನು ರಚಿಸಿದ್ದಾರೆ. ಒಂದು ಡಜನ್ ಕಾವ್ಯಗಳನ್ನು ಬರೆದಿರಬಹುದು ಅಥವಾ ಕೆಲ ದೇವಸ್ಥಾನಗಳನ್ನು ನಿರ್ಮಿಸಿರಬಹುದು. ಅಷ್ಟೇ! ಅಷ್ಟಕ್ಕೇ ನೀವು ಗಗನವೆಲ್ಲಾ ತುಂಬಿ ಹೋಗುವಂತೆ ವಿಜಯೋತ್ಸಾಹದ ಕೇಕೆ ಹಾಕುತ್ತೀರಿ: ಆದರೆ ತಮ್ಮ ಹೃದಯದ ರಕ್ತವನ್ನು ಧಾರೆಯೆರೆದು ವಿಶ್ವದ ಪ್ರಗತಿಗೆ ಕಾರಣರಾಗಿದ್ದಾರೋ ಅವರನ್ನು ಯಾರು ಹೊಗಳುವರು ?"

ವಿವೇಕಾನಂದರ ಕಣ್ಣುಗಳಲ್ಲಿ ಶ್ರಮ ಹೊಸ ಆಯಾಮವನ್ನು ಪಡೆದುಕೊಂಡಿತು. ನಮ್ಮ ದೇಶದಲ್ಲಿ ವಿವೇಕಾನಂದರ ಮರಣದ ಎರಡು ದಶಕಗಳ ನಂತರ ಉದಯವಾದ ಕಮ್ಯೂನಿಸ್ಟ್ ಚಳುವಳಿಯ ನಾಯಕರನ್ನು ಹೊರತುಪಡಿಸಿದರೆ ಇಷ್ಟು ಸ್ಪಷ್ಟವಾಗಿ ದುಡಿಯುವ ವರ್ಗದ ಪಾತ್ರದ ಬಗ್ಗೆ ವಿಶ್ಲೇಷಣೆ ಮಾಡಿದವರು ಯಾರೂ ಇಲ್ಲವೆಂದೇ ಹೇಳಬಹುದು. ಇನ್ನು 1890 ರ ದಶಕದ ಕೊನೆಯ ಸಮಯದಲ್ಲಂತೂ ಭಾರತದಲ್ಲಿ ಈ ಅರಿವು ವಿವೇಕಾನಂದರಿಗೇ ವಿಶಿಷ್ಟವಾದದ್ದು. ಅವರು ಮುಂದೆ ಹೇಳುವುದನ್ನು ಕೇಳಿ.

"ನಮ್ಮ ಶ್ರಮಿಕರು ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ......ಇದರಲ್ಲಿ ಯಾವ 'ಹಿರೋ'ತನವೂ ಇಲ್ಲವೇ ? ಸಾವಿರಾರು ಮಂದಿ ಬೊಬ್ಬೆ ಹಾಕುತ್ತಾ ಹುರಿದುಂಬಿಸುತ್ತಿರುವಾಗ ಎಂತಹ ಹೇಡಿಯೂ ತನ್ನ ಪ್ರಾಣವನ್ನು ತ್ಯಾಗ ಮಾಡಲು ಹಿಂದೆ ಮುಂದೆ ನೋಡುವುದಿಲ್ಲ. ಅತೀ ಸ್ವಾರ್ಥಿಯೂ ನಿಸ್ವಾರ್ಥಿಯಂತೆ ವರ್ತಿಸುತ್ತಾನೆ. ಆದರೆ ಯಾರೂ ನೋಡದಿರುವಾಗಲೂ, ಸಣ್ಣ ಪುಟ್ಟ ಕೆಲಸಗಳಲ್ಲಿಯೂ, ಅದೇ ನಿಸ್ವಾರ್ಥತೆಯಿಂದ, ನಿಷ್ಠೆಯಿಂದ ಯಾರು ಕೆಲಸ ಮಾಡುತ್ತಾರೋ ಅವರೇ ಧನ್ಯರು. ನೀವು ಅದನ್ನು ಮಾಡುತಿದ್ದೀರಿ. **ಓ ಭಾರತದ ಶ್ರಮಜೀವಿಗಳೇ ನಾನು ನಿಮಗೆ ತಲೆಬಾಗುವೆನು.**

ಇಂತಹ ಅಮೋಘವಾದ ಗೌರವ ಶ್ರಮಜೀವಿಗಳಿಗೆ ಎಷ್ಟು ಜನರಿಂದ ಸಿಕ್ಕಿದೆ? ಮತ್ತೆ ಅವರ ಮಾತುಗಳನ್ನು ಕೇಳಿ.

" ಭಾರತದ ಕೆಳ ವರ್ಗದವರು, ಕೂಲಿಗಳು, ನೇಕಾರರು ಇವರು ಹೊರಗಿನಿಂದ ಬಂದ ಜನರ ಮನಸ್ಸನ್ನು ಗೆದ್ದಿದ್ದಾರೆ. ಆದರೆ ಇಲ್ಲಿರುವ ಜನ ಅವರನ್ನು ಕೀಳಾಗಿ ಕಾಣುತ್ತಾರೆ. ಅವರ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗುವುದಿಲ್ಲ. ರೈತ, ಚಮ್ಮಾರ, ಜಾಡಮಾಲಿ ಮತ್ತಿತರ ಶ್ರಮಿಕರು ನಿಮಗಿಂತ ಹೆಚ್ಚು ಕೆಲಸ ಮಾಡುವ ಸಾಮರ್ಥ್ಯ ಇದೆ. ನಿಮಗಿಂತ ಹೆಚ್ಚು ಸ್ವಾವಲಂಬಿಗಳು. ಅವರು ಮೌನವಾಗಿ ಸಾವಿರಾರು ವರ್ಷಗಳಿಂದ ದೂರುಗಳನ್ನು ಹೇಳಿಕೊಳ್ಳದೆ ಕೆಲಸ ಮಾಡುತ್ತಾ ಬಂದಿದ್ದಾರೆ. ಈ ದೇಶದೆಲ್ಲಾ ಐಶ್ವರ್ಯವನ್ನೂ ಸೃಷ್ಟಿಸುತ್ತಾ ಬಂದಿದ್ದಾರೆ. ಅತಿ ಶೀಘ್ರದಲ್ಲಿಯೇ ಅವರು ನಿಮಗಿಂತ ಮೇಲಿನ ಸ್ಥಾನ ಪಡೆಯುತ್ತಾರೆ. ನೀವು ಬಹಳ ಕಾಲದಿಂದ ಎಲ್ಲವನ್ನೂ ತಾಳಿಕೊಂಡು ಬಂದ ಈ ಜನ ಸಮುದಾಯವನ್ನು ದಮನ ಮಾಡುತ್ತಾ ಬಂದಿದ್ದೀರಿ. ಅದಕ್ಕೆ ಪ್ರತಿಕಾರ ಮಾಡುವ ಕಾಲ ಈಗ ಬಂದಿದೆ."

ಭಾರತೀಯ ಸಮಾಜದ ಬಗೆಗಿನ ಈ ವಿಶ್ಲೇಷಣೆಯನ್ನು ಇನ್ನೂ ಪ್ರಬಲವಾಗಿ ಮುಂದುವರೆಸುತ್ತಾ ವಿವೇಕಾನಂದರು ಘಂಟಾಘೋಷವಾಗಿ ಈ ರೀತಿ ಸಾರಿದ್ದಾರೆ:

" ಶ್ರೀಮಂತರು.....ದೇಶಕ್ಕೆ ಕೇವಲ ಆಭರಣಗಳಷ್ಟೇ, ಅಲಂಕಾರಗಳಷ್ಟೇ. ಕೋಟ್ಯಾಂತರ ಬಡ ಕೆಳ ವರ್ಗದ ಜನರೇ ದೇಶದ ಜೀವಾಳ."

" ಭಾರತಕ್ಕಿರುವ ಏಕೈಕ ಆಶಾ ಕಿರಣ ಅದರ ಸಾಮಾನ್ಯ ಜನ ಸಮೂಹ. ಮೇಲ್ವರ್ಗದ ಜನರು ದೈಹಿಕವಾಗಿ, ನೈತಿಕವಾಗಿ



ಸತ್ತು ಹೋಗಿದ್ದಾರೆ."

ಭಾರತದ ಸಮಾಜದ ಬಗ್ಗೆ ಇಂ
ಆಳವಾದ ಮತ್ತು ಸರಿಯಾದ ತಿಳುವಳಿಕೆ
ಮೂಲವೇನು ? ಅದೂ ಕೂಡ 1890
ಆ ಕಾಲದಲ್ಲಿ, ರಷ್ಯಾದಲ್ಲಿ ಇನ್ನೂ ಕ್ರಾಂ
ಸಂಭವಿಸದ, ಭಾರತದಲ್ಲಿ ಮಾರ್ಕ್ಸ್‌ವಾ
ಚಿಂತನೆಯ ಸುಳುಹೂ ಇಲ್ಲದ ಕಾಲದ
ಈ ಪ್ರಶ್ನೆ ಏಳುವುದು ಸಹಜ. ವಿವೇಕಾನಂ
ಜೀವನ ಚರಿತ್ರೆಯನ್ನು ಅಭ್ಯಾಸ ಮಾಡಿದ
ಇದಕ್ಕೆ ಉತ್ತರ ಸಿಗುತ್ತದೆ. ರಾಮಕೃ
ಪರಮಹಂಸರು ತೀರಿಕೊಂಡ ನಂತ
ಮೂರು ವರ್ಷಗಳ ಕಾಲ ವಿವೇಕಾನಂದ
ಇಡೀ ಭಾರತವನ್ನು ಸುತ್ತಾಡಿದರು. ಆಗ ರಾ
ಮಹಲುಗಳಲ್ಲಂತೋ ಅಂತೆಯೆ
ಗುಡಿಸಲುಗಳಲ್ಲಿ ಕೂಡ ವಾಸ ಮಾಡಿದರ
ದುಡಿಯುವ ಜನರ ಜೊತೆ ಅವರದೇ ಊ
ಮಾಡುತ್ತಾ ಅವರ ಜೀವನದ ಬ
ತಿಳಿದುಕೊಂಡರು. ಅವರು ರಾ
ನವಾಬರುಗಳ ಅರಮನೆಗಳಲ್ಲಿ ಅವ
ಸುಖಲೋಲುಪ ಜೀವನದ ಬಗ್ಗೆ, ಅವ
ಆಸ್ಥಾನಗಳಲ್ಲಿ ಮೆರೆಯುತ್ತಿದ್ದ ಘನ ವಿದ್ವಾಂಸ
ಠೊಳ್ಳುತನದ ಬಗ್ಗೆ ಕೂಡ ಅವರಿಗೆ ಹತ್ತಿರ
ಪರಿಚಯವಾಯಿತು. ತಮಗೆ ಆದ ಅರಿವನ
ಯಾವ ಮುಲಾಜುಗಳಿಗೆ ಒಳಗಾಗ
ಕಟುವಾಗಿ ಹೇಳುವ ಛಾತಿಯೂ ಅವರಿಗಿ
ಆದರೆ ಇಂತಹದೇ ಸುತ್ತಾಟಗಳನ್ನು ನಡೆಸಿ
ಇತರರಿಗೆ, ಉದಾಹರಣೆಗೆ ಮಹಾ
ಗಾಂಧೀಜಿಯವರಿಗೆ ಇಂತಹ
ಜ್ಞಾನೋದಯವಾಗಲಿಲ್ಲವೇಕೆ ? ದುಡಿಯು
ವರ್ಗದ ದೃಷ್ಟಿಯಿಂದಲೂ ವಿವೇಕಾನಂದ
ಮಹತ್ವ ಇರುವುದು ಈ ಕಾರಣಕ್ಕಾಗಿಯೆ
ಮುಷ್ಕರಗಳ ಬಗ್ಗೆ–ಶ್ರಮಿಕರ ಎಚ್ಚರದ ಬಗ್ಗೆ

"ಅವರು ಕೆಲ ಪುಸ್ತಕಗಳನ್ನು
ಓದದಿದ್ದರೇನಾಯಿತು. ಕೆಳವರ್ಗಗಳೇ ಎ
ದೇಶಗಳ ಬೆನ್ನು ಮೂಳೆ. ಕೆಳ ವರ್ಗಗ
ಕೆಲಸ ಮಾಡುವುದನ್ನು ನಿಲ್ಲಿಸಿದರೆ ನಿಮ
ಆಹಾರ, ಬಟ್ಟೆ ಎಲ್ಲಿಂದ ಸಿಗುತ್ತ
ಕಲಕತ್ತಾದ ಜಾಡಮಾಲಿಗಳು ಒಂದು ದಿ
ಕೆಲಸ ಮಾಡುವುದನ್ನು ನಿಲ್ಲಿಸಿದರೂ ಕೂ
ಆತಂಕವನ್ನುಂಟು ಮಾಡುತ್ತದೆ. ಇ
ಅವರು ಮೂರು ದಿನ ಮುಷ್ಕರ ಮಾಡಿ
ಇಡೀ ನಗರ ಸಾಂಕ್ರಾಮಿಕ ರೋಗಗ
ತುತ್ತಾಗಿ ನಗರ ಹಾ
ಸುರಿಯುವಂತಾಗುತ್ತದೆ. ಹೀಗಿರುವಾ
ನೀವು ಅವರನ್ನು ಕೆಳ ವರ್ಗದವರೆಂ
ಕರೆಯುತ್ತೀರಿ. ನಿಮ್ಮ ಸಂಸ್ಕೃತಿವಂತಿಕೆ
ಬಗ್ಗೆ ಕೊಚ್ಚಿಕೊಳ್ಳುತ್ತೀರಿ." " ಜೀವನ
ಹೋರಾಟದಲ್ಲಿ ಮುಳುಗಿ ಹೋಗಿ ಅರಿ
ಮೂಡಿಸುವ ಎಚ್ಚರ ಪಡೆಯಲು ಅವರ

ಪುಟ 15

JANASHAKTHI KANNADA VARA PATRIKE: Printed by **G.N.NAGARAJ,** No.12, 18th Cross, S.R.Nagar, BANGALORE-560027
Published by: **G.N.NAGARAJ,** No 12. 18th Cross, S.R.Nagar, BANGALORE-560027, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** 12, 18th Cross, S.R.Nagar, BANGALORE - 560027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor **S.Y.GURURSHANTH,** No12. 18th Cross, S.R.Nagar, BANGALORE - 560027
Editor : **S.Y.GURUSHANTH**